ಎಕ್ಸೆಲ್
ಪಬ್ಲಿಕ್ ಸ್ಕೂಲ್



# ಸಿರಿಗನ್ನಡ – ನಮ್ಮ ಕನ್ನಡ

ದಿನಾಂಕ 1.11.2025ನೆ ಶನಿವಾರದಂದು, ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಯನ್ನು "ಸಿರಿಗನ್ನಡ - ನಮ್ಮ ಕನ್ನಡ" ಎಂಬ ಶೀರ್ಷಿಕೆಯಡಿ ವೈವಿಧ್ಯಮಯವಾಗಿ, ವರ್ಣಮಯವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸುಂದರ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಾಹಿತಿಗಳೂ, ಸಂಶೋಧಕರೂ ಆದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರು ಆಗಮಿಸಿದ್ದರು. ನಮ್ಮ ಶಾಲೆಯ ಆಡಳಿತಾಧಿಕಾರಿಗಳಾದ ಕರ್ನಲ್ ಬಿ ಎನ್ ಚೇತನ್ ಅವರು, ಪ್ರಾಂಶುಪಾಲರಾದ ಶ್ರೀಯುತ ಮ್ಯಾಥ್ಯೂ ಕೆ ಜಿ ಅವರು ಹಾಗೂ ಸಂಪರ್ಕ ಅಧಿಕಾರಿಗಳಾದ ಶ್ರೀಯುತ ಪ್ರಶಾಂತ್ ಎಚ್ ಎಮ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ಗೀತಾ ಹೆಚ್ ಆರ್ ಅವರು ನಡೆಸಿಕೊಟ್ಟರು. ಶ್ರಿಯುತ ನಾಗೇಶ ಬಿ ಅವರು ನೆರೆದ ಜನಸ್ತೋಮವನ್ನು ಸ್ವಾಗತಿಸಿದರು. ಕುಮಾರಿ ಅವನಿ ಭಾರದ್ವಾಜ್ ಹಾಗೂ ಕುಮಾರಿ ಅನ್ವಿತಾ ದೇಚಮ್ಮ ಕನ್ನಡ ನಾಡು ನುಡಿ ಸಂಸ್ಕೃತಿಯ ಮಹತ್ವವನ್ನು ಕುರಿತು ಸಂಭಾಷಣೆಯ ರೂಪದಲ್ಲಿ ತಮ್ಮ ಭಾಷಣವನ್ನು ಪ್ರಸ್ತುತಪಡಿಸಿದರು. ಶ್ರೀಮತಿ ಸುಜಾತ ಎಚ್ ಎಂ ಅವರು ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಟ್ಟರು. ಮುಖ್ಯ ಅತಿಥಿಗಳಾದ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಅವರು ಕನ್ನಡ ಭಾಷೆಯ ಸರಿ ಬಳಕೆಯ ಮಹತ್ವವನ್ನು ನೆರೆದವರ ಮನಮುಟ್ಟುವಂತೆ ತಿಳಿ ಹೇಳಿದರು. ಅದರೊಟ್ಟಿಗೆ ಮಕ್ಕಳಿಗೆ ಕನ್ನಡ ಮಾತನಾಡಲು ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆಯ ಅರಿವು ಮೂಡುವಂತೆ ಮಾತನಾಡಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಸಭಾ ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ಸುಮಿತ್ರ ಕೆ ಬಿ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು.

ಸಭಾ ಕಾರ್ಯಕ್ರಮದ ತರುವಾಯ, ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಯಿತು. "ಸಿರಿಗನ್ನಡ - ನಮ್ಮ ಕನ್ನಡ" ಎಂಬುದನ್ನು ಮುಖ್ಯ ವಿಷಯವಾಗಿ ಇಟ್ಟುಕೊಂಡು ಭರತನಾಟ್ಯ, ಸಮೂಹ ಗಾಯನ, ಜಾನಪದ ನೃತ್ಯಗಳು, ಕನ್ನಡ ಸಿನಿಮಾ ಹಾಡುಗಳಿಗೆ ನೃತ್ಯಗಳು ಹಾಗೂ ಎಚ್ ಎಸ್ ವೆಂಕಟೇಶಮೂರ್ತಿಯವರ ಕೃತಿ 'ಕಂಸಾಯಣ' ಎಂಬ ನಾಟಕದ ಒಂದು ಭಾಗವಾದ ಬಿಲ್ಲಹಬ್ಬವನ್ನು ನಾಟಕಾಭಿನಯ ಮಾಡಿದರು. ಸಾಂಸ್ಕೃತಿಕ ಕಾರ್ಯಕ್ರಮವನ್ನು ನೋಡಿದ ಕಣ್ಣುಗಳಿಗೆ ರಸದೌತಣವೆನಿಸಿತು. ಶಾಲೆಯ ಆವರಣದಲ್ಲೆಲ್ಲ ಕನ್ನಡವೇ ತುಂಬಿತುಳುಕಿ 2025ರ ಕನ್ನಡ ರಾಜ್ಯೋತ್ಸವವು ಅತ್ಯಂತ ವೈಭವಯುತವಾಗಿ ಸಂಪನ್ನಗೊಂಡಿತು.





ಮುಖ್ಯ ಅತಿಥಿಗಳ ಭಾಷಣ

## ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಹಿರಿಯ ಸಾಹಿತಿ ಮತ್ತು ಸಂಶೋಧಕರು

ಎಲ್ಲರಿಗೂ ನಮಸ್ಕಾರ, ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು. ವೇದಿಕೆಯ ಮೇಲೆ ಆಸೀನರಾಗಿರುವಂತಹ ಮಾನ್ಯ ಈ ಸಂಸ್ಥೆಯ ಸಂಪರ್ಕಾಧಿಕಾರಿಗಳಾದ ಶ್ರೀಯುತ ಎಚ್ ಎಂ ಪ್ರಶಾಂತ್‌ರವರೆ, ಸನ್ಮಾನ್ಯ ಪ್ರಾಂಶುಪಾಲರಾದ ಮ್ಯಾಥ್ಯೂ ಕೆ ಜಿ ಅವರೆ, ಸನ್ಮಾನ್ಯ ಆಡಳಿತಾಧಿಕಾರಿಗಳಾದ ಕರ್ನಲ್ ಬಿ ಎನ್ ಚೇತನ್ ಅವರೆ, ಈ ಸಂಸ್ಥೆಯ ಆಡಳಿತ ಮಂಡಳಿಯ ಎಲ್ಲಾ ಸದಸ್ಯರೆ, ಪೋಷಕ ಬಂಧುಗಳೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ, ಇಂದು ಕನ್ನಡ ರಾಜ್ಯೋತ್ಸವದ ಸುದಿನ. ಭಾರತೀಯ ಸಂಸ್ಕೃತಿಯನ್ನ ಕನ್ನಡ ರಾಜ್ಯೋತ್ಸವದ ಮೂಲಕ ನಾವು ನಮ್ಮ ಮನಸ್ಸಿಗೆ ತಂದುಕೊಳ್ಳುತ್ತಾ ಇದ್ದೇವೆ. ಭಾರತೀಯತೆ ಬೇರೆ ಅಲ್ಲ, ಕನ್ನಡತನ ಬೇರೆ ಅಲ್ಲ.

ಒಬ್ಬರು ಕನ್ನಡ ಕವಿ ನಮ್ಮ ಮೈಸೂರಿನವರೆ ಕೆ. ಎಸ್. ನರಸಿಂಹಸ್ವಾಮಿ ಅವರು ಒಂದು ಕಡೆ ಹೇಳುತ್ತಾರೆ - "ಹೊಳೆ ಮಿಂಚು ನೆಲ ಪಚ್ಚೆ, ಬಗೆದಲ್ಲಿ ಬಂಗಾರ, ಕೈ ನೀಡಿದರೆ ಕಡಲು ನಮ್ಮ ನಾಡು, ಜನ ಕಪ್ಪು, ನುಡಿ ಮುತ್ತು, ಕಲ್ಲು ಗುಡಿ ಸಿಂಗಾರ, ನವಿಲ ದನಿ ಕನ್ನಡದ ಹಳ್ಳಿ ಹಾಡು." ಈ ಹಾಡನ್ನು ಕೇಳುತ್ತಿದ್ದಾಗ ಒಂದು ಸುಂದರವಾದಂತಹ ಕರ್ನಾಟಕದ ಚಿತ್ರ ನಮ್ಮ ಮನಸ್ಸಿನಲ್ಲಿ ಮನೆ ಮಾಡುತ್ತದೆ. ಹೊಳೆ ಮಿಂಚು ಕಾವೇರಿ, ತುಂಗೆ, ಭದ್ರೆ, ನೇತ್ರಾವತಿ, ಕೃಷ್ಣಾ ಹರಿಯುತ್ತಿರುವುದು; ನೆಲ ಪಚ್ಚೆ ಹಚ್ಚ ಹಸಿರಾದಂತಹ ಸಹ್ಯಾದ್ರಿಯ ಸುಂದರ ಗಿರಿ ವನಗಳ ನಾಡು ಅನ್ನುವ ಭಾವ ಮನಸ್ಸಿನಲ್ಲಿ, ಚಿತ್ತಭಿತ್ತಿಯಲ್ಲಿ ಒತ್ತುತ್ತದೆ. ಆದರೆ ಕಾವ್ಯ ಎನ್ನುವುದು ಕೇವಲ ವಾಚಿಕವಾದುದಲ್ಲ, ಅದು ಹೇಳುವ ಅರ್ಥಕ್ಕಿಂತಲೂ ಆಳವಾದ ಇನ್ನೊಂದು ಗೂಢಾರ್ಥ ಇರುತ್ತದೆ. ಹಾಗೆ ಬರೆದರೆ ಅದು ಕಾವ್ಯ, ಕೇವಲ ಮೇಲ್ನೋಟದಲ್ಲಿ ಕಾಣುವಂತಹ ವಾಚ್ಯಾರ್ಥಕ್ಕಿಂತಲೂ ಭಿನ್ನವಾದ ಆಂತರಿಕವಾದಂತಹ ಅರ್ಥ ವಿಶೇಷತೆ ಅಲ್ಲಿ ಇದ್ದರೆ ಅದು ಕಾವ್ಯ; ಅದನ್ನು ಬರೆದವನು ಮಾತ್ರ ಕವಿ ಎನಿಸುತ್ತಾನೆ. ಈ ಹಿನ್ನೆಲೆಯಲ್ಲಿ ಹೊಳೆ ಮಿಂಚು ಎಂದರೆ - ಕರ್ನಾಟಕದ ತುಂಬಾ ನದಿಗಳು ಹರಿಯುತ್ತವೆ ಎಂದರ್ಥವಲ್ಲ, ಆ ಕನ್ನಡತನ ಎನ್ನುವುದು, ಕರ್ನಾಟಕ ಅನ್ನುವುದು ನಮ್ಮ ಅಂತಃಸ್ಫೂರ್ತಿಯಾಗಿ ಮಿಂಚಿನ ಹಾಗೆ ಹೊಳೆಯುತ್ತದೆ ಎಂದರ್ಥ. ಹೊಳೆ, ಮಿಂಚು ಎಂದರೆ ಎಷ್ಟೋ ವಿಜ್ಞಾನಿಗಳು, ಎಷ್ಟೋ ಸಂಶೋಧಕರು ಏನನ್ನೊ ಅನ್ವೇಷಣೆ ಮಾಡಿದರಲ್ಲ, ಸಂಶೋಧಿಸಿದರಲ್ಲ, ಅದು ಅವರ ಮನಸ್ಸಿನ ಒಳಗೆ ಮಿಂಚಾಗಿ ಹೊಳೆದಿದೆ. ಕರ್ನಾಟಕ ಎನ್ನುವುದು ಅಂತಹ ಸಂಶೋಧನೆಯ ಆಗರ. ಹೊಳೆ ಮಿಂಚು, ನೆಲ ಪಚ್ಚೆ ಹಸಿರಾದ ನೆಲ ಎನ್ನುವುದಷ್ಟೇ ಅರ್ಥವಲ್ಲ, ಪಚ್ಚೆ ಅಂದರೆ ನವರತ್ನಗಳಲ್ಲಿ ಒಂದು. 'ಬಹುರತ್ನ ವಸುಂಧರಾ' ಎನ್ನುವ ಮಾತಿದೆ. ಈ ಭೂಮಿ ಅಮೂಲ್ಯವಾದಂತಹ ರತ್ನದ ಆಗರ. ನೆಲ ಪಚ್ಚೆ, ಬಗೆದಲ್ಲಿ ಬಂಗಾರ. ಬಂಗಾರದ ಗಣಿ ಇದೆ ಎನ್ನುವುದು ಕನ್ನಡನಾಡಿನ ಒಂದು ಸತ್ಯವಾದರೂ ಕೂಡ ಕಾವ್ಯಾರ್ಥ ಅಷ್ಟಕ್ಕೆ ಸೀಮಿತವಾಗಿಲ್ಲ. ನಾವು ಬಗೆದರೆ, ಕನ್ನಡಿಗರು ಮನಸ್ಸು ಮಾಡಿದರೆ, ಬಂಗಾರವನ್ನು ಸೃಷ್ಟಿಸಲಿಕ್ಕೆ ಸಾಧ್ಯ. ಬಗೆದಲ್ಲಿ ಬಂಗಾರ. ಶ್ರಮಿಸಿದರೆ, ದುಡಿದರೆ ಅದ್ಭುತವಾದುದನ್ನು ಸಾಧಿಸಲಿಕ್ಕೆ ಸಾಧ್ಯ ಅನ್ನುವುದು ಆ ಮಾತಿನ ಅರ್ಥ. ಕೈ ನೀಡಿ ಕರೆದರೆ, ಕೈ ನೀಡಿದರೆ ಕಡಲು ನಮ್ಮ ನಾಡು, ಮಂಗಳೂರಿನ ಹತ್ತಿರ ಸಮುದ್ರ ಇದೆ ಅನ್ನುವುದು ಮಾತ್ರ ಇದರ ಅರ್ಥವಲ್ಲ. ಕನ್ನಡಿಗ ಕೈ ನೀಡಿದರೆ, ಉದಾರವಾಗಿ ನೀಡಿದರೆ, ಕೊಟ್ಟರೆ ಕಡಲಿನಷ್ಟು ಕೊಟ್ಟಾನು. ತೆಗೆ ತೆಗೆದು, ಮೊಗೆ ಮೊಗೆದು, ಬಗೆ ಬಗೆದು ಕೊಟ್ಟಾನು ಎನ್ನುವಂತಹ ಔದಾರ್ಯವನ್ನು ಸೂಚಿಸುತ್ತದೆ.

ಒಂದು ಕಾವ್ಯ ಇಂತಹ ಆಂತರಿಕವಾದಂತಹ ಅರ್ಥ ಸಮೃದ್ಧಿಯಿಂದ ಮನಸ್ಸನ್ನೂ ತೇಲುವ ಹಾಗೆ ಮಾಡಬೇಕು, ಯೋಚಿಸುವ ಹಾಗೆ ಮಾಡಬೇಕು. ಕನ್ನಡದ ಕಾವ್ಯ ಅನ್ನುವುದು ಇಂತಹ ಸುಂದರವಾದಂತಹ ಪದ ಪುಂಜಗಳಲ್ಲಿದೆ, ಅರ್ಥ ಸಂಪತ್ತಿನಲ್ಲಿದೆ, ನಾವು ಇದನ್ನು ಗ್ರಹಿಸಬೇಕು. ಕನ್ನಡ ಅಂದ ತಕ್ಷಣ ನಾವು ಅದರಲ್ಲಿರುವ ವಿಶೇಷತೆ ಏನು? ಎಂಬುದನ್ನು ಗ್ರಹಿಸಬೇಕು. ಕನ್ನಡದ ಅರ್ಥ ಏನು? ಕರ್ನಾಟ ಅಂದರೆ ಏನು? ಸುಗಂಧಮಯವಾದಂತಹ ಕಂಪಿರುವ ನಾಡು, ಕಮ್ಮಿತ್ತು ನಾಡು, ಕರುನಾಡು ಅಂದರೆ ಗಂಧದ ಹಾಗೆ, ಸುಗಂಧದ ಹಾಗೆ ಪರಿಮಳವನ್ನು ಬೀರುವಂತಹ ನಾಡು ಎನ್ನುವುದು ಒಂದು ಅರ್ಥವಾದರೆ, ಇನ್ನೊಂದು ಕರಿಮಣ್ಣಿನ ನಾಡು, ಕಪ್ಪು ಮಣ್ಣಿನ ನಾಡು ಅಂಥ ಅರ್ಥ. ಈ ಕನ್ನಡಕ್ಕೆ ಇಂತಹ ಒಂದು ಮಣ್ಣಿನ ಗಂಧವಿದೆ. ಬೇರೆ ಎಲ್ಲರನ್ನೂ ಕೂಡ ಆಕರ್ಷಿಸುವಂತಹ ಸ್ನೇಹ - ಸೌಹಾರ್ದತೆಯಿಂದ ಕರೆದುಕೊಳ್ಳುವಂತಹ ನಿಜವಾದ ಭಾರತೀಯ ಅಂತಃಕರಣವಿದೆ ಅಂತ ಅರ್ಥ. 'ಕವಿರಾಜಮಾರ್ಗ' ಎನ್ನುವಂತಹ ಪ್ರಾಚೀನ ಗ್ರಂಥದಲ್ಲಿ ಕನ್ನಡದ ಬಗ್ಗೆ ಹೀಗೆ ಹೇಳುತ್ತಾರೆ - 'ವಸುಧಾವಲಯವಿಲೀನವಿಷದವಿಷಯವಿಶೇಷಂ.' ಇದು ಕನ್ನಡಕ್ಕೆ ಬರೆದ ಭಾಷ್ಯ. 'ವಸುಧಾವಲಯವಿಲೀನವಿಷದವಿಷಯವಿಶೇಷಂ' ಕನ್ನಡ ಅಂದರೆ ಏನು? ವಸುಧಾವಲಯದಲ್ಲಿ ಇಡೀ ಪ್ರಪಂಚದಲ್ಲಿ ವಿಲೀನವಾಗಿರುವಂತಹ ಅದರಲ್ಲಿ ಮುಳುಗಿ ಹೋದಂತಹ, ತನ್ಮಯವಾಗಿರುವಂತಹ, ವಿಲೀನ ವಿಷದ ವಿಷಯ ವಿಶೇಷ ಅಂದರೆ ನಾವು ನಮ್ಮ ಕರ್ನಾಟಕದ ಗಡಿರೇಖೆಯ ಒಳಗಡೆ ಮಾತ್ರ ನಮ್ಮನ್ನು ಸೀಮಿತ ಮಾಡಿಕೊಂಡಿಲ್ಲ. ಕನ್ನಡದ ಹೊರಗೆ, ಭಾರತದ ಹೊರಗೆ ಇಡೀ ಪ್ರಪಂಚವನ್ನ ಆವರಿಸಿಕೊಂಡಂತಹ ಪ್ರೀತಿಯನ್ನ, ವಿಶ್ವಾಸವನ್ನ, ಸೌಹಾರ್ದತೆಯನ್ನ, ಸಾಮರಸ್ಯವನ್ನ ಸಾರುವಂತಹ ಕನ್ನಡ ಮನಸ್ಸು ನಮ್ಮದು ಎನ್ನುವುದನ್ನ ಅರ್ಥಮಾಡಿಕೊಳ್ಳಬೇಕು. ಕನ್ನಡಕ್ಕೆ ಅಂತಹ ಒಂದು ವೈಶಾಲ್ಯವಾದ ಅರ್ಥವಿದೆ. ಇದು ಸಿರಿಗನ್ನಡ, ಇದು ಸರಿಗನ್ನಡವೂ ಆಗಬೇಕು. ಇವತ್ತು ನೀವು ಬೇರೆ ಬೇರೆ ಭಾಷೆಯವರು ನಮ್ಮ ಮೈಸೂರಿನಲ್ಲಿದ್ದೀರಿ, ನಿಜವಾದ ಒಂದು ಭಾರತದ ಚಿತ್ರವನ್ನ ನಾವಿಲ್ಲಿ ಅನುಭವಿಸುತ್ತಾ ಇದ್ದೇವೆ. ಇಂಗ್ಲಿಷ್ ಮಾತನಾಡುವಾಗ ಅದರ ವ್ಯಾಕರಣ ತಪ್ಪಿದ್ದರೆ ನಗೆಪಾಟಲಿನ ವಿಷಯ ಅಂತ ಹೇಳುತ್ತೇವೆ. ನಾವು ಏ ಅವನಿಗೆ ಗ್ರಾಮರ್ ಸರಿಯಾಗಿ ಬರುವುದಿಲ್ಲ, ಅವನ ಇಂಗ್ಲಿಷ್ ಭಾಷೆ ಸರಿಯಾಗಿಲ್ಲ ಅಂತ ನಾವು ಚಿಕ್ಕಂದಿನಿಂದಲೇ ಹೇಳಿಕೊಂಡು ಬರುತ್ತೀವಿ, ಆದರೆ ಕನ್ನಡ ಮಾತನಾಡುವಾಗ ಎಷ್ಟು ತಪ್ಪಿದ್ದರೂ ಕೂಡ ಅದು ಸರಿಯೇ, ಕನ್ನಡವನ್ನು ಯಾವುದೇ ಭಾಷೆಯನ್ನು ಕೂಡ ಅದರ ಮೂಲ ಸೊಗಡಿನಲ್ಲಿ ಅದರ ಭಾಷಾ ಪರಿಶುದ್ಧಿಯ ನೆಲೆಯಲ್ಲಿ ಮಾತನಾಡುವುದನ್ನ ಕಲಿತಾಗಲೆ ಆ ಭಾಷೆ ಸರಸ್ವತಿಯಾಗುವುದು. 'ಸರ್ವಭಾಷಾಮಯಿ ಸರಸ್ವತಿ' ಅನ್ನುವಂತಹ ಒಂದು ಮಾತಿದೆ. ಎಲ್ಲಾ ಭಾಷೆಗಳು ಕೂಡ ಸರಸ್ವತಿ ದೇವಿ. ತಾಯಿ ಶಾರದೆ ಧರಿಸಿರುವಂತಹ ಒಂದು ಮಾಲೆಗೆ ಅಕ್ಷರಮಾಲೆ ಅಂಥ ಹೆಸರು. ಏಕೆ ಅಕ್ಷರಮಾಲೆ ಎಂದು ಹೆಸರು? ಅದು 'ಅ' ದಿಂದ 'ಕ್ಷ' ದವರೆಗೆ ಇರುವ ಅಂದರೆ 'ಎ' ಯಿಂದ ಎಕ್ಸ್, ವೈ, ಝಡ್ ವರೆಗೆ ಇರುವ ಎಲ್ಲಾ ಭಾಷೆಗಳ ಅಕ್ಷರವನ್ನು ಅದು ಒಳಗೊಂಡಿದೆ ಎಂದರ್ಥ. ಅದು ಶುದ್ಧವಾಗಿರಬೇಕು. ಪುರಂದರದಾಸರು ಒಂದು ಕಡೆ ಹೇಳುತ್ತಾರೆ "ಪಾಲಿಸಮ್ಮ ಮುದ್ದು ಶಾರದೆ, ಎನ್ನ ನಾಲಗೆಯೊಳು

ನಿಲ್ಲಬಾರದೆ ಶಾರದೆ ಅಕ್ಷರ ಅಕ್ಷರ ವಿವೇಕವ" ನನ್ನ ನಾಲಿಗೆಯಲ್ಲಿ ಸರಸ್ವತಿ ನೆಲೆ ನಿಂತು ಅಕ್ಷರ ಅಕ್ಷರಗಳ ವಿವೇಕವನ್ನು ನನಗೆ ಕರುಣಿಸಬೇಕು ಎನ್ನುವಂತಹ ಪ್ರಾರ್ಥನೆ ಪುರಂದರದಾಸರದ್ದು. ಎಷ್ಟು ಅರ್ಥವತ್ತಾದಂತಹ ಮಾತು! ನನ್ನ ನಾಲಿಗೆಯಲ್ಲಿ ಯಾವ ಅಕ್ಷರವೂ ಕೂಡ ತಪ್ಪಾಗಿ ಉಚ್ಚಾರಣೆ ಆಗಬಾರದು ಎಂಬ ಕಳಕಳಿ ಪುರಂದರದಾಸರದ್ದು. ನಮ್ಮ ನಾಡಿನ ಬಹಳ ದೊಡ್ಡ ಕವಿವರೇಣ್ಯರು ಅವರು. ಹಾಗೆಯೇ ನಾವು ನಮ್ಮ ಭಾಷೆ ಕೂಡ ಪರಿಶುದ್ಧವಾಗಿರಬೇಕು ಎಂದು ಯೋಚಿಸಬೇಕು. ಆದರೆ ನಮ್ಮ ಭಾಷೆಯಲ್ಲಿ ಎಷ್ಟೋ ಅಸ್ಪಷ್ಟವಾದ, ಅಭದ್ರವಾದ, ಅಪಾರ್ಥಯುಕ್ತವಾದಂತಹ ಮಾತುಗಳನ್ನ ನಾವು ಇವತ್ತು ಆಡುತ್ತಾ ಇದ್ದೀವಲ್ಲ ಇದನ್ನ ಸಂಸ್ಕರಿಸಬೇಕು, ಇದನ್ನ ಸರಿಗೊಳಿಸಬೇಕು ಆಗಲೇ ಸಿರಿಗನ್ನಡವೂ ಸರಿಗನ್ನಡವಾಗುತ್ತದೆ. ಆ ಕಡೆಗೆ ನಮ್ಮ ಪ್ರಯತ್ನ ಇರಬೇಕು. ಮಾಧ್ಯಮಗಳಲ್ಲಿ ಕೆಲವೊಂದು ತಪ್ಪು ಪ್ರಯೋಗಗಳನ್ನು ನೋಡುತ್ತೇವೆ. ಇದಕ್ಕೆ ಒಂದು ಉದಾಹರಣೆ ಇತ್ತೀಚೆಗೆ ಬಂದಂತಹ ಒಂದು ಮಾಧ್ಯಮದ ವಾಕ್ಯ "ಇವರಿಬ್ಬರ ಮೈತ್ರಿ ನಿಲ್ಲಲ್ಲ" ಏನರ್ಥ ಅದರದ್ದು ಇವರಿಬ್ಬರ ಮೈತ್ರಿ ನಿಲ್ಲೋದಿಲ್ಲ ಬೀಳುತ್ತೆ ಅಂತ ಅರ್ಥ. ಆದರೆ ಅವರ ಉದ್ದೇಶ ಹಾಗೆ ಇರಲಿಲ್ಲ ಇವರಿಬ್ಬರ ಮೈತ್ರಿ ನಿರಂತರವಾಗಿ ಮುಂದೆ ಸಾಗುತ್ತದೆ ಅಂತ ಅದರ ಅರ್ಥ. ಆದರೆ ಅದು ಬೀಳುತ್ತೆ ಎಂಬ ಅರ್ಥವನ್ನು ಕೊಡುತ್ತದೆ. ಸಮೂಹ ಸಂವಹನದ ಭಾಷೆ ಗೊಂದಲಕ್ಕೆ ಎಡೆಮಾಡಿ ಕೊಡಬಾರದು. ಕನ್ನಡ ಭಾಷೆಯ ಬೇರೆ ಬೇರೆ ಅರ್ಥ ಛಾಯೆಗಳನ್ನ ಅರ್ಥಮಾಡಿಕೊಂಡು ನಾವು ಅದನ್ನು ಬಳಸಬೇಕು. ನೋಡಿ 'ಮನೆಯಲ್ಲಿ' ಎಂದು ಹೇಳುವುದು ಸರಿ 'ಮನೆನಲ್ಲಿ' ಅಂದರೆ ಮನೆಯೊಳಗೆ ನೀರು ಬರುವ ನಲ್ಲಿ ಎಂಬ ಅರ್ಥಬರುತ್ತದೆ. 'ಕೃತಜ್ಞ' ವಿರೋಧ ಶಬ್ದ 'ಕೃತಘ್ನ' ಆದರೆ ನಾವು ಕೃತಜ್ಞತೆಯನ್ನ ಧನ್ಯವಾದವನ್ನ ಅರ್ಪಿಸುತ್ತೇವೆ ಎಂದು ಹೇಳುವ ರೀತಿಯಲ್ಲಿ ಕೃತಘ್ನತೆಗಳು ಅಂತ ಹೇಳುತ್ತೇವೆ. ಇದು ವಿರೋಧವನ್ನು ಸೂಚಿಸುವುದಿಲ್ಲವೇ? ಭಾಷೆಯ ಒಳಗಿರುವಂತಹ ಈ ಸೂಕ್ಷ್ಮ ಸಂಗತಿಗಳನ್ನ ಅರ್ಥಮಾಡಿಕೊಳ್ಳಬೇಕು. ಒಂದು ಭಾಷೆ ಅನೇಕ ಪರಿಭಾಷೆಗಳನ್ನ ನಿರ್ವಹಣ ಮಾಡುತ್ತದೆ. ಅದು ಅಷ್ಟು ಬೇಗ ಅರ್ಥವಾಗುವುದಿಲ್ಲ. ಉದಾಹರಣೆಗೆ 'ಮುಂಡಿಗೆ' ಅನ್ನುವ ಒಂದು ಶಬ್ದ ಇದೆ. ಏನು ಮುಂಡಿಗೆ ಅಂದರೆ? ಮುಂಡಿಗೆಯಲ್ಲ, ಮಂಡಿಗೆ ಅನ್ನುವುದು ಸಿಹಿಯಾದ ತಿನಿಸು, ಸವಿಯಾದ ಭಕ್ಷ್ಯ. ಆದರೆ ಮುಂಡಿಗೆ ಅಂದರೆ ಒಂದು ಒಗಟಿನ ರೀತಿಯ ರಚನೆ ಎಂದರ್ಥ. ಕನಕದಾಸರ ಮುಂಡಿಗೆ ಅಂದರೆ ಒಗಟಿನ ಅರ್ಥವಾಗದೆ ಇರುವ ಕ್ಲಿಷ್ಟಕರವಾಗಿರುವಂತಹ ಪದ್ಯವನ್ನು ಬರೆದಿದ್ದಾರೆ ಎಂದರ್ಥ. 'ದಾಸೋಹ' ವಚನ ಸಾಹಿತ್ಯ ಸಂದರ್ಭದಲ್ಲಿ ಹುಟ್ಟಿದಂತಹ ಒಂದು ಶಬ್ದ ಅದು. 'ಬಯಲಾದನು' ಅನ್ನುವುದರ ಅರ್ಥ ಒಂದು ಪರಿಭಾಷೆ. ಅವನು ಇಲ್ಲವಾದನು ಎನ್ನುವಂತಹ ಅರ್ಥ. ನೋಡಿ 'ಉಡ್‌ಲ್ಯಾಂಡ್ಸ್' ಎನ್ನುವಂತಹ ಒಂದು ಹೋಟೆಲ್ ಇತ್ತು ಹಿಂದೆ. 'ಕಡಂದಲೆ ಕೃಷ್ಣಾಭಟ್ಟರು' ಅದರ ಸಂಸ್ಥಾಪಕರು. ಅವರು ದೋಸೆಯ ಒಳಗೆ ಪಲ್ಯವನ್ನು ಇಟ್ಟು 'ಮಸಾಲೆದೋಸೆ' ಎಂದು ಮಾರಾಟ ಮಾಡಿದರು. ಇವತ್ತು ಮಸಾಲೆ ದೋಸೆ ನಮ್ಮೆಲ್ಲರಿಗೂ ಪರಿಚಿತ. ಯಾಕೆ ಕರ್ನಾಟಕದಲ್ಲಿ ಅಲ್ಲ, ದೂರದ ಅಮೆರಿಕಾದಲ್ಲೂ ನಮ್ಮ ಕನ್ನಡದ ಮಸಾಲ ದೋಸೆ ಸಿಗುತ್ತದೆ. ಆ ಮಸಾಲೆ ದೋಸೆ ಎನ್ನುವ ಶಬ್ದದ ಜನಕನೂ ಕೂಡ ಕಡಂದಲೆ ಕೃಷ್ಣಾಭಟ್ಟರು. ಒಂದು ಅಗತ್ಯಕ್ಕೆ ಅನುಗುಣವಾಗಿ ಹೊಸ ಶಬ್ದವನ್ನ ನಾವು ಟಂಕಿಸುತ್ತೇವೆ. ಒಂದು ಭಾಷೆ ಬೆಳೆಯುವಂತಹ ಬಗೆ ಹಾಗೆ. ಕನ್ನಡ ಇಂಥ ಅನೇಕ ಶಬ್ದಗಳನ್ನ ಸೃಷ್ಟಿಸುತ್ತದೆ. ಯಾವ ಭಾಷೆಗೂ ಕೂಡ ಇದು ಮುಖ್ಯ. ಇಂಗ್ಲಿಷ್ ಭಾಷೆಯಲ್ಲಿಯೂ ಅನೇಕ ಶಬ್ದಗಳು ಕಾಲದ ಅಗತ್ಯಕ್ಕೆ ಸರಿಯಾಗಿ ಸೃಷ್ಟಿಯಾಗುತ್ತವೆ. ಕ್ರಿಕೆಟ್ ಆಟದಲ್ಲಿ ನೋಡಿ ನಾವು ಬ್ಯಾಟ್ಸ್‌ಮೆನ್ ಅಂತ ಹೇಳುತ್ತಾ ಇದ್ವಿ ಹಿಂದೆ, ಇವತ್ತು ಮಹಿಳೆಯರೂ ಕ್ರಿಕೆಟ್ ಆಟಕ್ಕೆ ಬಂದರು. ಆಗ ಬ್ಯಾಟ್ಸ್‌ಮೆನ್ ಅಂತ ಹೇಳಿದರೆ ತಪ್ಪಾಗುತ್ತದೆ. ಅದು ಪುಲ್ಲಿಂಗ ವಾಚಕ. ಸ್ತ್ರೀ ವಾಚಕ ಆಗಬೇಕು ಅಂದರೆ ಏನು ಮಾಡಬೇಕು? ಅದಕ್ಕೆ ಬ್ಯಾಟರ್ ಎಂದು ಬಳಸಿದರು. ಅಂದರೆ ಇದು ಅವನು ಮತ್ತು ಅವಳು ಇಬ್ಬರಿಗೂ ಅನ್ವಯಿಸುತ್ತದೆ ಎಂಬುದನ್ನು ಗಮನಿಸಬೇಕು. ಚಿಯರ್‌ಗರ್ಲ್ಸ್ ಕ್ರಿಕೆಟ್ ಆಡುವಾಗ ಅವರನ್ನ ಹುರಿದುಂಬಿಸುವುದಕ್ಕೆ ಕೆಲವು ನೃತ್ಯ ಮಾಡುವ ಹುಡುಗಿಯರು ಇರುತ್ತಾರೆ. ಅವರಿಗೆ ಕನ್ನಡದಲ್ಲಿ ಒಂದು ಹೊಸ ಪದ ಸೃಷ್ಟಿಯಾಯಿತು. ಅದೇನೆಂದರೆ 'ಹುರಿದುಂಬಿಗಳು' 'ಹುರಿದುಂಬಿಸುವವರು'. ಕನ್ನಡದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಹೊಸ ಶಬ್ದವನ್ನು ಟಂಕಿಸಿದಾಗ, ಸೃಷ್ಟಿಸಿದಾಗ ಭಾಷೆ ಬೆಳೆಯುತ್ತದೆ. ಅವಶ್ಯಕತೆಗಳನ್ನ ಗಮನಿಸಿಕೊಂಡು ಇಂತಹ ಶಬ್ದ ಸೃಷ್ಟಿ ಮಾಡಬೇಕು ನಾವು.

ವೆಬ್‌ಸೈಟ್ - ಜಾಲತಾಣ, ಇಂಟರ್‌ನೆಟ್ - ಅಂತರ್ಜಾಲ, ಪಾಸ್‌ವರ್ಡ್ - ಪ್ರವೇಶ ಪದ, ಕೀ ಬೋರ್ಡ್ - ಕೀಲಿ ಮಣೆ ಇಂತಹ ಸುಂದರವಾದ ಪದಗಳನ್ನು ನಾವು ಸೃಷ್ಟಿಸಿದ್ದೇವೆ! ಆದರೆ ನಾವು ಅವನ್ನ ಬಳಸುತ್ತಾ ಇದ್ದೇವೆಯೇ? ಶಬ್ದ ಇದ್ದರೂ ಕೂಡ ನಾವು ಬಳಸುತ್ತೇವೆಯೇ? ಬಳಸುವುದಿಲ್ಲ, ಯಾಕಿಲ್ಲ? ನಾವು ಕನ್ನಡ ಭಾಷೆಯ ಪದಗಳನ್ನ ಬಳಸಿಬಳಸಿ ಅದನ್ನ ಜನಪ್ರಿಯಗೊಳಿಸಬೇಕು ಎನ್ನುವಂತಹ ಭಾಷಾಭಿಮಾನವನ್ನ ಹೊಂದಲಿಲ್ಲ. ಎಲ್ಲಾ ಭಾಷೆಗಳಲ್ಲೂ ಇಂತಹ ಸಂವಾದಿ ಶಬ್ದಗಳನ್ನ, ಪರ್ಯಾಯ ಪದಗಳನ್ನ ಸೃಷ್ಟಿಸಬೇಕು, ಬೆಳೆಸಬೇಕು. ಕೆಲವೊಮ್ಮೆ ತಪ್ಪುಗಳು ಆಗುತ್ತವೆ, ಇದು ಸಹಜ. ನೋಡಿ 'ಅನಸ್ತೇಷಿಯಾ' ಅಂತ ಒಂದು ಶಬ್ದವಿದೆ. ಏನದು? ಇವತ್ತು ಎಲ್ಲಾ ಆಸ್ಪತ್ರೆಗಳಲ್ಲಿ ನೀವು ಅದನ್ನ ನೋಡ್ತೀರಿ. ಅನಸ್ತೇಷಿಯಾ ಪ್ರಜ್ಞೆ ತಪ್ಪಿಸುವುದು, ಅರಿವಳಿಕೆ ತಜ್ಞರು ಅಂತ ನಾವು ಓದುತ್ತೇವೆ. ಅನಸ್ತೇಷಿಯ ತಜ್ಞರು ಪ್ರಜ್ಞೆಯನ್ನು ತಪ್ಪಿಸಿ ಅವರು ಶಸ್ತ್ರ ಚಿಕಿತ್ಸೆಯನ್ನ ಮಾಡುತ್ತಾರೆ. ಅರಿವಳಿಕೆ-ಅರಿವನ್ನು ಅಳಿಸುವುದು. ನಾನು ಅವರಿಗೆ ಒಂದು ಪ್ರಶ್ನೆ ಕೇಳುತ್ತೇನೆ, ತಿಳಿವಳಿಕೆ ಅಂದರೆ ಏನು? ತಿಳಿವಳಿಕೆ ಅಂದರೆ ತಿಳಿವನ್ನು ಅಳಿಸುವುದೇ? ಅರಿವನ್ನು ಅಳಿಸುವುದು ಅರಿವಳಿಕೆಯಾದರೆ, ತಿಳಿವನ್ನು ಅಳಿಸುವುದು ತಿಳಿವಳಿಕೆ ಆಗಬೇಕಲ್ಲ! ಹಾಗಾದರೆ ಒಂದು ಶಬ್ದವನ್ನ ಟಂಕಿಸುವಾಗ, ಸೃಷ್ಟಿಸುವಾಗ ಅದರ ಅರ್ಥ ಅನರ್ಥಗಳ ಕುರಿತು ಕೂಡ ನಾವು ಆಲೋಚನೆ ಮಾಡಬೇಕು. ಎಷ್ಟೋ ಬಾರಿ ತಜ್ಞರು ಬಳಸಿದ್ದಾರೆ ಅನ್ನುವ ಕಾರಣಕ್ಕಾಗಿ ಸಾಮಾನ್ಯರು ಅದನ್ನ ಅನುಸರಿಸುವುದುಂಟು, ಆ ದೆಸೆಯಲ್ಲಿ ನಾವು ಹೆಚ್ಚು ಯೋಚನೆಯನ್ನ ಮಾಡಬೇಕು ಅಂತ ನನಗೆ ಅನಿಸುತ್ತದೆ. ಕನ್ನಡದ ಕಾವ್ಯ ಅಂದ ತಕ್ಷಣ ಕನ್ನಡದ ಎಲ್ಲಾ ಮನೆಗಳಲ್ಲೂ ಒಬ್ಬ ಕವಿ ಇರುತ್ತಾನೆ ಎಂಬುದು ಒಂದು ಸಾಮಾನ್ಯ ಮಾತು. ಒಂದು ಕಲ್ಲನ್ನು ಎಸೆದರೆ ಅದು ಕವಿ ಇರುವ ಮನೆಗೆ ಹೋಗಿ ಬೀಳುತ್ತದೆ ಅನ್ನುವ ಒಂದು ಮಾತಿದೆ. ಎಲ್ಲಾ ಮನುಷ್ಯರು ಕೂಡ ಆಂತರಂಗಿಕವಾಗಿ ಕವಿಗಳೇ! ಸುಂದರವಾದಂತಹ ಚಂದಿರನನ್ನ ಕಂಡಾಗ ಯಾರಿಗೆ ತಾನೇ ಮನಸ್ಸು ಪ್ರಫುಲ್ಲವಾಗುವುದಿಲ್ಲ! ಕುವೆಂಪುರವರು ಮೈಸೂರಿನ ಕುಕ್ಕರಹಳ್ಳಿಕೆರೆಯ ಸುತ್ತ ನಡೆದುಕೊಂಡು ಹೋಗುತ್ತಾ ಇದ್ದರಂತೆ, ವಿಹಾರ ಮಾಡುತ್ತಾ ಇದ್ದರಂತೆ. ಆಗ ಆಕಾಶದಲ್ಲಿ ಬಲಾಕ ಪಕ್ಷಿಗಳು ಹಾರಾಡುತ್ತಿರುವುದನ್ನ ನೋಡಿ ಅವರು ಆಹ್! ಎಂಥ ಸುಂದರವಾದ ದೃಶ್ಯ! ಅಂತ ಭಾವಿಸಿದರಂತೆ, "ತೇಲುತ್ತಾ ಬರಲ್ಕೆ ಬಲಾಕ ಪಂಕ್ತಿ ಲೇಖನ ರೇಖಾನ್ಯಾಸದಲ್ಲಿ ಅವಾಙ್ಮಯ ಛಂದಪ್ರಾಸದಲ್ಲಿ ದೇವರು ರುಜು ಮಾಡಿದನು! ರಸವಶನಾಗುತ ಕವಿ ಅದ ನೋಡಿದನು!" ಅಂತ ಹಾಡಿದರಂತೆ. ಕುವೆಂಪು ಮಾತ್ರ ಅಲ್ಲ, ಎಲ್ಲರಿಗೂ ಕೂಡ ಸುಂದರವಾದ ಕಾಮನಬಿಲ್ಲನ್ನು ಕಂಡಾಗ, ಸೂರ್ಯೋದಯವನ್ನು ಕಂಡಾಗ, ಬೆಳದಿಂಗಳನ್ನು ಕಂಡಾಗ, ಕೋಗಿಲೆ ಕೂಗುವುದನ್ನು ಕಂಡಾಗ, ಕವಿತ್ವ ಪ್ರಚೋದನೆಗೊಳ್ಳುತ್ತದೆ. ಹಾಗೆ ಪ್ರೇರಣೆಗೊಂಡಂತಹ ಭಾವವನ್ನ, ಭಾಷೆಯಲ್ಲಿ ಹಿಡಿದಿಟ್ಟಾಗ ಅದು ಕವಿತೆಯಾಗುತ್ತದೆ. ಆದರೆ, ಆ ಕಾವ್ಯದ ಕೆಲವು ಸೂಕ್ಷ್ಮಗಳು ಇದೆಯಲ್ಲ ಆ ಸೂಕ್ಷ್ಮದ ಅನುಸಂಧಾನದಿಂದ

ಕವಿತ್ವಕ್ಕೆ ಹೆಚ್ಚಿನ ಶಕ್ತಿ, ಚೈತನ್ಯ ಪ್ರಾಪ್ತಿಸುತ್ತದೆ. ಆದ್ದರಿಂದ ಕವಿತ್ವ ಹೃದಯದಲ್ಲಿ ಉಂಟಾಗುವುದರ ಜೊತೆಗೆ, ಅದಕ್ಕೆ ಮೂರ್ತರೂಪವನ್ನು ಕೊಡುವಾಗ ಅದಕ್ಕೆ ಒಂದು ಅಭ್ಯಾಸ ಅನ್ನುವುದು ಬೇಕಾಗುತ್ತದೆ. ಪ್ರತಿಭೆಯಿಂದ ಕಾವ್ಯ ಹುಟ್ಟುತ್ತದೆ. ಆದರೆ ಅದನ್ನ ನೇರ್ಪುಗೊಳಿಸುವುದಕ್ಕಾಗಿ ಪಾಂಡಿತ್ಯದ ಪ್ರಯೋಜನ ಅತ್ಯಂತ ಅವಶ್ಯಕವಾಗಿತ್ತು. ಯಾವುದನ್ನು ನೋಡಿಯೂ ಕೂಡ ಒಬ್ಬರಿಗೆ ಕವಿತ್ವದ ಸ್ಫೂರ್ತಿ ಬರಬಹುದು. ದ. ರಾ. ಬೇಂದ್ರೆಯವರಿಗೆ ಕಾಗೆಗಳನ್ನು ಕಂಡಾಗ ಕವಿತ್ವದ ಸ್ಫೂರ್ತಿ ಬಂತಂತೆ. ಕೋಗಿಲೆಯನ್ನೆ ನೋಡಬೇಕಾಗಿಲ್ಲ, ನವಿಲಿನ ನಾಟ್ಯವನ್ನೆ ನೋಡಬೇಕಾಗಿಲ್ಲ, ಬೇಂದ್ರೆಯವರು ಕಾಗೆಯನ್ನ ನೋಡಿ ಹೆಂಡತಿಯ ಹತ್ತಿರ ಆ ಕಾಗಿ ಯಾ ಕಾಗಿ ಕುಣಿಯೋದು ಬೇಕಾಗಿ, ಇಲ್ಲ ಬಣ್ಣದ ಸೋಗಿ ಕುಣಿಯೋಣು ಬಾ ಎಂದು ಹೇಳುತ್ತಾರಂತೆ. ಬೇಂದ್ರೆಯವರ ಪದ್ಯಗಳ ಲಯ ನೋಡಿ, ನಮ್ಮನ್ನು ಕುಣಿಸುತ್ತದೆ. ಆ ಕಾಗಿ ಯಾ ಕಾಗಿ ಕುಣಿಯೋದು ಬೇಕಾಗಿ, ಇಲ್ಲ ಬಣ್ಣದ ಸೋಗಿ ಕುಣಿಯೋಣು ಬಾ ಹಿಕ್ಕಿ ಹಾಕಿತು ಕ್ಯಾಕಿ ಇರಲಾರೆನೇ ಕಾಕಿ, ಬಾ ಬಾರೆ ನನ್ನಾಕಿ ಕುಣಿಯೋಣು ಬಾ. ಧಾರವಾಡದ ಉತ್ತರ ಕನ್ನಡ ಭಾಷೆಯ ಸೊಗಡು ನೋಡಿ, ಬೆಡಗು ನೋಡಿ ಎಷ್ಟು ಚನ್ನಾಗಿದೆ ಅಂತ! ಆ ಕಾಗಿ ಅಂದರೆ ಕಾಗೆ ಯಾ ಕಾಗಿ ಅಂದರೆ ಯಾವುದಕ್ಕಾಗಿ ಕುಣಿಯೋದು, ಬೇಕಾಗಿ ಕುಣಿಯುವುದು, ಆ ಕಾಗಿ ಕುಣಿಯೋದು ಬೇಕಾಗಿ, ಸುಮ್ಮನೆ ಕುಣಿಯುವುದಲ್ಲ ಅದರ ಅಂತರಂಗದ ಒಳಗಡೆ ಕುಣಿಯಬೇಕು ಎನ್ನುವಂತಹ ಉತ್ಸಾಹ ಪುಟಿದೆದ್ದಿದೆ, ಅದಕ್ಕಾಗಿ ಕುಣಿಯುತ್ತಾ ಇದೆ. ಇಲ್ಲ ಬಣ್ಣದ ಸೋಗಿ ಅಂದರೆ ಅದಕ್ಕೆ ವೇಷ ಹಾಕಿ ರಂಗಸ್ಥಳಕ್ಕೆ ಯಾರು ಕಳಿಸಲಿಲ್ಲ, ತಾನು ಚಂದ ಇಲ್ಲ ಅಂತ ಆದ್ರೂ ಕೂಡ, ತಾನು ಅಲಂಕಾರ ಮಾಡಿಕೊಳ್ಳಲಿಲ್ಲ ಅಂತ ಆದ್ರೂ ಕೂಡ, ಆ ಕಾಗೆ ಕುಣಿಯುತ್ತಾ ಇದೆ. ಇಲ್ಲ ಬಣ್ಣದ ಸೋಗಿ ಕುಣಿಯೋಣು ಅದಕ್ಕೆ ಹೇಗೆ ಬಣ್ಣ ಬಣ್ಣದ ಸೋಗೆ ವೇಷಭೂಷಣದ ಕಾಡಿಗೆ, ಅಲಂಕಾರವಿಲ್ಲವೊ ಹಾಗೆಯೇ ನೀನು ನಾನು ಇಬ್ಬರು ಸೇರಿ ಕುಣಿಯೋಣ ಅಂತ ಬೇಂದ್ರೆ ಕವಿ ಹೆಂಡತಿಯನ್ನು ಕರೆಯುತ್ತಾರೆ. ಕುಣಿಯೋಣು ಬಾ ಹಿಗ್ಗಿ ಹಾಕಿತು ಕ್ಯಾಕಿ. ಅದು ಕೇಕೆ ಹಾಕಿ ಕುಣಿದು ಕುಪ್ಪಳಿಸಿತು ಇರಲಾರೆನೇ ಕಾಕಿ, ನಾನು ಒಬ್ಬನೆ ಇರಲಾಗುವುದಿಲ್ಲ ಅಂತ ಆ ಕಾಗೆ ಕುಣಿಯುತ್ತಾ ಇದೆ. ನೋಡಿ ಮನುಷ್ಯ ಸಮಾಜದೊಂದಿಗೆ ಬದುಕುವವನು ಏಕಾಂಗಿ ಹಾಗೆ ಬದುಕಲಿಕ್ಕೆ ಆಗುವುದಿಲ್ಲ. 'ಸಮ್ಯಕ್ ಮಿಲಿತ್ವಾ ಚಲತಿ ಚಾಲಯಿತ್ವಾ ಇತಿ ಸಮಾಜಃ' ಸಮಾಜ ಅಂದ್ರೆ ಎಲ್ಲರೂ ಸೇರಿ ಬದುಕುವುದು ಅಂತ ಅರ್ಥ. ಆ ಕಾಗೆ ತನ್ನ ಹೆಂಡತಿಯನ್ನು ಕರೆದು ಇನ್ನೊಬ್ಬಳೊಟ್ಟಿಗೆ ಕುಣಿಯುತ್ತದೆ. ಇರಲಾರೆನೆ ಕಾಕಿ, ನಾನು ಏಕಾಂಗಿ ಆಗಿ ಇರಲಾರೆನು ಅಂತ. ಬಾ ಬಾರೆ ನನ್ನಾಕಿ ಕುಣಿಯೋಣು ಬಾ. ಅದರ ಹಾಗೆ ಬೇಂದ್ರೆಯು ಕೂಡ ಕವಿ ಹೃದಯದಿಂದ ತನ್ನ ಹೆಂಡತಿಯನ್ನ ಕರೆದು ಕುಣಿದರಂತೆ, ಕಾವ್ಯಕ್ಕೆ ಇಂತಹ ಶಕ್ತಿ ಇದೆ. ತನ್ನ ಮನಸ್ಸಿನ ಒಳಗಡೆ ಯಾವ ಭಾವ ಪ್ರಚೋದನೆಗೊಳ್ಳುತ್ತದೊ, ಪ್ರೇರಣೆಗೊಳ್ಳುತ್ತದೊ ಅದನ್ನು ಹೇಳಿಕೊಂಡು ಕುಣಿಯುವಂತಹ ವಿಶೇಷವಾದ ಒಂದು ಶಕ್ತಿ ಕಾವ್ಯಕ್ಕೆ ಇದೆ. ನಮಗೆಲ್ಲರಿಗೂ ಕೂಡ ಕಾವ್ಯ ಬೇಕು, ಕನ್ನಡದ ವಿಶೇಷತೆ ಇದು ನೋಡಿ.

ಕನ್ನಡದಲ್ಲಿ ಇರುವಂತಹ ಕಾವ್ಯಕ್ಕೆ ಇಂತಹ ಅನೇಕ ಅರ್ಥಗಳಿವೆ. 'ಹರಿಶ್ಚಂದ್ರ ಕಾವ್ಯ' ರಾಘವಾಂಕ ಬರೆದಿರುವ ಕಾವ್ಯ, ಬಹಳ ಅರ್ಥಪೂರ್ಣವಾದಂತಹ ಕಾವ್ಯ ಅದು. ನಿಮಗೆಲ್ಲಾ ಗೊತ್ತಿದೆ ಚಂದ್ರಮತಿ ಎನ್ನುವ ಹರಿಶ್ಚಂದ್ರನ ಮಡದಿ ಮಗನಾದಂತಹ ಲೋಹಿತಾಶ್ವನನ್ನ ಕಳೆದುಕೊಂಡು ಅಳುವಂತಹ ಸಂದರ್ಭವಿದೆ. ಹಾವು ಕಚ್ಚಿ ಮಗ ಸತ್ತಿರುತ್ತಾನೆ, ಸತ್ತು ಹೋದ ಮಗನನ್ನ ಪರೀಕ್ಷೆ ಮಾಡುವುದಕ್ಕಾಗಿ ಚಂದ್ರಮತಿ ಏನೆಲ್ಲಾ ಮಾಡಿದಳು ಅಂತ ಕವಿ ಹೇಳುವ ಸಂದರ್ಭ. ಇವತ್ತು ಎಂ. ಬಿ. ಬಿ. ಎಸ್ ಓದುವ ಪಠ್ಯದಲ್ಲಿಯೂ ಕೂಡ ಇಷ್ಟು ವಿವರವಾದಂತಹ ಪ್ರಾಣ ಪರೀಕ್ಷೆ ಇದೆ ಅಂತ ನನಗೆ ಅನ್ನಿಸುವುದಿಲ್ಲ, ಕನ್ನಡದ ಕವಿಯ ವಿಶೇಷತೆ ನೋಡಿ 'ಲಲನೆ ಮೂಗಿನೊಳು ಉಸುರನ್..' ಮೊದಲು ಆ ಮಗುವಿನ ಮೂಗಿನಲ್ಲಿ ಉಸಿರಾಟ ಇದೆಯಾ? ಎಂದು ಮೆಲ್ಲನೆ ಮುಟ್ಟಿ ನೋಡಿದಳಂತೆ. ಉಸುರಿಲ್ಲ, 'ಅಳ್ಳೆಯೊಳು ಒಳ್ಳನ್ನು' ಅಳ್ಳೆ ಎಂದರೆ ಹೊಟ್ಟೆಯ ಎಡ ಬಲ ಭಾಗದಲ್ಲಿ ಏನಾದರೂ ನಡುಕ ಇದೆಯಾ ಎಂದು ನೋಡಿದಳಂತೆ, ನಾವು ಉಸಿರಾಡುವಾಗ ಅಳ್ಳೆಯಲ್ಲಿ ಹೊಟ್ಟೆಯ ಕಿಬ್ಬದಿಯಲ್ಲಿ ಒಂದು ಚಲನೆ ಇರುತ್ತದೆ, ಅದು ಪ್ರಾಣದ ಲಕ್ಷಣ ಅದನ್ನ ತಾಯಿ ಚಂದ್ರಮತಿ ಪರೀಕ್ಷೆ ಮಾಡುತ್ತಾಳೆ. 'ಉಗುರೊಳು ರಜವನ್' ಉಗುರಿನಲ್ಲಿ ಕೆಂಪು ಇದೆಯಾ ಅಂತ ನೋಡ್ತಾಳೆ, ನೋಡಿ ನಿಮ್ಮ ನಿಮ್ಮ ಉಗುರು ಕೆಂಪು ಇರುತ್ತದೆ ಅಂದ್ರೆ ನೀವು ಬದುಕಿರುತ್ತೀರಾ ಅಂತ. 'ಉಗುರಿನೊಳು ಹೊಯ್ಲನ್ನು ಉಗುರಿನೊಳು ರಜವನ್ನ ಎದೆಯೊಳಲ್ಲಾಟಮಂ' ಹೃದಯದ ಬಡಿತ 'ಕೈಯಮೊದಲೊಳು ಮಿಡುಕನ್' ನಾಡಿ ಬಡಿತ ಅದು ಇದೆಯಾ ಅಂತ ನೋಡುತ್ತಾಳೆ, ಅಂಗದೊಳ್ ನೋವನ್ನು, ಚಿವುಟಿ ನೋಡುತ್ತಾಳೆ, ಸ್ವರ ಬರುತ್ತಾ ಇಲ್ಲ ಮಗುವಿಗೆ, ಅಂಗದೊಳು ನೋವನ್, ಅಕ್ಷಿಯೊಳು ಬೆಳ್ಪನ್ನು, ಕಣ್ಣಿನಲ್ಲಿ ಒಂದು ಕಾಂತಿ, ಒಂದು ಬೆಳಕಿನ ಕಿರಣವಿರುತ್ತದೆ. ಸತ್ತು ಹೋದಾಗ ಡಾಕ್ಟರ್ ಬಂದು ಟಾರ್ಚ್ ಹಾಕುತ್ತಾರೆ ಕಿವಿಗೆ, ಆಮೇಲೆ ಅವರು ಜೀವಶಕ್ತಿ ಇಲ್ಲ ಸತ್ತು ಹೋಗಿದೆ ಎಂದು ಡೆತ್ ಸರ್ಟಿಫಿಕೆಟ್ ಬರೆಯುತ್ತಾರೆ. ಬಾಲದೊಳು ಬೆವರನ್ನು, ಹಣೆಯಲ್ಲಿ ಬೆವರು ಇದೆಯಾ ಅಂತ ನೋಡುತ್ತಾಳೆ, ಜೀವಂತ ಇದ್ದರೆ ಮಾತ್ರ ಬೆವರುವುದು, ಸತ್ತ ಹೆಣ ಬೆವರುವುದಿಲ್ಲ. 'ಲಲಿತಕಂಠದೊಳು ಮುಲುಕನ್' ಕುತ್ತಿಗೆಯ ಹತ್ತಿರ ನಿಧಾನವಾದಂತಹ ಚಲನೆ ಕಾಣುತ್ತದೆ. ಅಂಘ್ರಿಯೊಳು ಬಿಸಿಯನ್ ಪಾದದಲ್ಲಿ ಬಿಸಿ ಇದೆಯಾ ಎಂದು ತಿಕ್ಕಿ ನೋಡುತ್ತಾಳೆ, ಆಗಲೂ ಕೂಡ ಬಿಸಿ ಇರುವುದಿಲ್ಲ. 'ಅಂಗುಲದೊಳು ಚಿಟುಕನ್' ಬೆರಳಿನಲ್ಲಿ ನೆಟಕೆ ಇದೆಯಾ ಅಂತ ತೆಗೆದು ನೋಡ್ತಾಳೆ ಇದು ಜೀವಂತಿಕೆಯ ಲಕ್ಷಣ 'ಉಂಬುಟದೊಳು ಅರುಣಾಂಬೂವಂ' ಆ ಕೆಂಪು ಲಕ್ಷಣ ಇದೆಯಾ ಅಂತ ರಕ್ತದ ಒಸರು ಇದೆಯಾ ಅಂಥ ನೋಡ್ತಾಳೆ, 'ಸಲೆನಾಲಗೆಯೊಳಿಂಪನ್ನು' ನಾಲಗೆಯಲ್ಲಿ ವಸೆ ಆದ್ರತೆ ಇದೆಯಾ ಅಂತ ನೋಡ್ತಾಳೆ, 'ರೋಮದೊಳು ಬಲ್ಪನ್ನು' ಈ ರೋಮ ಜೀವಂತವಾಗಿದ್ದಾಗ ನೆಟ್ಟಗೆ ನಿಲ್ಲುತ್ತದೆ. ಹೀಗೆ ಹದಿನಾಲ್ಕು ಪರೀಕ್ಷೆಗಳನ್ನು ಚಂದ್ರಮತಿ ಮಾಡುತ್ತಾಳೆ. ಚಂದ್ರಮತಿ ಮಾಡಿದಳೊ ಇಲ್ಲವೊ ಗೊತ್ತಿಲ್ಲ, ಆದರೆ ರಾಘವಾಂಕ ಕವಿ ಮಾಡಿದ್ದಾನೆ! ಅಂದ್ರೆ ನಮ್ಮ ಕಾಲದ ಕವಿಗಳಲ್ಲಿ ಇದ್ದಂತಹ ಪಾಂಡಿತ್ಯ ಎಷ್ಟು ಅದ್ಭುತವಾದಂತಹ ವೈದ್ಯಕೀಯ ಜ್ಞಾನ ಒಬ್ಬ ಕವಿಗಿತ್ತು ಅಂತ. ಸಾಮಾನ್ಯವಾಗಿ ಹೇಳುವುದೇನೆಂದರೆ ಅವನು ಕವಿ, ಅವನಿಗೇನು ಗೊತ್ತು ವಿಜ್ಞಾನ? ನಿಜವಾದಂತಹ ಬಹುಶ್ರುತ ಕವಿಗೆ ವಿಜ್ಞಾನವು ಗೊತ್ತಿರಬೇಕು. ಸರಸ್ವತಿಗೆ ಎರಡು ಲಕ್ಷಣ ಇರುತ್ತದಂತೆ 'ಶಾಸ್ತ್ರ ಮತ್ತು ಕವಿತ್ವ. ಒಂದು ಪ್ರತಿಭೆ, ಒಂದು ಪ್ರಜ್ಞೆ . ಇವೆರಡರಿಂದ ಸಾಧ್ಯವಾಗುವಂತಹದು ರಾಘವಾಂಕನಿಂದ. ಇವನು ಈ ನಾಡಿನ ಮಹಾಕವಿ. ಅವನ ಪದ್ಯದಲ್ಲಿ ಸಾರ್ವಕಾಲಿಕವಾದಂತಹ ಜ್ಞಾನವಿದೆ. ಕನ್ನಡ ಅಂದ ತಕ್ಷಣ ಅದು ಕೇವಲ ಹಾಡುವಂತಹುದು, ಕುಣಿಯುವಂತಹುದು ಎಂದು ಭಾವಿಸಬೇಡಿ. ಕಾವ್ಯದಲ್ಲಿ ಕನ್ನಡದ ಸಾಹಿತ್ಯದಲ್ಲಿ ಇಂತಹ ಲೋಕೊತ್ತರವಾದ ಅಂಶಗಳಿವೆ ಅಂತ ಅರ್ಥ. ಕನ್ನಡ ಓದುತ್ತಿದ್ದಾನೆ ಹುಡುಗ ಅಂದರೆ ಕನ್ನಡ ಲೆಕ್ಚರರ್ ಆಗುತ್ತಾನೆ ಅಥವಾ ಗುಮಾಸ್ತನಾಗುತ್ತಾನೆ ಅಂತ ಭಾವಿಸಬೇಡಿ. ಅವನೂ ಕೂಡ ನೊಬೆಲ್ ವಿಜೇತನಾಗಬಹುದು. ಮುಂದಿನ ದಿವಸಗಳಲ್ಲಿ, ಅವನ ಪ್ರತಿಭೆಯನ್ನ ಪ್ರಕಾಶಿಸುವಂತಹ ಶಕ್ತಿ ಕನ್ನಡ ಕಾವ್ಯದಲ್ಲೂ ಇದೆ ಎಂಬುದನ್ನು ಗಮನಿಸಬೇಕು.

ಇಲ್ಲಿಯ ಆಡಳಿತ ಅಧಿಕಾರಿಗಳು, ಅಧ್ಯಾಪಕರೂ ಹೇಳುತ್ತಾ ಇದ್ದರೂ ನಾವಿಲ್ಲಿ ಕನ್ನಡವನ್ನು ಬೋಧಿಸುತ್ತೇವೆ ಅಂತ; ನನಗೇನೊ ಇದು ಕನ್ನಡ ಇಲ್ಲದ ಶಾಲೆ ಅನ್ನವಂತಹ ಪೂರ್ವಾಗ್ರಹವಿತ್ತು. ಹಾಗಲ್ಲ, ಇಲ್ಲಿಯೂ ಕೂಡ ಕನ್ನಡಕ್ಕೆ ಬೆಲೆ ಇದೆ, ಕನ್ನಡ ಕಲೆ, ಸಂಗೀತ ಸಾಹಿತ್ಯ,

ಸಂಸ್ಕೃತಿಗೆ ಬೆಲೆ ಇದೆ ಅನ್ನುವುದನ್ನ ತಿಳಿದಾಗ ಮುಂದೊಂದು ದಿನ ಈ ಶಾಲೆಯ ಹಳೆಯ ವಿದ್ಯಾರ್ಥಿಗಳು ಜಗತ್ತಿನ ಅದ್ಭುತವಾದಂತಹ ಸಾಧನೆಯ ಸಿದ್ಧಿಯ ಮಹಾಪುರುಷರಾಗಬಹುದು ಅನ್ನುವಂತಹ ಭರವಸೆ ನನ್ನ ಮನಸ್ಸಿನಲ್ಲಿ ಉಂಟಾಗುತ್ತದೆ.

ನೀವೆಲ್ಲಾ ನೋಡಿರಬಹುದು ಯಕ್ಷಗಾನ ಕಲೆಯನ್ನು, ಕರ್ನಾಟಕದ ಬಹಳ ದೊಡ್ಡ ಕಲೆ ಯಕ್ಷಗಾನ. ಅದರಲ್ಲಿ, ಒಂದು ರಾಮಾಯಣ ಪ್ರಸಂಗದಲ್ಲಿ ಮಾಯಾಜಿಂಕೆ ಬರುವುದು, ಮಾರೀಚ ಚಿನ್ನದ ಜಿಂಕೆಯಾಗಿ ಕುಣಿಯುತ್ತಾನೆ. ಸೀತೆಯನ್ನು ಸೆಳೆಯುವುದಕ್ಕಾಗಿ, ವಾಲ್ಮೀಕಿ ರಾಮಾಯಣದಲ್ಲಿ ಇಲ್ಲದಿರುವುದು, ಯಕ್ಷಗಾನದ ರಾಮಾಯಣದಲ್ಲಿದೆ. ಆ ಜಿಂಕೆ ಬರುವಾಗ ಸೀತೆ ರಾಮನನ್ನು ಕರೆದು ಹೇಳುತ್ತಾಳೆ 'ನೋಡಿದೆಯಾ ರಾಮ ನೋಡಿದೆಯಾ, ಸಣ್ಣಸಣ್ಣ ಕಾಲು ಬೆರಳು...' ನಿಮಗೆ ಒಂದು ಪ್ರಶ್ನೆ ಕಾಡಬೇಕು, ಈ ಪದ್ಯ ಕೇಳಿದಾಗ ಸಣ್ಣಸಣ್ಣ ಕಾಲು ಬೆರಳು! ಈ ಜಿಂಕೆಗೆ ಕಾಲು ಬೆರಳೆ ಇರಲ್ವಲ್ಲ! ಜಿಂಕೆಗೆ ಗೊರಸೆ ಇರ್ತದೆ, ಕಾಲ್ಬೆರಳು ಇರಲ್ಲ. ಹಾಗಾದರೆ ಈ ಯಕ್ಷಗಾನ ಬರೆದ ಕವಿಗೆ ಜಿಂಕೆ ಹೇಗೆ ಇರುತ್ತದೆ ಎನ್ನುವುದೇ ಗೊತ್ತಿಲ್ವ? ಮೂರ್ಖ ಅಂತ ಹೇಳಬಹುದು, ಹೇಳುವ ನಾವು ಮೂರ್ಖರು! ಪದ್ಯವನ್ನ ಉದ್ದೇಶ ಪೂರ್ವಕವಾಗಿಯೇ ಬರೆದಿದ್ದಾರೆ ಪಾರ್ಥಿ ಸುಬ್ಬ. ಯಾಕೆ ಗೊತ್ತ? ಇದರಲ್ಲೊಂದು ಕ್ರಿಮಿನಾಲಜಿ ಇದೆ. ಕಳ್ಳ, ಅನ್ಯಾಯಗಾರ, ಅಪರಾಧಿ ಕಳ್ಳತನ ಮಾಡುವಾಗ ನೂರಕ್ಕೆ ನೂರು ಮೋಸಮಾಡಲಿಕ್ಕೆ ಆಗಲ್ಲ, ಯಾವುದೊ ಒಂದು ದೋಷವನ್ನು ಬಿಟ್ಟು ಹೋಗುತ್ತಾನೆ, ಆ ಕಾರಣದಿಂದಲೇ ನಮ್ಮವರು ಆ ಕಳ್ಳನನ್ನು ಪತ್ತೆ ಹಚ್ಚುವುದು. ಕ್ರಿಮಿನಾಲಜಿಯಲ್ಲಿ ಇದು ಬಹಳ ದೊಡ್ಡ ಸೈಕಾಲಾಜಿಕಲ್ ಆದಂತಹ ಅಂಶ. ಈ ಮನಃಶಾಸ್ತ್ರೀಯ ಅಂಶವನ್ನ ಗ್ರಹಿಸಬೇಕು. ಮಾರೀಚ ಮಾಯಾಜಿಂಕೆಯಾಗಿ ಬಂದ ಅಂತ ಅಂದ್ರೆ ಅವನು ತನ್ನ ಬೆರಳನ್ನು ಗೊರಸು ಮಾಡಲಿಕ್ಕೆ ಆಗದೆ ಅವನೇ ಮೋಸಗೊಂಡಿದ್ದಾನೆ. ಆ ಕಾರಣದಿಂದ ತಾನು ನಿಜವಾದ ಜಿಂಕೆಯಲ್ಲ ಅಂತ ಸಾಬೀತು ಪಡಿಸುತ್ತಾರೆ. ಇಂತಹ ಸೂಕ್ಷ್ಮ ಸಂಗತಿಗಳು ಯಕ್ಷಗಾನದಲ್ಲಿವೆ. ಕನ್ನಡದ ಕಾವ್ಯ ಈ ದೃಷ್ಟಿಯಲ್ಲಿ ಪ್ರಬುದ್ಧ. ರಾವಣ, ಸೂರ್ಪನಖಿ ಬಂದು ದೂರು ಹೇಳಿದಾಗ, ದಶಕಂಠ ಏನು ಮಾಡುತ್ತಾನೆ ಗೊತ್ತಾ? ಎಸೆಯುವ ಓಲಗವ ಚೀಲ್ಗೊಂಡನು, ಏನು ಎಸೆಯುವ ಓಲಗವ ಚೀಲ್ಗೊಂಡನು ಅಂದ್ರೆ ಕಂಗೊಳಿಸುವ ಶೋಭಾಯಮಾನವಾದಂತಹ ಲಂಕಾಧಿಪತ್ಯದ ಓಲಗವನ್ನು ವಿಸರ್ಜಿಸಿದ ಅಂತ ಅರ್ಥವಲ್ಲ, ಇದು ಎಸೆಯಬೇಕಾದ ಓಲಗ, ಪರಿತ್ಯಜಿಸಬಹುದಾದ ಓಲಗ, ಇದು ಶಾಶ್ವತವಲ್ಲದ ಓಲಗ, ಇದು ನಶ್ವರ ಪ್ರಪಂಚದ ಓಲಗ. ಈ ರಾವಣ ಜಯ ವಿಜಯರಾಗಿದ್ದವರು ಶಾಪದಿಂದಾಗಿ ರಾಕ್ಷಸನಾಗಿದ್ದು. ಈಗ ರಾಕ್ಷಸ ಜನ್ಮದ ವಿಮೋಚನೆಯ ಕಾಲ ಬಂದಿದೆ. ಇದು ಎಸೆವ ಓಲಗ ಎಂದು ಭಾವಿಸಿದ್ದಾನೆ. ರಾವಣನ ಅಂತರಂಗದ ಒಳಗಡೆ ಅಧ್ಯಾತ್ಮದ ಬೀಜವನ್ನು ಅಂಕುರಿಸುವ ಶಕ್ತಿ ಒಬ್ಬ ಕವಿಗಿದೆ. ಕನ್ನಡದ ಕವಿ ಎಷ್ಟು ಶ್ರೇಷ್ಠನಾದವನು! ಎಷ್ಟು ಬಹುಮುಖಿಯಾದಂತಹ ಪ್ರತಿಭಾನ್ವಿತನಾದವನು, ಎನ್ನುವುದನ್ನ ಅವನು ಅರ್ಥ ಮಾಡಿಕೊಳ್ಳಬೇಕು. ಒಳ್ಳೆಯ ಕಾವ್ಯಕ್ಕೆ ಮಾತ್ರ ಈ ಶಕ್ತಿ ಇದೆ. ಸೂರ್ಪನಖಿ ಮಾಯಾ ಹೆಣ್ಣಾಗಿ ಬಂದು ರಾಮನನ್ನು ಕಾಡುತ್ತಾಳೆ. ರಾಮ ನನಗಾಗಲೇ ಹೆಂಡತಿ ಇದ್ದಾಳೆ, ಇನ್ನೊಂದು ಮದುವೆ ಆಗುವುದಿಲ್ಲ ಎಂದಾಗ ಆ ಸಂದರ್ಭ ನೋಡಿ, 'ಒಂದು ಚೂರಿಗೆ, ಎರಡು ಒರೆಯೂ' ಒಂದು ಚೂರಿಗೆ ಎರಡು ಒರೆ ಬೇಕಾಗಿಲ್ಲ ಅಂತ ಅರ್ಥ. ಆದರೆ ಅದು ಚೂರಿ ಅಲ್ಲ, ಒಂದು ಚೂರು ಚಿನ್ನವನ್ನು ಪರೀಕ್ಷೆ ಮಾಡಬೇಕಾದರೆ ಒರೆಗಲ್ಲು ಎಷ್ಟು ಬೇಕು? ಒಂದೇ ಸಾಕು. ಒಂದು ಚೂರು ಚಿನ್ನಕ್ಕೆ ತೀಡಿತೀಡಿ ಪರೀಕ್ಷೆ ಮಾಡುವುದಕ್ಕೆ ಒಂದೇ ಸಾಕು ಅನ್ನುವುದು ಅದರ ಅರ್ಥ. ಒಂದು ಕಾವ್ಯಕ್ಕೆ ಇಂತಹ ಅನೇಕ ಅರ್ಥಗಳಿವೆ. ಒಂದು ವಿಶಿಷ್ಟ ಶಕ್ತಿಯನ್ನ ಕನ್ನಡ ಕವಿಗಳು ಆವಾಹಿಸಿದ್ದಾರೆ. ಒಗಟಿನಂತಹ ಪದ್ಯ 'ಕೊಡುಗಾನ ಕೋಳಿ ನುಂಗಿತ್ತಾ, ನೋಡವ್ವಾ ತಂಗಿ ಕೊಡಗಾನ ಕೋಳಿ ನುಂಗಿತ್ತಾ' ಕೋಡಗವನ್ನು ಕೋಳಿ ನುಂಗಲು ಸಾಧ್ಯವೇ ಇಲ್ವಲ್ಲಪ್ಪ! ಇದು ಯಾವ ಪದ್ಯ? ಶಿಶುನಾಳಷರೀಫರು ಯಾಕೆ ಹೀಗೆ ಬರೆದರು? ಅಂತ ನಿಮಗೆ ಅನ್ನಿಸಬಹುದು. 'ಒಳ್ಳು ಒನಕೆಯಾ ನುಂಗಿ, ಕಲ್ಲು ಗೂಟಾವ ನುಂಗಿ ಮೆಲ್ಲಲು ಬಂದ ಮುದುಕಿಯಾ...' ಅಂದ್ರೆ ಅಸಾಧ್ಯವಾದುದನ್ನು ಸಾಧ್ಯಗೊಳಿಸುವಂತಹ ಪ್ರತಿಭೆಗಳ ಸರಣಿ, ಅದು ಮೆರವಣಿಗೆ, ಅದು ಅಸಾಧ್ಯವಾದುದನ್ನು ಸಾಧ್ಯಗೊಳಿಸುವುದು. ಒಮ್ಮೆ ಜ್ಞಾನ ಸಾಕ್ಷಾತ್ಕಾರಗೊಂಡರೆ ಈ ಪ್ರಾಪಂಚಿಕವಾದ ಎಲ್ಲಾ ವಿಷಯಗಳು ಕೂಡ ಯಃಕಶ್ಚಿತ್ ಎನಿಸುತ್ತದೆ ಅನ್ನುವ ಸಂಗತಿಯನ್ನು ಅನೇಕ ಉದಾಹರಣೆಗಳ ಮೂಲಕ ಹೇಳಬಹುದು. ಕನ್ನಡ ಕಾವ್ಯಕ್ಕೆ ಅಂತಹ ಶಕ್ತಿ ಇದೆ. ತಾಳುವಿಕೆಗಿಂತ ತಪವೂ ಇಲ್ಲ ಎನ್ನುವಂತಹ ಒಳ್ಳೆಯ ಮಾತು ನೋಡಿ, 'ಆಚಾರವಿಲ್ಲದ ನಾಲಗೆ, ನಿನ್ನ ನೀಚ ಬುದ್ಧಿಯ ಬಿಡು ನಾಲಗೆ' ಬೇರೆಯವರಿಗೆ ಉಪದೇಶ ಮಾಡುವುದಲ್ಲ, ನಮಗೆ ನಾವೇ ಹೇಳಿಕೊಳ್ಳುವಂತಹ ಹಾಡಿದು. ಎಷ್ಟು ಅರ್ಥಪೂರ್ಣವಾದುದ್ದು! 'ಮಾನವ ಜನ್ಮ ದೊಡ್ಡದು, ಇದ ಹಾನಿಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಷ್ಟು ಅರ್ಥಪೂರ್ಣವಾದ ಮಾತು! 'ತಲ್ಲಣಿಸದಿರು ಕಂಡ್ಯ ತಾಳು ಮನವೆ' - ಈ ರೀತಿ ಕನ್ನಡದ ಕವಿಗಳು ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕಾಗಿ ಸಾವಿರ ಸಾವಿರ ಹಾಡುಗಳನ್ನ ಬರೆದಿದ್ದಾರೆ. ನಾವು ಕನ್ನಡಿಗರು ಮತ್ತು ಕನ್ನಡ ನಾಡಿನಲ್ಲಿ ಇರುವವರು, ಕನ್ನಡ ನಾಡಿನಲ್ಲಿ ಇರುವವರೆಲ್ಲಾ ಕನ್ನಡಿಗರೆ, ನಾವು ಈ ಕನ್ನಡದ ಶಕ್ತಿಯನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಬದುಕನ್ನ ಬಂಗಾರವಾಗಿಸುವುದಕ್ಕೆ ಅದನ್ನ ಅನ್ವಯಗೊಳಿಸಬೇಕು. 'ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ' ಎಷ್ಟು ಸರಳವಾದಂತಹ ನೀತಿಯ ಉಪದೇಶದ ಮಾತುಗಳು! ಅದನ್ನ ನಾವು ಅಳವಡಿಸಿಕೊಂಡರೆ, ನಮ್ಮ ಬದುಕು ಕೂಡ ಬಂಗಾರವಾಗುತ್ತದೆ ಎನ್ನುವುದು ಬಹಳ ಮುಖ್ಯವಾದಂತಹ ವಿಷಯ.

ಕನ್ನಡ ರಾಜ್ಯೋತ್ಸವ ಅನ್ನುವಂತಹದು ಕನ್ನಡದ ಇತಿಹಾಸ, ಕನ್ನಡದ ಸಾಹಿತ್ಯ, ಕನ್ನಡದ ಶೋಧನೆ, ಕನ್ನಡತನ ಇವೆಲ್ಲವನ್ನು ನೆನಪಿಸಿಕೊಂಡು ನಮ್ಮನ್ನು ಇನ್ನಷ್ಟು ಪುಟಗೊಳಿಸುವಂತಹ ಒಂದು ಸುಮುಹೂರ್ತ. ವರ್ಷಕ್ಕೆ ಒಂದು ದಿವಸ ಸಾವಿರಾರು ವರ್ಷದ ಕನ್ನಡದ ಪರಂಪರೆಯ ಮುತ್ತಿನಂಥ ಮಾತುಗಳನ್ನು ನಮ್ಮ ಬಾಳಿಗೆ ಅನ್ವಯಗೊಳಿಸಲಿಕ್ಕೆ ಸಾಧ್ಯವೇ? ಅಂತ ನಾವು ಯೋಚನೆ ಮಾಡಬೇಕು. 'ಗೀತೆ, ಕುರಾನಿನ, ಬೈಬಲಿನೊಳಗಿನ ಪುಟಪುಟ ಉದ್ದಗಲ ತಿಳಿದಿದೆಯಾದರೂ ಉಳಿದಿದೆ ಒಂದು ಅಕ್ಷರಗಳ ಆಳ" ಎಷ್ಟು ಸುಂದರವಾದಂತಹ ಕವಿತೆ ನೋಡಿ. ಕವಿತೆ ಓದುತ್ತೇವೆ, ಬೈಬಲ್ ಓದುತ್ತೇವೆ, ಕುರಾನ್ ಓದುತ್ತೇವೆ, ಆ ಪುಟಗಳ ಉದ್ದ ಅಗಲ ನಮಗೆ ಗೊತ್ತಿರುತ್ತೆ. ಆದರೆ ಅದರ ಆಳ ಗೊತ್ತಿರುವುದಿಲ್ಲ. ಪುಸ್ತಕಗಳ ಉದ್ದಗಲ ಮುಖ್ಯವಲ್ಲ, ಅದರ ಆಳ ಬಹಳ ಮುಖ್ಯವಾದುದು. ಅದರ ಆಂತರ್ಯವನ್ನು, ಅರ್ಥ ವಿಶೇಷತೆಯನ್ನು ನಾವು ಅರ್ಥಮಾಡಿಕೊಂಡರೆ, ಕನ್ನಡತನ ಸಾರ್ಥಕವಾಗುತ್ತದೆ. ಕನ್ನಡತನ ಎನ್ನುವುದು ಭಾರತೀಯತೆಗೆ ಪೂರಕವಾದಂತಹುದು. ಆ ಮೂಲಕವಾಗಿ ಸಮಗ್ರ ಭಾರತವನ್ನ, ವಿಶ್ವದ ಗುರುವನ್ನಾಗಿಸಲು ಸಾಧ್ಯವಾಗುತ್ತದೆ. ಅಂತಹ ಒಂದು ಸಂಕಲ್ಪ ಶಕ್ತಿ ಈ ಕನ್ನಡ ರಾಜ್ಯೋತ್ಸವದ ದಿವಸ ನಮ್ಮೆಲ್ಲರಿಗೆ ಸಾಧ್ಯವಾಗಬೇಕು. ಅಂತಹ ಉದಾತ್ತತೆಯನ್ನು, ವೈಶಾಲ್ಯವನ್ನು, ಸಾಮರಸ್ಯವನ್ನು, ಸೌಹಾರ್ದತೆಯನ್ನು ಕನ್ನಡದ ಮೂಲಕ ನಾವು ಸಾಕಾರಗೊಳಿಸೋಣ ಅಂತ ಹೇಳಿ, ಮತ್ತೊಮ್ಮೆ ನಿಮ್ಮೆಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳನ್ನ ಹೇಳಿ ನನ್ನ ಮಾತು ಮುಗಿಸುತ್ತೇನೆ ನಮಸ್ಕಾರ.

## ಹೆಮ್ಮೆಯ ನಾಡು ಮತ್ತು ಭಾಷೆ

ಕರ್ನಾಟಕ ನಮ್ಮ ನಾಡು
ಹಾಡೋಣ ನಮ್ಮ ನಾಡ ಹಾಡು
ಕನ್ನಡ ನಮ್ಮ ಭಾಷೆ
ಕಲಿಯುವುದು ನಮ್ಮ ಆಸೆ
ಕಾವೇರಿ ನಮ್ಮ ಜಲ
ಕನ್ನಡಿಗರಿಗೆ ಅದೇ ಬಲ



**ಕೃತಾರ್ಥ್ ಅಭಿಷೇಕ್**
3ನೆಯ ತರಗತಿ 'ಸಿ' ವಿಭಾಗ



## ನಮ್ಮ ಕರುನಾಡು

ಕನ್ನಡ ನಮ್ಮ ನಿಮ್ಮ ಹೆಮ್ಮೆಯ ಕರುನಾಡ
ಸಿರಿನಾಡ ಕರ್ನಾಟಕ
ಬಡವ ಶ್ರೀಮಂತ ಎಂತಿಲ್ಲ
ನಾವೆಲ್ಲರು ಒಂದೆ ರಾಜ್ಯ
ನಾವು ಕನ್ನಡಿಗರು ನಮ್ಮ ಭಾಷೆ ಕನ್ನಡ
ನಮ್ಮ ಉಸಿರು ನಮ್ಮ ಹೃದಯ
ಮಿಡಿಯುವುದು ಕನ್ನಡಕ್ಕಾಗಿ
ನಮ್ಮೊಳ್ಳೆತನವೇ ಸಹಜ, ನಗು ಮುಖವೇ ನೀತಿ
ಅದರ ಅರ್ಥವೇನು ತಪ್ಪಾಗಿ ತಿಳಿಯಬೇಡಿ
ನಮ್ಮ ನೆಲ ಜಲ ಭಾಷೆ ನಮಗೆ ಪ್ರೀತಿ
ನಮ್ಮತನವನ್ನು ನಿಂದಿಸಿದರೆ, ನಮಗಾಗುವುದು ಯಾತನೆ



**ಇಶಿತ ಆರಾಧ್ಯ**
5ನೆಯ ತರಗತಿ 'ಜಿ' ವಿಭಾಗ



## ರೈಲು ಬಂತು ರೈಲು

ಚುಕುಬುಕು ರೈಲು ಬಂತು
ರೈಲು ಕಂಬಿ ಡೊಂಕಾಗಿತ್ತು
ಅತ್ತಿಂದಿತ್ತ ರೈಲು ವಾಲ್ತು
ಮಕ್ಕಳಿಗೆಲ್ಲ ಹೆದರಿಕೆ ಆಯ್ತು
ಹಂಗೊ ಹಿಂಗೊ ರೈಲು ಬಂತು
ಅದು ತುಂಬಾ ಚೆನ್ನಾಗಿತ್ತು
ಬಂತು ಬಂತು ರೈಲು ಬಂತು
ಎಲ್ಲರಿಗೂ ತುಂಬಾ ಇಷ್ಟ ಆಯ್ತು



**ತ್ರಿದೀಕ್ಷಾ ಯು**
3ನೆಯ ತರಗತಿ 'ಎ' ವಿಭಾಗ

## ಚುಕ್ ಬುಕ್ ಚುಕ್ ಬುಕ್

ರೈಲು ಬಂತು ರೈಲು
ಚುಕ್ ಬುಕ್ ಚುಕ್ ಬುಕ್ ರೈಲು
ವೂ.........ವೂ..........ಕೂಗುತ್ತೆ
ಕಂಬಿ ಮೇಲೆ ಹೋಗುತ್ತೆ
ನಮ್ಮನ್ನೆಲ್ಲ ಹತ್ತಿಸ್ಕೊಂಡು
ಊರು ಊರು ಸುತ್ತುತ್ತೆ.



**ಅಭಿತ ಸಿ.ಜಿ**
3ನೆಯ ತರಗತಿ 'ಎ' ವಿಭಾಗ





## ಮುಗಿಲ ಕವಿತೆ

ಮುಗಿಲು ಬಿಳುಪಾಗಿದ್ದಾಗ, ಬೆಳಕು ಹರಡಿತು ಹೆಸರಿಗೆ
ಪಕ್ಷಿಗಳು ಹಾಡಿದವು ನಗು ಮೂಡಿತು ನಿಸರ್ಗದಲ್ಲಿ
ಮೌನದಲ್ಲಿ ಮಾತುಗಳು, ಹೃದಯದಲ್ಲಿ ಕನಸುಗಳು
ಕಾಲದ ಹಾದಿಯಲಿ, ಪ್ರೀತಿಯ ಪಾದಗಳು




**ನಕ್ಷ ಕೆ**
5ನೆಯ ತರಗತಿ 'ಹೆಚ್' ವಿಭಾಗ

## ಕನ್ನಡ ಹೃದಯದ ಧ್ವನಿ

ಮಣ್ಣಿನ ಸುವಾಸನೆ ಕನ್ನಡ
ಮಾತಿನ ಸಿಹಿತನ ಕನ್ನಡ
ಮನದ ಸ್ಪಂದನೆ ಕನ್ನಡ
ನನ್ನ ಪ್ರಾಣದ ಧರ್ಮ ಕನ್ನಡ
ಗುಬ್ಬಚ್ಚಿ ಹಾಡುವ ಗಾನದಲಿ
ಕೋಗಿಲೆ ಕೂಗುವ ನಾದದಲಿ
ಕನ್ನಡ ತಾಯಿಯ ಮುಗ್ಧ ನಗು
ಎಲ್ಲರ ಹೃದಯದ ಮಧುರ ರಂಗು
ನಾವು ಹೆಮ್ಮೆಯಿಂದ ಹಾಡುವ ಹಾಡು
ಜಯ ಭಾರತ ಜನನಿಯ ತನುಜಾತೆ
ಆದರೆ ಮನದಾಳದ ಮಾತು ಒಂದೇ
ಜಯ – ಜಯ ಕನ್ನಡ ಮಾತೆ.



ನಕುಲ್ ಜಿ ಗೊಲ್ಲಾ
5ನೆಯ ತರಗತಿ 'ಜಿ' ವಿಭಾಗ





## ಜಿಟಿ ಜಿಟಿ ಮಳೆ

ಜಿಟಿ ಜಿಟಿ ಮಳೆಯು
ಧರೆಯಲಿ ಬಿದ್ದು
ನೆಲವನು ತೋಯಿಸಿದೆ
ಬಿರು ಬಿಸಿಲಿಗೆ ಕಾದು
ಬಾಯಾರಿದ ಭೂಮಿಗೆ
ನೀರನು ಕುಡಿಸುತಿದೆ
ಮರ ಗಿಡಗಳಿಗೆ
ಪ್ರಾಣಿ ಪಕ್ಷಿಗಳಿಗೆ
ತಂಪನು ಎರೆಯುತಿದೆ



ನಿಹಾಲ್ ಚಂದ್ರಶೇಖರ್
4ನೆಯ ತರಗತಿ 'ಜಿ' ವಿಭಾಗ

## ಪ್ರಕೃತಿ

ಹಸಿರು ತುಂಬಿದ ಮರಗಳು
ನೀಲಾಕಾಶದ ನಕ್ಷತ್ರಗಳು
ಬಾನ ತುಂಬ ಹಕ್ಕಿಗಳು
ಗಿಡ ಮರಗಳ ತುಂಬ ಘಮಘಮಿಸುವ ಹೂಗಳು
ಜುಳುಜುಳು ಹರಿಯುವ ನದಿಗಳು
ಸ್ತಬ್ಧವಾಗಿ ನಿಂತ ಗುಡ್ಡ ಬೆಟ್ಟಗಳು
ಈ ಸುಂದರ ನಿಸರ್ಗವನ್ನು ಕಾಣಲು ಕಾತುರವಾಗಿ ನಿಂತ ಕಣ್ಮನಗಳು
ಮೈ ಮನಸ್ಸುಗಳಿಗೆ ಸಂತಸವನ್ನು ನೀಡುತ್ತಾ ಬಂದಿರುವ
ಮಳೆಯ ಹನಿಗಳು, ಇರುವೆಗಳ ಸಾಲುಗಳು,
ಬಣ್ಣ ಬಣ್ಣದ ಚಿಟ್ಟೆಗಳು
ಅವುಗಳನ್ನು ಹಿಡಿಯಲು ಅವುಗಳ ಹಿಂದೆ ಓಡುವ
ನನ್ನ ಪುಟ್ಟ ಕೈ ಕಾಲುಗಳು





ಸುರಭಿ ಕೆ ಎಸ್
5ನೆಯ ತರಗತಿ 'ಎಫ್' ವಿಭಾಗ


## ಮಯೂರವರ್ಮ



ಕದಂಬ ರಾಜ್ಯವನ್ನು ಕರ್ನಾಟಕದ ಪ್ರಥಮ ರಾಜ್ಯವೆಂದು ವರ್ಣಿಸಲಾಗುತ್ತಿದೆ. ಈ ರಾಜ್ಯದ ಸ್ಥಾಪಕ ಮಯೂರವರ್ಮ (ಕ್ರಿ.ಶ. 325-345). ಈತನ ರಾಜಧಾನಿ ಬನವಾಸಿ. ತಾಳಗುಂದ ಗ್ರಾಮದಲ್ಲಿ ಹುಟ್ಟಿ ಬೆಳೆದ ಯುವಕನೊಬ್ಬ ಉನ್ನತ ವ್ಯಾಸಂಗಕ್ಕಾಗಿ ಕಂಚಿ ಪಟ್ಟಣಕ್ಕೆ ತೆರಳಿದ್ದಾಗ ಪಲ್ಲವರಿಂದ ಅವಮಾನಿತನಾಗುತ್ತಾನೆ. ತನ್ನ ಸ್ವಾಭಿಮಾನಕ್ಕೆ ಧಕ್ಕೆ ತಂದ ಪಲ್ಲವರ ವಿರುದ್ಧ ಖಡ್ಗ ಹಿಡಿದು, ಅವರ ಸೊಲ್ಲಡಗಿಸಿ ಸ್ವಾಭಿಮಾನದ ಸಂಕೇತವಾಗಿ ಕದಂಬ ಸಾಮ್ರಾಜ್ಯ ನಿರ್ಮಾಣ ಮಾಡುತ್ತಾನೆ ಎಂಬುದು ಇತಿಹಾಸ.

ಈತನ ಕುರಿತಾಗಿ ವರನಟ ರಾಜಕುಮಾರ್ ಅವರ ಅಭಿನಯದಲ್ಲಿ "ಮಯೂರ" ಚಲನಚಿತ್ರವು ತಯಾರಾಗಿದೆ.

## ಚಿಟ್ಟೆ



ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಅಲ್ಲಿಂದಿಲ್ಲಿಗೆ ಹಾರುವ ಚಿಟ್ಟೆ
ಹೂವಿನ ಜೊತೆಗೆ ಆಡುವ ಚಿಟ್ಟೆ
ಮಕರಂದವನು ಹೀರುವ ಚಿಟ್ಟೆ

ಪುಟ್ಟ ಚಿಟ್ಟೆ ರೆಕ್ಕೆ ಬಿಚ್ಚಿ ಎಲ್ಲಿ ಹಾರುವೆ
ನಿನ್ನ ರೆಕ್ಕೆ ನನಗೂ ಕೊಡು ನಾನು ಹಾರುವೆ
ಹೂವಿನಿಂದ ಹೂವಿಗೆ ಹಾರಿ ನೋಡುವೆ
ಬಣ್ಣ ಬಣ್ಣದ ರೆಕ್ಕೆಯನ್ನು ಬೀಸಿ ಹಾರುವೆ
ನಿನ್ನ ಹಿಡಿಯಲು ನಾ ಆಸೆ ಪಟ್ಟೆ

ಆದರೆ ನೀನು ಹಾರಿಯೇ ಬಿಟ್ಟೆ
ನಿನ್ನನು ನಾನು ನೋಡೇ ಬಿಟ್ಟೆ
ಕೈಯಲ್ಲಿ ನಿನ್ನ ಹಿಡಿದೇ ಬಿಟ್ಟೆ
ಆದರೆ ಕೊನೆಗೆ ಹಾರಲು ಬಿಟ್ಟೆ

ನಲಿನಲಿದಾಡುತ್ತಾ ಸವಿಯನು
ಸವಿಯುವ ಚಿಟ್ಟೆ
ಬರೆಯುವ ಕೈಗಳಿಗೆ
ಕವಿತೆಯಾಗಿ ಬಿಟ್ಟೆ



ಆದ್ಯಾ ಪ್ರವೀಣ್ ಮೆಹ್ತಾ
4ನೆಯ ತರಗತಿ 'ಎ' ವಿಭಾಗ



## ಸಂಭ್ರಮ

ಮಳೆ ಬಂತು ಮಳೆ
ಮಳೆ ಬಂತು ಮಳೆ
ಬಿಳಿಯ ಮೋಡ ಕರಗಿ
ಮುತ್ತಿನಂತ ಹನಿಗಳೆಲ್ಲ ಭೂಮಿ ತಾಕಿತು

ಬೇಸಿಗೆಯ ಬಿಸಿಲು ಮಾಯವಾಯಿತು
ತಂಪಾದ ಗಾಳಿ ಎಲ್ಲೆಡೆ ಹರಡಿತು
ಭೂಮಿಗಿಳಿದ ಹನಿಗಳೆಲ್ಲ ಹಳ್ಳವಾಯಿತು
ಮಣ್ಣಿನ ಸುವಾಸನೆ ಗಾಳಿ ಸೇರಿತು

ಹಸಿರು ಖುಷಿಯಿಂದ ಕಂಗೊಳಿಸಿದವು
ಮಕ್ಕಳು ನಗುತ ಕುಣಿದಾಡಿದರುವು
ಹಕ್ಕಿಗಳು ಹಾಡನು ಹಾಡಿದವು
ನದಿಗಳು ಬಳುಕುತ ಹರಿದವು

ಮಳೆ ಬಿಸಿಲಿನ ಆಟದಲಿ ಮೂಡಿತು
ಏಳು ಬಣ್ಣದ ಕಾಮನ ಬಿಲ್ಲು
ಮಳೆ ಬಂತು ಮಳೆ ತಂದಿತು
ಜಗತ್ತಿಗೆ ಹೊಸ ಬಣ್ಣಗಳ ಕಳೆತಂತು



ಸ್ವರ ಬರುವೆ
4ನೆಯ ತರಗತಿ 'ಬಿ' ವಿಭಾಗ

## ಕಾಮನಬಿಲ್ಲು

ಅಂದದ ಚೆಂದದ ಕಾಮನಬಿಲ್ಲೆ
ಕಣ್ಮನ ಸೆಳೆಯುವ ಮಳೆಬಿಲ್ಲೆ

ಸೂರ್ಯನ ಕಿರಣ
ಮಳೆಗೆ ತಾಗಿ ಆಗುವೆ ನೀನು
ನನ್ನ ಹೃದಯವೇ ಶರಣ
ಏಳು ಬಣ್ಣದಿಂದ ಕೂಡಿರುವೆ ನೀನು ॥ ಅಂದದ ॥

ನಿನ್ನನ್ನು ನೋಡಲು
ಕಾದಿರುವರು ಹಿರಿಯರು ಕಿರಿಯರು
ನಿನ್ನಂದವ ನೋಡಿದ ಜನರು
ನೋವನು ಮರೆವರು ॥ ಅಂದದ ॥

ನಿನ್ನನ್ನು ನೋಡಿದರೆ ನವಿಲಿಗೂ ಒಲವು
ನನ್ನನ್ನೇ ಮರೆತೆ ದೃಷ್ಟಿಸುತ್ತಾ ನಿನ್ನ ಚೆಲುವು
ಹೇ ಮಳೆಬಿಲ್ಲೆ! ಪರಮಾತ್ಮನ
ಅದ್ಭುತ ಸೃಷ್ಟಿ ನೀನು ॥ ಅಂದದ ॥



ಗೌರವ್ ಕೆ
6ನೆಯ ತರಗತಿ 'ಎ' ವಿಭಾಗ



## ಮಳೆ



ಮಳೆ ಮಳೆ
ನೀ ಈ ಭೂಮಿಗೆ ಕಳೆ
ನೀ ಇಲ್ಲದೆ ನಮಗೆ
ಬರಡಾಗಿದೆ ಜೀವನ

ಟಪ ಟಪವೆಂದು ಸುರಿಯುವೆ
ಸುಂದರವಾಗಿ ನಲಿಯುವೆ
ಆಕಾಶದಿಂದ ಸುರಿಯುವೆ
ವೇಗವಾಗಿ ಬರುವೆ ನೀ ಇಳೆಗೆ

ನೆಲವನ್ನು ತಟ್ಟುವೆ
ಹಸಿರನ್ನು ಚಿಗುರಿಸುವೆ
ಮಳೆ ಮಳೆ
ನೀ ಈ ಭೂಮಿಗೆ ಕಳೆ

ಆಕಾಶವನ್ನು ಬಣ್ಣಗಳಿಂದ ಕೂಡಿಸಿ
ಸೂರ್ಯನ ಸಹಾಯದಿಂದ
ನೀ ಬರುವೆ ಮಳೆ ಮಳೆ
ನೀ ಈ ಭೂಮಿಗೆ ಕಳೆ



ದಿಯಾ ನರೇನ್
೬ನೆಯ ತರಗತಿ 'ಜಿ' ವಿಭಾಗ



## ನನ್ನಮ್ಮ

ನನ್ನ ಮೊದಲ ತೊದಲು ನುಡಿ ಅಮ್ಮ
ನನ್ನ ಕೈ ಹಿಡಿದು ನಡೆಸಿದವಳು ಅಮ್ಮ
ನನಗೆ ಬೆಚ್ಚನೆಯ ಮಡಿಲು ಅಮ್ಮ
ನನ್ನ ಅಕ್ಷರಕ್ಕೆ ಜೀವವೇ ಅಮ್ಮ

ನನಗೆ ಮೊದಲು ಕೈ ತುತ್ತು ನೀಡಿದ್ದು ಅಮ್ಮ
ನನ್ನ ಕನಸುಗಳ ರೆಕ್ಕೆಯೇ ಅಮ್ಮ
ನನ್ನ ಹೃದಯದ ಬಡಿತವೇ ಅಮ್ಮ
ನನ್ನ ಕುತೂಹಲದ ಮಿಡಿತವೇ ಅಮ್ಮ

ಜೀವ ಒತ್ತೆ ಇಟ್ಟು ಜನ್ಮ ಕೊಟ್ಟವಳು ನನ್ನಮ್ಮ
ನನ್ನ ಜಗವೇ ನನ್ನಮ್ಮ
ನನ್ನ ರಕ್ಷೆಯ ಮಡಿಲು ಅಮ್ಮ
ನನ್ನ ಪದಗಳಿಗೆ ಅಕ್ಷರವೇ ಅಮ್ಮ



ಶುಶ್ರುತ್ ನಾಗಚಂದ್ ಎನ್
೬ನೆಯ ತರಗತಿ 'ಎಚ್' ವಿಭಾಗ

## ಬಾಲ್ಯದ ದಿನಗಳು

ಬಾಲ್ಯವೆಂದರೆ ಮುದ್ದಿನ ಕಾಲ
ಹೃದಯದಿ ಅರಳಿದ ಬೆಳಕು
ಸಣ್ಣ ಆಟ, ಸಣ್ಣ ನಗುವಾದರೂ
ಅದು ನೀಡುವುದು ದೊಡ್ಡ ಸಂತೋಷ

ಬಿದ್ದ ಮೇಲೆ ಎದ್ದು ನಿಂತೆ
ತಾಯಿ ಕೈ ಹಿಡಿದ ಒಲವು
ಸ್ನೇಹಿತರ ಜೊತೆ ನಗುತ್ತಿದ್ದ ಹೊತ್ತು
ಅದುವೇ ಜೀವನದ ಮೊದಲ ಸಿಹಿ ನೆನಪು

ಕಾಲ ಹೋದರೂ ನೆನಪು ಉಳಿಯುವುದು
ಮನದೊಳಗೆ ಹಗುರಾಗಿ ತೇಲುವುದು
ಬಾಲ್ಯವೊಂದು ಮುದ್ದಾದ ಅಪ್ಪುಗೆ-
ಹೋದರೂ ಹೃದಯದಲ್ಲಿ ಬದುಕಿರುವುದು



ಧಾನ್ವಿ ಆರ್ ಕೆ
7ನೆಯ ತರಗತಿ 'ಜಿ' ವಿಭಾಗ



## ನನ್ನ ಶಾಲೆ



ನನ್ನ ಶಾಲೆ ಬೆಳಕಿನ ಮನೆ
ಜ್ಞಾನದ ನದಿ ಹರಿವು ಇಲ್ಲಿ ನೆನೆ
ಗುರುಗಳ ಮಾತು ಮುತ್ತಿನಂತೆ
ಬಾಳ ಪಥದ ದೀಪದಂತೆ

ಪಾಠದ ಮಧ್ಯೆ ಕನಸು ಬೆಳೆದು
ಭವಿಷ್ಯದ ದಾರಿ ಮನಸು ತೆರೆದು
ಆಟದ ಮೈದಾನ ಸಂತಸದ ತಾಣ
ನಮ್ಮ ಹರ್ಷದ ಆ ಅಮೃತ ಕ್ಷಣ

ಶಿಸ್ತು, ಒಗ್ಗಟ್ಟು, ಪ್ರೀತಿಯ ಪಾಠವ ಕಲಿಸಿ
ಬದುಕಿನ ಗುರಿಯ ಕಡೆ ನಮ್ಮನ್ನು ನಡೆಸಿ
ಎಂದಿಗೂ ಮರೆಯದ ಪವಿತ್ರ ಸ್ಥಳ
ನನ್ನ ಶಾಲೆಯೇ ನನಗೆ ಸಂತಸದ ಫಲ

ನಾಳೆ ನಾವೆಲ್ಲ ಹೊರಟರೆ ದೂರ
ಈ ನೆನೆಪು ಉಳಿವುದು ಸದಾ ಅಮರ
ನನ್ನ ಶಾಲೆ ನನ್ನ ಜೀವನದಾತೆ
ಬಾಳ ಹಾದಿಯ ಸುಂದರ ಪ್ರೇರಣ ಗೀತೆ



ಗಾನವಿ ಬಿ
೮ನೆಯ ತರಗತಿ, 'ಇ' ವಿಭಾಗ



## ಸ್ನೇಹ

ಸ್ನೇಹದ ಹಾದಿಯಲ್ಲಿ ಆನಂದ
ಸ್ನೇಹದ ಸೆಳೆತದಲ್ಲಿ ಬೆಸೆಯುವುದು ಈ ಜೀವ
ಗುಂಪಲ್ಲಿಯು ನೆನೆಸುವ ಸಮಯದಲ್ಲಿ ಪ್ರೀತಿಯ ಸೇವಾ
ಹಗಲು ರಾತ್ರಿ ಜೊತೆಯಾಗಿ ನಡೆಯುವ ಹಾದಿ
ಪ್ರತಿಯೊಂದು ಕ್ಷಣವು ಉಲ್ಲಾಸದ ಹಾಡು ಹಾಡಿ

ಹೊಸ ಕನಸ ಹೊಸ ಹಾಳೆಗಳನ್ನು ಓದುತ್ತಾ
ಸ್ನೇಹಪೂರಿತ ಕ್ಷಣಗಳನ್ನು ಜೋಡಿಸುತ್ತಾ
ಬಾಳಲಿ ಬೆಸುಗೆಗೊಳ್ಳಲಿ ನಮ್ಮ ಬಂಧ
ಸ್ನೇಹವೇ ನಮ್ಮ ಬದುಕಿನ ಆನಂದ



ಪಲ್ಲವಿ ಜಿ
೮ನೆಯ ತರಗತಿ, 'ಇ' ವಿಭಾಗ

## ಕನ್ನಡ ಬಳಸಿ, ಕನ್ನಡ ಉಳಿಸಿ



ಕನ್ನಡ ಬಳಸಿ, ಕನ್ನಡ ಉಳಿಸಿ, ಕನ್ನಡ ಬೆಳೆಸಿ ಬನ್ನಿರಿ
ಕನ್ನಡ ರಕ್ಷಿಸಿ, ವಿಶ್ವಕ್ಕೆ ಮುಟ್ಟಿಸಿ, ಹರುಷವನ್ನು ತನ್ನಿರಿ॥

ಬಳಸಿ ಕನ್ನಡ, ಉಳಿಸಿ ಕನ್ನಡ ನಮ್ಮ ಭಾಷೆ ನುಡಿಯಿರಿ
ರಕ್ಷಿಸಿ ಕನ್ನಡ, ಬೆಳೆಸಿ ಕನ್ನಡ ನಮ್ಮ ಹಾಡ ಹಾಡಿರಿ
ಹೆಸರು ಕನ್ನಡ, ಉಸಿರು ಕನ್ನಡ ನಮ್ಮ ಭಾಷೆ ಪಸರಿಸಿ
ನಾಡು ಕನ್ನಡ, ನುಡಿಯು ಕನ್ನಡ ಪತಾಕೆಯನ್ನು ಹಾರಿಸಿ ॥ ಕನ್ನಡ ॥

ಇಲ್ಲಿಯವರೆಗೆ ನಮ್ಮ ಪಯಣ ತಪ್ಪಾಗಿ ಸಾಗಿದೆ
ನಲ್ಮೆಯ ಕಸ್ತೂರಿ ಮೃಗದಿಂದ ಹಾಲಿನತ್ತ ಸಾಗಿದೆ
ಕನ್ನಡಿಗರು ನಲಿಯುತಿಹರು ಹೊರಭಾಷೆಯ ಆಟಕೆ
ತಳ್ಳುತಿಹರು ಸ್ವಂತ ಭಾಷೆ ಕನ್ನಡವನ್ನು ನಾಶಕೆ ॥ ಕನ್ನಡ ॥

ಈ ಸ್ಥಿತಿಯು ಕನ್ನಡಕ್ಕೆ ಮಾತ್ರ ಅಲ್ಲ ಅನ್ವಯ
ಎಲ್ಲಾ ಭಾರತೀಯ ಭಾಷೆಗಳಿಗೂ ಕೂಡ ನಿರ್ಣಯ
ಇದರ ಬಗ್ಗೆ ನಾವು ಮೂಡಿಸಲೇಬೇಕು ಜಾಗೃತಿ
ಏಕೆಂದರೆ ಉಳಿಸುವುದು ಅಗತ್ಯ ನಮ್ಮ ಸಂಸ್ಕೃತಿ ॥ ಕನ್ನಡ ॥

ಇದು ನಮ್ಮೆಯ, ಇದು ಹೆಮ್ಮೆಯ, ಇದು ನಮ್ಮ ಭಾಷೆ ಕನ್ನಡ
ನಾವು ವಾಸಿಸುವ ನಮ್ಮ ರಾಜ್ಯವೇ ಕರ್ನಾಟಕ
ಈ ಕನ್ನಡ ರಾಜ್ಯೋತ್ಸವ ಕರ್ನಾಟಕವನ್ನು ಬೆಳಗಲಿ
ಇದರ ಜೊತಗೆ ಕನ್ನಡ ಮತ್ತು ಭಾರತವನು ಬೆಳೆಸಲಿ ॥ ಕನ್ನಡ ॥



ಲತೇಶ್ ಎಚ್ ಎಸ್
೮ನೆಯ ತರಗತಿ, 'ಜ' ವಿಭಾಗ

## ಕಾಂಕ್ರೀಟ್ ಕಾಡಿನಲಿ



ಸಮಯದ ನಡುವಿನ ಯುದ್ಧದಲಿ
ಸಾಗುವ ಜೀವನ ಚಕ್ರದಲಿ
ತಾಳ್ಮೆಯ ಭಾವವು ಮೂಡಿದರೆ
ಅರಳುವುದು ಹೂವು ಕಾಂಕ್ರೀಟ್ ಕಾಡಿನಲಿ

ಸುತ್ತಲೂ ಕಟ್ಟಡ ಮೂಡುವಲಿ
ಹೊಗೆ ಕಲ್ಮಷಗಳ ಆವರಣದಲಿ
ಪರಿಸರ ರಕ್ಷಣೆಯ ಮಾಡಿದರೆ
ಅರಳುವುದು ಹೂವು ಕಾಂಕ್ರೀಟ್ ಕಾಡಿನಲಿ

ಮಕ್ಕಳ ಹಿರಿಯರ ಜಗಳದಲಿ
ಬೇಜವಾಬ್ದಾರರಾದರೆ ಯೌವ್ವನದಲಿ
ಗೌರವ ಶಿಸ್ತಿನ ಅರಿವು ಮೂಡಿದರೆ
ಅರಳುವುದು ಹೂವು ಕಾಂಕ್ರೀಟ್ ಕಾಡಿನಲಿ


ಮೋಸ ವಂಚನೆಗಳ ಜೀವನದಲಿ
ದ್ವೇಷ ಕಿಚ್ಚಿನ ನರಕದಲಿ
ಪ್ರೀತಿ ಕರುಣೆಯ ಸ್ವರ್ಗ ಮೂಡಿದರೆ
ಅರಳುವುದು ಹೂವು ಕಾಂಕ್ರೀಟ್ ಕಾಡಿನಲಿ

ಬಿಳಿ ಕರಿ ಒಣ ಬರ ನಾಡಿನಲಿ
ಜಲ ಜೀವನವಿಲ್ಲದ ತಾಣದಲಿ
ಹಸಿರು ಬಣ್ಣ ಚೇತನ ಮೂಡಿದರೆ
ಅರಳುವುದು ಹೂವು ಕಾಂಕ್ರೀಟ್ ಕಾಡಿನಲಿ

ಬದಲಾವಣೆಯ ಹೆಸರಿನಲಿ
ಬರಡಾಯಿತು ಜೀವನ ನಿಸ್ಸಾರದಲಿ
ನಿಜ ಅಭಿವೃದ್ಧಿಯ ಚಿಹ್ನೆಗಳಿದ್ದರೆ
ಅರಳುವುದು ಹೂವು ಕಾಂಕ್ರೀಟ್ ಕಾಡಿನಲಿ



**ಪ್ರಣವ್ ಸಿ ಎನ್**
10ನೆಯ ತರಗತಿ 'ಎಫ್' ವಿಭಾಗ



## ಮರೆತಿದ್ದೇವೆ ನಾವು

ಕಟ್ಟಡಗಳನು ನಾವು
ಎಲ್ಲೆಲ್ಲೂ ಕಂಡು
ಜೀವನದ ಸಣ್ಣ ಬೆಳಕುಗಳನು
ರಾತ್ರಿಯ ಆಕಾಶದಲ್ಲಿ ಹೊಳೆಯುವ ತಾರೆಗಳನು
ಬೆಳಕನೀವ ಸೂರ್ಯನನು
ಝುಳುಝುಳನೆ ಹರಿವ ನದಿಗಳನು
ಎಲ್ಲವನ್ನು ಮರೆತಿದ್ದೇವೆ ನಾವು॥1॥

ಹಸಿರಾದ ಕಾಡುಮೇಡುಗಳು
ನಮ್ಮ ಇಳೆಯಲಿ
ಇಂಪಾದ ಮಳೆ ಹನಿಗಳು
ಶಾಂತಿ ತರುವುದು ಮನಸ್ಸಿನಲ್ಲಿ
ಹುಟ್ಟು ಸಾವಿನಲ್ಲಿ
ಜೀವನದ ಚಿಕ್ಕಪುಟ್ಟ ಸುಖ ದುಃಖಗಳಲ್ಲಿ
ನಿಜವಾದ ಸೌಂದರ್ಯವನ್ನು ಕಾಣಲು
ನಾವು ಮರೆತಿದ್ದೇವೆ ॥2॥

ಕಂಡಕಡೆಯೆಲ್ಲಾ ಆವರಿಸಿದೆ
ನಮ್ಮ ಮನದಲ್ಲಿ ಕತ್ತಲು
ಪ್ರೀತಿ ವಿಶ್ವಾಸ ಗೌರವಗಳನ್ನು
ನಮ್ಮೆಲ್ಲರಲ್ಲಿ ಬಿತ್ತಲು
ಮಾನವನ ಇಂದಿನ ಜೀವನದಲ್ಲಿ
ಕೆಟ್ಟತನ ತೊರೆದು ಬಾಳಲು
ಬದುಕಿನ ಸಣ್ಣ ಖುಷಿಗಳನ್ನು ಆಲಿಸಿ
ಆನಂದಿಸಿ ಎಲ್ಲರಿಗೂ ಹರಡಿ
ಧನ್ಯರಾಗಬೇಕು ॥3॥



**ಆಹನಾ ಎ ವಾಸನ್**
10ನೆಯ ತರಗತಿ 'ಎ' ವಿಭಾಗ

## ಕಣ್ಣಂಚಿನ ಹನಿ

ತಾಯಿಯ ಮಹತ್ವವನ್ನು
ಬಲ್ಲವರೇ ಎಲ್ಲ
ಆದರೆ ಈಗಿನ ಕಥೆಯ ಅರ್ಥ
ಕೇಳಿ ಕಣ್ಣೀರ ಸುರಿಸಬಲ್ಲ

ಒಂದು ಊರಲ್ಲಿ ಒಬ್ಬ ಕಣ್ಣಿರದ
ತಾಯಿ ಇದ್ದಳು
ಗಂಡನು ಸತ್ತ ಸುದ್ದಿ ಕೇಳಿ
ಚಿಂತೆಯಿಂದ ಬಿದ್ದಳು

ಓರ್ವ ಪುತ್ರನನ್ನು ಒಳ್ಳೆಯ ವ್ಯಕ್ತಿಯನ್ನಾಗಿ
ಮಾಡುವ ಕನಸ ಕಂಡಳು
ಆದರೆ ಮಗ ಆಕೆ ಕನಸನ್ನು
ಮಾಡುವನೋ ನನಸು!

ಪರರ ಮನೆಯಲಿ ಚಿಕ್ಕಪುಟ್ಟ
ಕೆಲಸವನ್ನು ಮಾಡುವಳು
ಮಗನ ಶಾಲೆ ಮುಗಿದ ಮೇಲೆ
ಓಡೋಡಿ ಬರುವಳು

ವಿದ್ಯೆಯಲ್ಲಿ ದಿನೇ ದಿನೇ
ಉತ್ತೀರ್ಣನಾದ ಕಂದ
ಮಾಡಿತು ಅಮ್ಮನ ಕನಸನ್ನು
ಹಾಲಿನಂತೆ ಮಂದ

ಆದರೆ ಒಂದು ದಿನ ಮಗನ
ಸ್ನೇಹಿತರು ತನ್ನ ತಾಯಿಯನ್ನೆಂದರು ಕುರುಡಿ
ಆದ್ದರಿಂದ ಮಗನ ಮನಸ್ಸಾಯಿತು
ಕಪ್ಪು ದುಷ್ಟ ಕರಡಿ

ಆದರೂ ಪ್ರೀತಿಯಿಂದ ಕಳುಹಿಸಿದಳು
ಮಗನನ್ನು ಕಾಲೇಜಿಗೆ
ಏನೂ ಕಲಿಯದ ಮಗ
ತನ್ನ ಅಮ್ಮನನ್ನು ಅಟ್ಟಿದನು ಬೀದಿಗೆ

ತನ್ನ ಮಗ ಶ್ರೀಮಂತನಾಗಿ
ಹೆಂಡತಿ ಮಕ್ಕಳ ಜೊತೆ ಇದ್ದನು
ಆದರೆ ತನ್ನ ಅಮ್ಮನನ್ನು
ದಿನೇ ದಿನೇ ಮರೆತನು

ಒಂದು ದಿನ ಅಮ್ಮ ಮಗನನ್ನು
ನೋಡಲೆಂದು ಬಂದಳು
ಆದರೆ ಮಗನು ದೂರಕ್ಕೆ ತಳ್ಳಿ
ಮುದುಕಿ ಎಂದು ಹಂಗಿಸಿದನು.

ಒಂದು ದಿನ ಮಗನು ತನ್ನ
ಊರಿಗೆ ಬಂದನು
ತಾಯಿ ಸತ್ತ ಸುದ್ದಿಯನ್ನು ತಿಳಿದು
ನೆಲಕ್ಕೆ ಬಿದ್ದನು

ಓದಿದನು ತನ್ನ ಅಮ್ಮ
ಬರೆದ ಪತ್ರವನ್ನು
'ತಂದೆ ಜೊತೆಗೆ ಅಪಘಾತದಲ್ಲಿ
ಕಳೆದುಕೊಂಡ ಮಗ ಕಣ್ಣನು'

ಹಾಗಾಗಿ ನನ್ನ ಕಣ್ಣನ್ನು
ನಿನಗೆ ದಾನ ಮಾಡಿದೆ
ಎಂದು ತಿಳಿದಾಗ
ಮಗನು ಕುಸಿದನು ಭೂಮಿಗೆ




ಅಕ್ಷಜ ಸ್ಕಂದ ಬಿ
೯ನೆಯ ತರಗತಿ 'ಎಫ್' ವಿಭಾಗ




## ಕಂಬನಿ

ಶಿವರಾತ್ರಿಯ ಶಿವನ ನಾಟ್ಯದ ಆನಂದ ಭಾಷ್ಪವೂ
ಸತಿಯ ಸಾವಿಂದ ಅದೇ ಕಣ್ಣಲ್ಲಿ ಬಂದ
ವಿನಾಶದ ಹನಿಯು ಬೇರೆಯೇ?
ಹೃದಯ ಒಂದೇ ಅದರ ಭಾವ ಬೇರೆ
ವ್ಯತ್ಯಾಸವೇನು?

ಕೇಳು ನೀನು ಈ ವ್ಯತ್ಯಾಸವ
ಆನಂದ ಭಾಷ್ಪ ತಂದಿತು ಜಗತ್ತಿನಲ್ಲಿ ಹೂವಿನ ಸುರಿಮಳೆ
ದುಃಖದ ಕಣ್ಣೀರು ಊದುವಂತೆ ಮಾಡಿತು ಪ್ರಳಯದ ಕಹಳೆ
ಸಂತಸದ ಹನಿಯಿಂದ ಊರಲ್ಲಿ ಹಬ್ಬದ ವಾತಾವರಣ
ಶೋಕದ ಹನಿಯಿಂದ ಲೋಕದಲ್ಲಿ ಧ್ವಂಸದ ಭಯ

ವ್ಯತ್ಯಾಸವಿಷ್ಟೇ, ಮನಸ್ಸಿನ ಭಾವನೆಯ ಸ್ಥಿತಿ
ದುಃಖದಿಂದ ಬರುವುದು ನಮಗೆ ದುರ್ಗತಿ
ಕಣ್ಣೀರಿನಲ್ಲಿ ವ್ಯತ್ಯಾಸವಿಲ್ಲ
ಅದು ಭಾವನೆಯದ್ದು
ಕಣ್ಣಂಚಿನಿಂದ ಬಿದ್ದ ಈ ಹನಿಯ ಕಥೆ
ಪರಶಿವನದ್ದು




ನೂಪುರ ಪಿ
೯ನೆಯ ತರಗತಿ 'ಎ' ವಿಭಾಗ




## ನಾ ಮಾಡಿದ ಅಡುಗೆ



ಅಂದು ಶನಿವಾರ. ನನಗೆ ರಜೆ ಇತ್ತು. ನನ್ನ ಅಮ್ಮ ಒಬ್ಬರು ಶಿಕ್ಷಕಿ. ಅವರಿಗೆ ಶಾಲೆ ಇತ್ತು. ಅಂದು ಕೆಲಸ ಮುಗಿಸಿ ಮಧ್ಯಾಹ್ನ ಮನೆಗೆ ಬಂದರು. ಬಹಳ ಸುಸ್ತಾಗಿದ್ದರು. ಬೆಳಗ್ಗೆ ಶಾಲೆಗೆ ಬೇಗ ಹೋಗಬೇಕಾಗಿದ್ದರಿಂದ ಮಧ್ಯಾಹ್ನಕ್ಕೆ ಅಡುಗೆ ಮಾಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಅಮ್ಮ ಸುಸ್ತಾಗಿರುವುದನ್ನು ಕಂಡು ನನ್ನ ಮನಸ್ಸಿಗೆ ಬೇಸರವೆನಿಸಿತು. ನನಗೆ ಹಸಿವು ಆಗುತ್ತಿತ್ತು. ಆದರೂ ಅಮ್ಮನಿಗೆ ಊಟ ಕೊಡಿ ಎಂದು ಹಠ ಮಾಡಲಿಲ್ಲ. ನಾನು "ಅಮ್ಮ, ನಾನು ಇವತ್ತು ಅಡುಗೆ ಮಾಡುತ್ತೇನೆ. ನೀವು ನನಗೆ ಹೇಳಿ ಕೊಡಿ" ಎಂದೆ. ಅಮ್ಮನಿಗೆ ಈ ಮಾತು ಕೇಳಿ ಬಹಳ ಸಂತೋಷವಾಯಿತು. ಆಯಿತು ಮಗು. ಈಗ ಎರಡು ಆಲೂಗೆಡ್ಡೆ ತೊಳೆದು ಸ್ವಲ್ಪ ನೀರು ಹಾಕಿ ಬೇಯಿಸಲು ಇಡು. ನಾನು ಸ್ಟೌವ್ ಹಚ್ಚಿ ಕೊಡುತ್ತೇನೆ ಎಂದರು. ನಂತರ ಒಂದು ಟೊಮೆಟೋ, ಒಂದು ಈರುಳ್ಳಿಯನ್ನು ಸಣ್ಣದಾಗಿ ಕತ್ತರಿಸಲು ತೋರಿಸಿ ಕೊಟ್ಟರು. ಅದರಂತೆ ನಾನು ಕತ್ತರಿಸಿದೆ. ಆಲೂಗೆಡ್ಡೆ ಬೆಂದ ಮೇಲೆ ಸಿಪ್ಪೆ ಬಿಡಿಸಲು ಕೊಟ್ಟರು. ನಾನು ಬಿಡಿಸಿ, ಬೆಂದ ಆಲೂಗೆಡ್ಡೆಯನ್ನು ಚಮಚದಿಂದ ಒತ್ತಿ ನಯವಾಗುವಂತೆ ನಾದಿದೆ. ನಂತರ ಅದಕ್ಕೆ ರುಚಿಗೆ ತಕ್ಕಷ್ಟು ಉಪ್ಪು, ಮೆಣಸಿನ ಪುಡಿ, ಸ್ವಲ್ಪ ಅರಿಶಿಣ, ಹಾಕಿ ಮಿಶ್ರಗೊಳಿಸಿದೆ. ಅಮ್ಮ, ಬಾಣಲೆಗೆ ಸ್ವಲ್ಪ ಎಣ್ಣೆ ಹಾಕಿದರು. ನಾನು ಸ್ವಲ್ಪ ಸಾಸಿವೆ, ಕರಿಬೇವಿನ ಸೊಪ್ಪು, ಕತ್ತರಿಸಿದ ಈರುಳ್ಳಿ, ಟೊಮೆಟೋವನ್ನು ಹಾಕಿ ಎಣ್ಣೆಯಲ್ಲಿ ಬೇಯಲು ಬಿಟ್ಟೆ. ಅದಕ್ಕೆ ಬೆಂದ ಆಲೂಗೆಡ್ಡೆಯನ್ನು ಹಾಗು ಸ್ವಲ್ಪ ನೀರು ಹಾಕಿ ಮಿಶ್ರಗೊಳಿಸಿದೆ. ನಂತರ ಸ್ವಲ್ಪ ಸಮಯ ಬೇಯಲು ಬಿಟ್ಟೆ. ನಂತರ ಒಂದು ಲೋಟ ಅಕ್ಕಿಯನ್ನು ತೊಳೆದು ಕುಕ್ಕರ್‌ನಲ್ಲಿ ಹೇಗೆ ಅನ್ನ ಬೇಯಿಸಬೇಕೆಂದು ಹೇಳಿಕೊಟ್ಟರು.



ಅಮ್ಮನ ಸಲಹೆಯಂತೆ ಒಂದು ಲೋಟ ಅಕ್ಕಿಗೆ ಎರಡು ಲೋಟ ನೀರು ಹಾಕಿದೆ. ಅಮ್ಮ ಕುಕ್ಕರ್ ಮುಚ್ಚಳ ಹಾಕಿ ಸ್ಟೌವ್ ಹಚ್ಚಿ ಕುಕ್ಕರನ್ನು ಅದರ ಮೇಲಿಟ್ಟರು. ಕುಕ್ಕರ್ 3 ಶಿಳ್ಳೆ ಹೊಡೆದ ನಂತರ ಸ್ಟೌವ್ ಆಫ್ ಮಾಡಿದೆ. ಬಿಸಿ ಇರುವಾಗ ಕುಕ್ಕರ್ ಮುಚ್ಚಳವನ್ನು ತೆಗೆಯದೆ ತಂಪಾದ ನಂತರ ಮುಚ್ಚಳವನ್ನು ತೆಗೆದರು. ನಂತರ ನಾನು ಮತ್ತು ಅಮ್ಮ ಇಬ್ಬರು ಸಂತೋಷದಿಂದ ಅನ್ನ, ಆಲೂಗೆಡ್ಡೆ ಪಲ್ಯ ಮತ್ತು ಅದಕ್ಕೆ ಸ್ವಲ್ಪ ಮೊಸರು ಸೇರಿಸಿಕೊಂಡು ಖುಷಿ ಖುಷಿಯಾಗಿ ಊಟ ಮಾಡಿದೆವು. ಅಮ್ಮ ನನ್ನನ್ನು ಹೊಗಳಿದ್ದೇ ಹೊಗಳಿದ್ದು. ಅಮ್ಮನ ಸಂತೋಷಕ್ಕೆ ಪಾರವೇ ಇರಲಿಲ್ಲ! ಹೀಗೆ ಹಿರಿಯರು ಕಿರಿಯರು ಒಬ್ಬರಿಗೊಬ್ಬರು ಅರ್ಥ ಮಾಡಿಕೊಂಡು ಸಹಾಯ ಮಾಡಿದರೆ, ಜೀವನ ಸಂತೋಷವಾಗಿರುತ್ತದೆ ಎಂಬುದನ್ನು ನಾನು ಅರಿತೆ.

**ವಸು ಕೃಷ್ಣ ಪಿ.ಕೆ**
4ನೆಯ ತರಗತಿ 'ಎ' ವಿಭಾಗ

## ಪಶ್ಚಾತ್ತಾಪ



ನನಗೆ ನಾನು ಹಿಂದೆ ಮಾಡುತ್ತಿದ್ದ ತಪ್ಪಿನ ಅರಿವಾಗಿ ಪಶ್ಚಾತ್ತಾಪವಾಗಿತ್ತು. ಆದರೆ ನಾನು ಆ ತಪ್ಪನ್ನು ಸರಿಪಡಿಸಿಕೊಂಡಿರುವೆ. ಅದು ಏನೆಂದರೆ ನಾನು ಪ್ರತಿದಿನ ಶಾಲೆಗೆ ಸಿದ್ಧವಾಗಲು ನನ್ನ ಅಮ್ಮ ಸಮಯವನ್ನು ನಿಗದಿಪಡಿಸಿದ್ದರು. ಆದರೆ ನಾನು ಕೆಲವೊಂದು ಬಾರಿ ತಡವಾಗಿ ಏಳುತ್ತಿದ್ದೆ. ಇದರಿಂದ ನನ್ನ ಎಲ್ಲಾ ಕೆಲಸಗಳು ವಿಳಂಬವಾಗುತ್ತಿದ್ದವು. ಆಗ ನನ್ನ ಅಮ್ಮ ನೀನು ತಡವಾಗಿ ಏಳುವುದರಿಂದ ಶಾಲೆಗೆ ತಡವಾಗುತ್ತದೆ, ತಿಂಡಿ ಸರಿಯಾಗಿ ತಿನ್ನುವುದಿಲ್ಲ ಹಾಗೂ ಶಾಲಾ ಬಸ್ಸು ಹತ್ತಲು ಗಡಿಬಿಡಿಯಾಗುತ್ತದೆ ಎಂದು ಹಲವು ಬಾರಿ ನನಗೆ ಬುದ್ಧಿ ಹೇಳುತ್ತಿದ್ದರು. ಒಂದು ದಿನ ನಾನು ಬೆಳಗ್ಗೆ ತಡವಾಗಿ ಏಳುವುದರಿಂದ ನನ್ನ ಅಮ್ಮ ಮತ್ತು ನನಗೆ ತೊಂದರೆ ಆಗುತ್ತದೆ ಎಂದು ನನಗೆ ಅನ್ನಿಸಿತು. ನಾನು ಪ್ರತಿದಿನ ಏಳುವ



ಸಮಯವನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನಿರ್ಧಾರ ಮಾಡಿದೆ. ನಾನು ಈಗ ಬದಲಾಗಿದ್ದೇನೆ. ಬೆಳಗ್ಗೆ ಬೇಗ ಎದ್ದು ನನ್ನ ಎಲ್ಲಾ ಕೆಲಸವನ್ನು ನಾನು ಮಾಡಿಕೊಂಡು ಶಾಲಾ ಬಸ್ಸಿನ ಸಮಯಕ್ಕಿಂತ ಮೊದಲು ನಾನು ಸಿದ್ಧನಾಗಿರುತ್ತೇನೆ. ಇದರಿಂದ ನನ್ನ ಅಮ್ಮನಿಗೆ ತುಂಬಾ ಸಂತೋಷವಾಗಿದೆ. ಈ ಒಳ್ಳೆಯ ಅಭ್ಯಾಸವನ್ನು ನಾನು ಮುಂದು ವರೆಸಿಕೊಂಡು ಹೋಗುತ್ತಿದ್ದೇನೆ.

**ಅರ್ಜುನ್ ತೇಜಸ್ ಗೌಡ**
5ನೆಯ ತರಗತಿ 'ಬಿ' ವಿಭಾಗ

## ಮೊಬೈಲು



ನಾನು ನನ್ನ ಅಜ್ಜಿಯ ಮನೆಯಲ್ಲಿ ಬಹಳ ಹೊತ್ತು ಮೊಬೈಲ್ ಬಳಸುತ್ತಿದ್ದೆ. ನನ್ನ ತಂದೆ ತಾಯಿ ನನಗೆ ಮೊಬೈಲ್ ಬಳಸಲು ಕೊಡುತ್ತಿರಲಿಲ್ಲ. ನಾನು ಬೇಸಿಗೆ ರಜೆಯಲ್ಲಿ ಅಜ್ಜಿಯ ಮನೆಗೆ ಹೋದಾಗ ಅಜ್ಜಿಯ ಮೊಬೈಲನ್ನು ತೆಗೆದುಕೊಂಡು ಬಳಸುತ್ತಿದ್ದೆ. ಬಹಳ ಹೊತ್ತು ವೀಡಿಯೊ ಗೇಮ್ ಆಡುತ್ತಿದ್ದೆ. ನಾನು ಪುಸ್ತಕವನ್ನು ತೆಗೆದು ಓದಲೇ ಇಲ್ಲ. ನಾನು ಮೈಸೂರಿಗೆ ಬಂದ ಮೇಲೆ ನನ್ನ ತಾಯಿ ನನ್ನ ಮೇಲೆ ಕೋಪಗೊಂಡರು. ಆಗ ನನಗೆ ನಾನು ಮಾಡಿದ ತಪ್ಪಿನ ಅರಿವಾಯಿತು. ನಾನು ಆಗ ನನ್ನ ಅಜ್ಜಿಗೆ ಕರೆ ಮಾಡಿ ನನ್ನನ್ನು ಕ್ಷಮಿಸಿ, ಎಂದು ಕೇಳಿಕೊಂಡೆನು. ಮುಂದಿನ ಸಲ ಊರಿಗೆ ಬಂದಾಗ ಮೊಬೈಲ್ ಬಳಸುವುದಿಲ್ಲ ಎಂದು ಅಜ್ಜಿಗೆ ನಾನು ಪ್ರಮಾಣ ಮಾಡಿ ಹೇಳಿದೆ. ಹಾಗು ನನ್ನ ಅಮ್ಮನಿಗೆ ನಾನು ಮೊಬೈಲ್ ಬಳಸುವುದಿಲ್ಲ ಬದಲಾಗಿ ಓದಿನ ಕಡೆಗೆ ಗಮನ ಹರಿಸುತ್ತೇನೆ ಎಂದು ಹೇಳಿದೆ. ನಾನು ಈಗ ಹಾಗೆಯೆ ನಡೆದುಕೊಳ್ಳುತ್ತಿದ್ದೇನೆ.



**ಸಂಚಿತ್ ಎಂ**
5ನೆಯ ತರಗತಿ 'ಬಿ' ವಿಭಾಗ

## ನನ್ನ ಶಾಲೆ

ನನ್ನ ಶಾಲೆ ನನಗೆ ಎರಡನೆ ಮನೆ ಇದ್ದಂತೆ. ಇಲ್ಲಿ ನಾನು ಓದು, ಬರೆವಣಿಗೆಯ ಜೊತೆ ಒಳ್ಳೆಯ ನಡವಳಿಕೆಯನ್ನು ಕಲಿಯಲು ಬರುತ್ತೇನೆ. ಸ್ನೇಹಿತರೊಂದಿಗೆ ಚೆನ್ನಾಗಿ ಆಟವಾಡುತ್ತೇನೆ. ಶಿಕ್ಷಕರು ನಮಗೆ ಒಳ್ಳೆಯ ಮಾರ್ಗದರ್ಶನ ನೀಡುತ್ತಾರೆ. ಶಾಲೆ ನನಗೆ ಹಲವಾರು ವಿಷಯಗಳ ಜ್ಞಾನ ನೀಡುತ್ತದೆ. ನನ್ನ ಶಾಲೆ ನನ್ನನ್ನು ವ್ಯಕ್ತಿಯಾಗಿ ರೂಪಿಸುತ್ತದೆ ಎಂಬ ಭರವಸೆ ಇದೆ. ಕಠಿಣ ಪರಿಶ್ರಮವೇ ಯಶಸ್ಸಿನ ಮೂಲ. ಯಶಸ್ಸು ಸುಲಭವಾಗಿ ಸಿಗುವುದಿಲ್ಲ. ಅದಕ್ಕಾಗಿ ನಾವು ಕಠಿಣ ಪರಿಶ್ರಮ ಪಡಬೇಕು. ಎಂಬುದನ್ನು ಈ ನನ್ನ ಶಾಲೆ ನನಗೆ ಕಲಿಸಿದೆ. ನಿರಂತರ ಪ್ರಯತ್ನ ಮತ್ತು ಶಿಸ್ತು ನಮ್ಮನ್ನು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ಯುತ್ತವೆ. ಯಾವುದೇ ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ,



ಅದು ನಮಗೆ ಖಂಡಿತವಾಗಿಯೂ ಫಲ ನೀಡುತ್ತದೆ ಎಂದು ಅರಿತದ್ದೇನೆ. ಶಾಲೆ ನನ್ನ ಅಚ್ಚುಮೆಚ್ಚಿನ ತಾಣ. ಆ ತಾಣದ ಹೆಸರೇ ಎಕ್ಸೆಲ್ ಪಬ್ಲಿಕ್ ಶಾಲೆ.



**ಸ್ಪರ್ಶ್ ಆರ್**
4ನೆಯ ತರಗತಿ 'ಎ' ವಿಭಾಗ

## ನರಕ ಚತುರ್ದಶಿ



**ಸಾನ್ವಿ ಪ್ರಜ್ಞಾ**
6ನೆಯ ತರಗತಿ 'ಜಿ' ವಿಭಾಗ




ನರಕಾಸುರನ ನಾಶದ ದಿನ
ಬೆಳಕಿನಿಂದ ತುಂಬಿದ ಮನ
ಸತ್ಯದ ಜಯ, ಧರ್ಮದ ಬೆಳಕು
ಇದು ನಮ್ಮ ಹಬ್ಬದ ಮಿಡಿತ.


ಶ್ರೀ ಕೃಷ್ಣ ಮತ್ತು ಸತ್ಯಭಾಮೆ ದುಷ್ಟ ನರಕಾಸುರನನ್ನು ಕೊಂದು ಜನರನ್ನು ರಕ್ಷಿಸಿದರು. ಈ ದಿನ ಜನರು ಎಣ್ಣೆ ಸ್ನಾನ ಮಾಡಿ, ದೀಪ ಹಚ್ಚಿ ಹಬ್ಬವನ್ನು ಆಚರಿಸುತ್ತಾರೆ. ಇದರಿಂದ ತಿಳಿದು ಬರುವುದೇನೆಂದರೆ ಸತ್ಯ ಮತ್ತು ಧರ್ಮ ಯಾವಾಗಲೂ ಗೆಲ್ಲುತ್ತದೆ.

ನರಕಾಸುರನ ಕತೆಯಿಂದ ನಾವು ಕಲಿಯಬಹುದಾದ ಅಂಶಗಳು:

ಒಳ್ಳೆಯತನದ ವಿಜಯ - ನಾವು ಯಾವಾಗಲೂ ಒಳ್ಳೆಯ ಮಾರ್ಗದಲ್ಲಿಯೇ ನಡೆಯಬೇಕು. ಆಗ ಮಾತ್ರ ನಮಗೆ ಜಯ ಸಿಗಲು ಸಾಧ್ಯವಾಗುತ್ತದೆ.

ಅಹಂಕಾರದ ನಾಶ - ನಾವು ಯಾವುದೇ ಪರಿಸ್ಥಿತಿಯಲ್ಲೂ ಅಹಂಕಾರದಿಂದ ನಡೆದುಕೊಳ್ಳಬಾರದು. ಸಹನೆಯಿಂದ ವರ್ತಿಸಬೇಕು, ತಾಳ್ಮೆಯಿಂದ ನಡೆದುಕೊಳ್ಳಬೇಕು.

## ಸಿಂಗಾಪುರದ ನನ್ನ ಮಧುರ ಕ್ಷಣಗಳು



ಸಿಂಗಾಪುರದ ನನ್ನ ಅನುಭವ ಅದ್ಭುತವಾಗಿತ್ತು. ನಾನು ವಿಮಾನದೊಳಗೆ ಕಾಲಿಟ್ಟ ಕ್ಷಣದಿಂದಲೇ ಉತ್ಸುಕಳಾಗಿದ್ದೆ. ವಿಮಾನವು ತುಂಬಾ ದೊಡ್ಡದಾಗಿದ್ದು, ನಾಲ್ಕು ಗಂಟೆಗಳ ಕಾಲದ ಪ್ರಯಾಣದ ನಂತರ ಭೂಸ್ಪರ್ಶವಾಗಿದ್ದು ಅತ್ಯಾಕರ್ಷಕವಾಗಿತ್ತು. ಸಿಂಗಾಪುರ ಒಂದು ಚಿಕ್ಕ ದ್ವೀಪರಾಷ್ಟ್ರವಾಗಿದ್ದರೂ, ಅದರಿಂದ ಕಲಿಯುವುದು ಬಹಳಷ್ಟಿದೆ.

ಮೊದಲನೆಯದಾಗಿ, ಸಿಂಗಾಪುರದಲ್ಲಿ ವಾಹನಗಳು ವಿರಳವಾಗಿ ಹಾರ್ನ್ ಮಾಡುತ್ತವೆ. ಎರಡನೆಯದಾಗಿ, ಈ ದೇಶ ಬಹಳ ಸ್ವಚ್ಛವಾಗಿದೆ. ಶುದ್ಧ ಗಾಳಿಯನ್ನು ನೀಡುವ ಎಷ್ಟೋ ಮರಗಳಿದ್ದರೂ ಸಹ, ನೆಲದ ಮೇಲೆ ಒಂದು ಎಲೆಯೂ ಚೆಲ್ಲಿದಂತೆ ಇರುವುದಿಲ್ಲ. ನಗರವನ್ನು ಸ್ವಚ್ಛವಾಗಿಡುವಲ್ಲಿ ಅಲ್ಲಿನ ಜನರ ಪಾತ್ರ ಪ್ರಮುಖವಾದದ್ದು. ಅವರು ಕಸವನ್ನು ಎಲ್ಲೆಂದರಲ್ಲಿ ಎಸೆಯದೆ ಇರುವುದರಿಂದ 'ಸ್ವಚ್ಛ ದೇಶ' ಎಂಬ ಬಿರುದನ್ನು ಪಡೆಯಲು ಸಾಧ್ಯವಾಗಿದೆ. ಮೂರನೆಯದಾಗಿ, ಅಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ನಿಯಮಗಳನ್ನು ಪಾಲಿಸುತ್ತಾರೆ. ಯಾವ ಕಾರಣಕ್ಕೂ ಅವರು ನಿಯಮಗಳನ್ನು ನಿರ್ಲಕ್ಷಿಸುವುದಿಲ್ಲ. ಇಲ್ಲದಿದ್ದರೆ ಅವರು ಭಾರಿ ದಂಡ ತೆರಬೇಕಾಗುತ್ತದೆ. ಕೆಲವೊಮ್ಮೆ ಜೈಲಿಗೂ ಸಹ ಹೋಗಬೇಕಾಗುತ್ತದೆ.

ನಾವು ಎಲ್ಲಾ ಉತ್ತಮ ಅಂಶಗಳನ್ನು ಅಳವಡಿಸಿಕೊಳ್ಳೋಣ. ಪೂರ್ವವಾಗಲಿ ಅಥವಾ ಪಶ್ಚಿಮವಾಗಲಿ ಭಾರತವೇ ಶ್ರೇಷ್ಠ ಎಂಬ ಮಾತಿನಂತೆ ನಾನು ಮಾತ್ರ ನಮ್ಮ ಸುಂದರವಾದ ಭಾರತ ದೇಶವನ್ನು ಪ್ರೀತಿಸುತ್ತೇನೆ.



**ನಲ್ಮೆ ಎಸ್ ಹಂಪಾಪುರ**
6ನೆಯ ತರಗತಿ 'ಇ' ವಿಭಾಗ

## ಕತೆ ಕೇಳೋಣ ಬನ್ನಿ



ನಮ್ಮ ಶಾಲೆಗೆ ಎಚ್ ಎಸ್ ಶಿವರಾಮ್ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿದ್ದರು. ಅವರು 'ಒಂದು ಕುಂಬಳ ಬೀಜದ ಕತೆ'ಯನ್ನು ಬಹಳ ಸೊಗಸಾಗಿ ಹೇಳಿದರು. ಈ ಕತೆಯಿಂದ ನಾನು ಬೇರೆಯವರು ಮಾಡಿರುವುದನ್ನೇ ಮಾಡಬಾರದು, ನಮ್ಮ ಶೈಲಿಯಲ್ಲಿ ಪ್ರಯತ್ನಿಸಬೇಕು. ಜೀವನದಲ್ಲಿ ಕಷ್ಟಪಟ್ಟರೆ ಸುಖ ಸಿಗುತ್ತದೆ ಎಂಬುದನ್ನು ತಿಳಿದುಕೊಂಡೆನು.

ನಾವು ಬೇರೆಯವರಿಗೆ ಸಹಾಯ ಮಾಡಲಾಗದಿದ್ದರೂ, ಅವರಿಗೆ ನೋವು ಉಂಟು ಮಾಡಬಾರದು. ನಮ್ಮನ್ನು ನಂಬಿರುವವರ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ನಮ್ಮನ್ನು ಉಳಿಸುವ ಪರಿಸರವನ್ನು ನಾವು ಉಳಿಸಬೇಕು. ಒಂದು ಸಣ್ಣ ಹಕ್ಕಿಯಾದರೂ ತೊಂದರೆಯಲ್ಲಿದ್ದಾಗ ಸಹಾಯ ಮಾಡಬೇಕು. ಸಹಾಯವೆಂದರೆ ಲಕ್ಷಾಂತರ ರೂಪಾಯಿಯನ್ನು ಕೊಡುವುದಲ್ಲ, ಅವರ ಜಾಗದಲ್ಲಿ ನಿಂತು ಯೋಚಿಸುವುದು. ನಮಗೆ ಒಳ್ಳೆಯದನ್ನು ಮಾಡಿರುವವರನ್ನು ಮರೆಯದೇ ಆ ಋಣವನ್ನು ತೀರಿಸಬೇಕು. ಸಣ್ಣ ಸಣ್ಣ ವಸ್ತುಗಳು ದೊಡ್ಡ ಕೆಲಸವನ್ನು ಮಾಡಬಹುದು ಎಂಬುದನ್ನು ಕಲಿಯೋಣ.



**ವಾತ್ಸಲ್ಯ ಎಂ. ಜೆ. ನಾಯಕ್**
7ನೆಯ ತರಗತಿ 'ಇ' ವಿಭಾಗ

## ಮೃಗಾಲಯದ ಶಿಬಿರಾನುಭವ




ಈ ಬಾರಿಯ ಬೇಸಿಗೆ ಶಿಬಿರ ಮೃಗಾಲಯದಲ್ಲಿ ಎಂದು ತಿಳಿದಾಗ ನನಗೆ ಸಂತೋಷವಾಯಿತು. ಅನೇಕ ಪ್ರಾಣಿ, ಪಕ್ಷಿಗಳ ಬಗೆಗೆ ವಿಚಾರಗಳನ್ನು ತಿಳಿದುಕೊಳ್ಳಬಹುದೆಂಬ ಆಸೆಯಾಯಿತು. ನಾನು ಮತ್ತು ನನ್ನೆಲ್ಲಾ ಸ್ನೇಹಿತರು ಒಟ್ಟಾಗಿ ಈ ಶಿಬಿರಕ್ಕೆ ಮೂರು ತಿಂಗಳು ಮುಂಚಿತವಾಗಿಯೇ ನೋಂದಣಿ ಮಾಡಿಸಿದ್ದೆವು. ಈ ಬಾರಿ ನಮ್ಮ ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಶಿಬಿರದಲ್ಲಿ ಒಟ್ಟು ಎಂಬತ್ತು ಶಿಬಿರಾರ್ಥಿಗಳಿದ್ದರು.

ಹತ್ತು ದಿನಗಳ ಈ ಶಿಬಿರದಲ್ಲಿ ಪ್ರತಿದಿನವೂ ಬೇರೆ ಬೇರೆ ವಿಚಾರಗಳನ್ನು ಕುರಿತು ಬೋಧನೆ ಮಾಡುತ್ತಿದ್ದರು. ಅದರ ಜೊತೆಗೆ ವೀಡಿಯೋ ವೀಕ್ಷಣೆಯೂ ಇರುತ್ತಿತ್ತು. ಪ್ರಾಯೋಗಿಕ ಅನುಭವದೊಂದಿಗೆ ಕಲಿಕೆಯಾಗುತ್ತಿತ್ತು. ಅಲ್ಲಿ ಪ್ರಾಣಿಗಳ ಆಹಾರ ಪದ್ಧತಿ ಹೇಗಿರುತ್ತದೆ? ಅವು ದಿನನಿತ್ಯದ ಚಟುವಟಿಕೆಗಳನ್ನು ಹೇಗೆ ನಡೆಸುತ್ತವೆ? ಮೆದುಳಿನ ಬೆಳವಣಿಗೆ ಹೇಗಾಗುತ್ತದೆ? ಗೋಸುಂಬೆಯು ತನ್ನ ಬಣ್ಣವನ್ನು ಬದಲಿಸಲು ಕಾರಣವೇನು? ಪ್ರಾಣಿಗಳ ದತ್ತು ಸ್ವೀಕಾರ - ಹೀಗೆ ವಿಶೇಷವಾದ ಅಂಶಗಳನ್ನು ಕುರಿತು ಚರ್ಚಿಸಲಾಗುತ್ತಿತ್ತು. ಅವೆಲ್ಲವೂ ನಮ್ಮಲ್ಲಿ ಕುತೂಹಲವನ್ನು ಕೆರಳಿಸುತ್ತಿತ್ತು.

ಈ ಶಿಬಿರದ ಅಂಗವಾಗಿ ರಂಗನತಿಟ್ಟು ಪಕ್ಷಿಧಾಮಕ್ಕೆ ಭೇಟಿ ನೀಡಿದೆವು. ಅಲ್ಲಿನ ಹಸಿರು, ಸ್ವಚ್ಛತೆಯ ವಾತಾವರಣ, ಬಗೆಬಗೆಯ ಹಕ್ಕಿಗಳ ಚಿಲಿಪಿಲಿಯ ಗಾನ ಇವು ನಮ್ಮನ್ನು ಮೂಕಪ್ರೇಕ್ಷಕರನ್ನಾಗಿಸಿದವು. ಆನಂತರ ನಾವು ಪ್ರಾಣಿಗಳ ಪುನರ್ವಸತಿ ಕೇಂದ್ರಕ್ಕೂ ಭೇಟಿ ನೀಡಿದೆವು. ಅಪಘಾತಕ್ಕೆ ಒಳಗಾದ ಪ್ರಾಣಿಗಳನ್ನು ನೋಡಿ ನನ್ನ ಮನಸ್ಸಿಗೆ ಬಹಳ ಬೇಸರವಾಯಿತು. ಅಲ್ಲಿ ನಾವು ಆ ಪ್ರಾಣಿಗಳನ್ನು ಹೇಗೆ ಸಂರಕ್ಷಿಸಬೇಕೆಂಬುದನ್ನು ತಿಳಿದೆವು.

ನಮಗೆ ಹತ್ತು ದಿನಗಳು ಮುಗಿದದ್ದೇ ತಿಳಿಯಲಿಲ್ಲ. ನಾವು ಅಂದುಕೊಂಡಂತೆಯೇ ಶಿಬಿರದಿಂದ ಹಿಂತಿರುಗುವಾಗ ಅನೇಕ ಹೊಸ ವಿಚಾರಗಳನ್ನು ತಿಳಿದುಕೊಂಡು ಮನೆಗೆ ಒಲ್ಲದ ಮನಸ್ಸಿನಿಂದ ಹಿಂತಿರುಗಿದೆವು.



**ಆರ್ಣವ್ ಎನ್ ಹೆಗ್ಡೆ**
7ನೆಯ ತರಗತಿ 'ಜಿ' ವಿಭಾಗ

## ಮನುಜರಿಗೊಂದು ಪತ್ರ



ನೀವು ಭೂಮಿಯಲ್ಲಿ ಜನಿಸುವ ಮುನ್ನ ಎಲ್ಲವೂ ಸೊಗಸಾಗಿತ್ತು. ನಾನು ಸಂತೋಷವಾಗಿ ಲಾಸ್ಯವಾಡುತ್ತಾ ಹರಿದು ಸಮುದ್ರವನ್ನು ಸೇರುತ್ತಿದೆ. ಮಾನವ ಭೂಮಿಗೆ ಬಂದ ಮೇಲೂ ಸಾವಿರಾರು ವರ್ಷಗಳ ಕಾಲ ನನ್ನನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದ. ಆದರೆ ಈಗ ನೀವು ಕಾಲಿಟ್ಟ ಕಡೆಯೆಲ್ಲಾ ಕಸವೇ ಕಸ. ನೀವು ನಮ್ಮನ್ನು ಮಾತ್ರ ಕೊಲ್ಲುತ್ತಿಲ್ಲ, ನಿಮ್ಮ ಅಳಿವಿಗೂ ನೀವೇ ಕಾರಣರಾಗುತ್ತಿದ್ದೀರಿ. ನನ್ನೊಡಲ ಸಾವಿರ ಜೀವಜಂತುಗಳ ವಿನಾಶಕ್ಕೆ ಕಾರಣವಾಗುತ್ತಿದ್ದೀರಿ. ನನಗೆ ಇತ್ತೀಚಿಗೆ ನಿಮಗೆ ಕೊಂಚವೂ ಕರುಣೆಯೇ ಇಲ್ಲವೇ? ಎಂದೆನಿಸುತ್ತಿದೆ. ನಮ್ಮ ಮೇಲೆ ದಯೆ ತೋರಿ ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಕಸಕಡ್ಡಿಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಿ ಶುಚಿತ್ವದ ಕಡೆಗೆ ಮುನ್ನಡೆಯಿರಿ. ಆಗ ಸಂತೋಷದ ಸಮಾಜ ನಿರ್ಮಾಣವಾಗುತ್ತದೆ.



**ಆರಾಧನಾ ಎಸ್ ಅಯ್ಯರ್**
7ನೆಯ ತರಗತಿ 'ಎಚ್' ವಿಭಾಗ

## ನನ್ನ ಜೀವನದ ಗುರಿ



ಪ್ರತಿಯೊಬ್ಬರ ಜೀವನದಲ್ಲೂ ಗುರಿ ಮತ್ತು ಗುರು ಇರಬೇಕು. "ಗುರಿ ಇಲ್ಲದ ಜೀವನ ನಾವಿಕನಿಲ್ಲದ ಹಡಗಿನಂತೆ" ಎಂಬ ಮಾತಿದೆ. 'ತೇನ್ ಸಿಂಗ್' ಎಂಬ ಪರ್ವತಾರೋಹಿ ತಾನು ಚಿಕ್ಕವನಿದ್ದಾಗ ಎವರೆಸ್ಟ್ ಶಿಖರವನ್ನು ನೋಡಿ "ಅಮ್ಮಾ, ನಾನು ಈ ಶಿಖರವನ್ನು ಹತ್ತಬಹುದೇ? ಎಂದು ಕೇಳಿದ್ದನಂತೆ". ಆಗ ಅಮ್ಮ ನಿನ್ನಲ್ಲಿ ಗುರಿ ಮತ್ತು ಸಾಮರ್ಥ್ಯ ಇದ್ದರೆ ಖಂಡಿತಾ ಹತ್ತಬಹುದು ಎಂದು ಹೇಳಿದರಂತೆ. ಅಂತೆಯೇ ತೇನ್ ಸಿಂಗ್ ಎವರೆಸ್ಟ್ ಶಿಖರವನ್ನು ಹತ್ತುವುದರ ಮೂಲಕ ದಾಖಲೆಯನ್ನು ನಿರ್ಮಿಸಿದ್ದಾರೆ. ಹೀಗೆ ನಾವು ನಮ್ಮ ಜೀವನದಲ್ಲಿ ಒಂದು ಗುರಿಯನ್ನು ಇಟ್ಟುಕೊಂಡು ಅದನ್ನು ಸಾಧಿಸಲು ಪ್ರಯತ್ನಿಸಬೇಕು.


ನಾನು ವೈದ್ಯೆಯಾಗಬೇಕೆಂಬ ಗುರಿಯನ್ನು ಇಟ್ಟುಕೊಂಡು ಶ್ರದ್ಧೆಯಿಂದ ಅಧ್ಯಯನ ಮಾಡುತ್ತಿದ್ದೇನೆ. ಈ ವೃತ್ತಿಯನ್ನು ಸ್ವೀಕರಿಸಿ, ಕಡು ಬಡತನದಲ್ಲಿರುವ ಜನರ ಆರೋಗ್ಯವನ್ನು ಕಾಪಾಡುವೆ, ಹಾಗೆಯೇ ಅನಾರೋಗ್ಯದಿಂದ ಬಳಲುತ್ತಿರುವ ಜನರಿಗೆ ಉತ್ತಮ ಚಿಕಿತ್ಸೆಯನ್ನು ನೀಡುವುದರ ಮೂಲಕ ಗುಣಪಡಿಸುವೆ. ಹೀಗೆ ಸಮಾಜ ಸೇವೆಯನ್ನು ಮಾಡುವುದರ ಮೂಲಕ ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಪಡೆಯಬೇಕು. ತಂದೆ ತಾಯಿಗಳಿಗೆ ಒಳ್ಳೆಯ ಹೆಸರನ್ನು ಕೊಡಬೇಕು ಎಂಬ ಹಂಬಲವಿದೆ. ಇದಕ್ಕಾಗಿ ಸತತ ಪರಿಶ್ರಮ ಮಾಡಿ ಗುರಿ ತಲುಪುತ್ತೇನೆ ಎಂಬ ಸಂಕಲ್ಪ ಮಾಡಿದ್ದೇನೆ.




'ಕಾಯಕವೇ ಕೈಲಾಸ' ಎಂಬ ಮಾತಿನಂತೆ ನಾನು ನನ್ನ ಗುರಿ ತಲುಪಲು ಹಗಲು ರಾತ್ರಿ ಶ್ರಮಪಟ್ಟು ಅಧ್ಯಯನ ಮಾಡಿ ನನ್ನ ಗುರಿ ಸಾಧಿಸುತ್ತೇನೆ. ನನ್ನ ಸಾಧನೆಗೆ ಕುಟುಂಬದ ಮತ್ತು ಶಿಕ್ಷಕರ ಬೆಂಬಲವಿದೆ. ಹಾಗಾಗಿ ನಾನು ನನ್ನ ಗುರಿಯನ್ನು ತಲುಪುತ್ತೇನೆ ಎಂಬ ಬಲವಾದ ನಂಬಿಕೆ ನನಗಿದೆ.

**ಅನ್ವೀಕ್ಷಾ ನಾಯಕ್**
೮ನೆಯ ತರಗತಿ 'ಎಫ್' ವಿಭಾಗ

## ಗುರಿ




ಜಗತ್ತಿನಲ್ಲಿ ಹಲವಾರು ಉದ್ಯೋಗಗಳಿವೆ. ಅನೇಕರು ಅವರಿಗೆ ಇಷ್ಟವಾದ ಉದ್ಯೋಗವನ್ನು ಆಯ್ಕೆ ಮಾಡಿಕೊಂಡು ತಮ್ಮತಮ್ಮ ಗುರಿಯಾಗಿ ಇಟ್ಟುಕೊಳ್ಳುತ್ತಾರೆ. ನನಗೂ ಒಂದು ಗುರಿ ಇದೆ; ಅದು ವೈದ್ಯನಾಗಬೇಕೆಂಬುದು. ಅದರಲ್ಲೂ ಮಕ್ಕಳ ವೈದ್ಯನಾಗಬೇಕೆಂಬ ಆಸೆ ಇದೆ. ಈ ಆಸೆ ನನಗೆ ಹುಟ್ಟಿದ್ದು ನನ್ನ ತಂದೆಯವರಿಂದ. ಅವರು ಮಕ್ಕಳ ವೈದ್ಯರಾಗಿದ್ದಾರೆ. ಚಿಕ್ಕ ಮಕ್ಕಳಿಗೆ ಯಾವುದಾದರೂ ಖಾಯಿಲೆಯಿದ್ದರೆ, ಅವರಿಗೆ ಉಪಚರಿಸುವ ರೀತಿ, ಮಾತನಾಡಿಸುವ ರೀತಿಯನ್ನು ಮತ್ತು ಮಕ್ಕಳು ಹುಷಾರಾದ ಮೇಲೆ ನನ್ನ ತಂದೆಯ ಮುಖದಲ್ಲಿರುವ ನಗುವನ್ನು ಚಿಕ್ಕ ವಯಸ್ಸಿನಿಂದಲೂ ಗಮನಿಸುತ್ತಿದ್ದೆ. ಹಾಗಾಗಿ ನಾನು ಅವರಂತೆ ಆಗಬೇಕು ಎಂಬ ಆಸೆ ಹೆಚ್ಚಾಯಿತು. ಮಕ್ಕಳಿಗೆ ಚಿಕಿತ್ಸೆ ನೀಡಿ ಅವರು ಸರಿಯಾದ ಮೇಲೆ ಮನಸ್ಸಿಗೆ ಶಾಂತಿ, ನೆಮ್ಮದಿ ಸಿಗುತ್ತದೆ ಎಂಬುದನ್ನು ಅವರಿಂದ ತಿಳಿದೆ. ನನ್ನ ಜೀವನದ ಗುರಿಯನ್ನು ಸಾಧಿಸಲು ನಾನು ಪ್ರತಿದಿನ ಶ್ರದ್ಧೆಯಿಂದ ಓದುತ್ತಿದ್ದೇನೆ. ನಾನು ಒಬ್ಬ ಒಳ್ಳೆಯ ವೈದ್ಯನಾಗುವೆ ಎಂಬ ಬಲವಾದ ನಂಬಿಕೆಯಿದೆ.



ನನಗೆ ಚಿಕ್ಕ ಮಕ್ಕಳೆಂದರೆ ತುಂಬಾ ಇಷ್ಟ. ನಾನು ಅವರೊಂದಿಗೆ ಹೆಚ್ಚು ಸಮಯ ಕಳೆಯಲು ಇಷ್ಟ ಪಡುತ್ತೇನೆ. ನಾನು ನನ್ನ ಗುರಿಯನ್ನು ಸಾಧಿಸಲು ಉತ್ತಮವಾದ ವ್ಯಾಸಂಗ ಮಾಡಿ ಮಕ್ಕಳ ವೈದ್ಯನಾಗಿ, ಈ ಸಮಾಜದ ಸೇವೆಯನ್ನು ಮಾಡಲು ಪ್ರಯತ್ನಿಸುತ್ತೇನೆ.

**ಸೌರಭ್ ಜಯಕುಮಾರ್‌ಗೌಡ**
೮ನೆಯ ತರಗತಿ 'ಎಫ್' ವಿಭಾಗ

## ಅಪ್ಪನ ಹಾದಿ – ಪುಸ್ತಕದ ಓದು ಮತ್ತು ಕಲಿಕೆ




ಇತ್ತೀಚೆಗೆ ನನ್ನ ಗಮನ ಸೆಳೆದಿದ್ದು 'ಅಪ್ಪನ ಹಾದಿ' ಎಂಬ ಪುಸ್ತಕ. ಅಪ್ಪನ ಜೀವನದ ಹಾದಿಯ ಕುರಿತಾದ ಈ ಕೃತಿಯನ್ನು ಓದಬೇಕೆಂದೆನಿಸಿ ಓದಿದೆ. ಸೋಲು ಕೊನೆಯಲ್ಲ, ಗೆಲುವು ಅಂತಿಮವಲ್ಲ. ಬಾಳೊಂದು ಪಯಣ, ಖುಷಿಯಾಗಿರೋಣ, ಖುಷಿಯನ್ನು ಹಂಚೋಣ" ಎಂಬ ಸಾಲಿನೊಂದಿಗೆ ರಂಗಸ್ವಾಮಿ ಮೂಕನಹಳ್ಳಿಯವರು ತಮ್ಮ ತಂದೆಯ ಜೀವನದ ನೆನಪುಗಳನ್ನು ಹಂಚಿಕೊಂಡಿದ್ದಾರೆ. ಈ ಕೃತಿಯ ಲೇಖನಗಳು ಸರಳವಾಗಿಯೇ ಇದ್ದರೂ ಜೀವನದ ಅರ್ಥವನ್ನು ತಿಳಿಸುತ್ತವೆ. ನಮಗೇನು ಬೇಕೋ ಅದೆಲ್ಲವೂ ನಮ್ಮಲ್ಲಿಯೇ ಇದೆ ಮತ್ತು ಬದುಕು ಬದಲಾಗಲು ಅರೆಗಳಿಗೆ ಸಾಕು ಎಂಬ ಬರಹಗಳು ನನಗೆ ತುಂಬಾ ಹತ್ತಿರವಾದವು. ಅಪ್ಪನ ಪ್ರೀತಿ, ಸಹನೆ ಮತ್ತು ಶಾಂತ ಸ್ವಭಾವ ನನ್ನ ಮನಸ್ಸಿನಲ್ಲಿ ನೆಲೆಯೂರಿದೆ. ಇವತ್ತಿನ ಜಗತ್ತಿನಲ್ಲಿ ಎಲ್ಲವೂ ಇದ್ದಾಗ ನಮ್ಮ ನಮ್ಮ ತಂದೆ-ತಾಯಿಗಳು ನಮ್ಮ ಕಾಣದ ಕೈಗಳಾಗಿ ಶ್ರಮಿಸುವುದನ್ನು ನೆನೆದು ಮುನ್ನಡೆಯಬೇಕೆಂದು ತಿಳಿಸಲು ಬಯಸುತ್ತೇನೆ. ಈಗ ನಾನು ಯಾವ ಸಂದರ್ಭದಲ್ಲಾದರೂ ಧೈರ್ಯದಿಂದ ನಿಲ್ಲಬೇಕು. ಸಂತೋಷ ಹಂಚಿಕೊಳ್ಳಬೇಕು ಮತ್ತು ಕುಟುಂಬದವರ ಮಾತುಗಳ ಮೌಲ್ಯವನ್ನು ಅರಿತುಕೊಳ್ಳಬೇಕೆಂದು ತೀರ್ಮಾನಿಸಿದ್ದೇನೆ. ಒಟ್ಟಿನಲ್ಲಿ 'ಅಪ್ಪನ ಹಾದಿ' ನನಗೆ ಬದುಕಿನ ನಿಜವಾದ ಅರ್ಥವನ್ನು ಕಲಿಸಿದ, ಹೃದಯವನ್ನು ಮುಟ್ಟಿದ ಕೃತಿ.



**ಬೆಳ್ಳಿ ಎಸ್ ವಿ**
೮ನೆಯ ತರಗತಿ, 'ಎ' ವಿಭಾಗ

## ಹಿಮ ನಾನು!



ಈ ವರ್ಷದ ಸ್ಟ್ರೀಮ್ ಫೆಸ್ಟ್‌ನ ವಿಷಯ 'ಹಿಮನದಿ'. ನಾನು ಕನ್ನಡದ ನಾಟಕದಲ್ಲಿ ಅಭಿನಯಿಸಿದ್ದೆ. ನನ್ನ ಪಾತ್ರ ಹಿಮ. ಮಾನವನ ಚಟುವಟಿಕೆಗಳಿಂದಾಗಿ ನಾನು ದಿನೇ ದಿನೇ ಕರಗುತ್ತಿರುವುದರಿಂದ ನನ್ನ ಹತಾಶೆಯನ್ನು ನಟಿಸಬೇಕಿತ್ತು. ಪ್ರೇಕ್ಷಕರು ನನ್ನ ಬಗ್ಗೆ ಸಹಾನುಭೂತಿಯನ್ನು ಹೊಂದಲು ನಾನು ನನ್ನ ಮೌನದ ಕೂಗನ್ನು ಭಾವನಾತ್ಮಕವಾಗಿ ತಿಳಿಸಬೇಕಿತ್ತು. ಆದರೆ ನಾನು ಭಾಷೆಯ ಮೂಲಕ ತಿಳಿಸದೆ ನೃತ್ಯದ ಮೂಲಕ ಅಭಿನಯಿಸಬೇಕಿತ್ತು. ನಾನು ಪದ್ಯವೊಂದನ್ನು ವಾಚಿಸಿ, ನನ್ನ ಹಿನ್ನೆಲೆ ಧ್ವನಿಗೆ ನೃತ್ಯ ಮಾಡುವುದು ವಿಶೇಷವೆನಿಸಿತ್ತು.


ನಾನು ಮೊದಲ ಬಾರಿಗೆ ಬಹಳಷ್ಟು ಹೊಸ ವಿಷಯಗಳನ್ನು ಕಲಿತೆ. ಕನ್ನಡ ನನ್ನ ಮಾತೃ ಭಾಷೆಯಾಗಿದ್ದರೂ ಇಂಗ್ಲಿಷ್ ಭಾಷೆಯನ್ನು ಹೆಚ್ಚು ಮಾತನಾಡುವುದರಿಂದ ಕನ್ನಡ ಭಾಷೆಯ ಉಚ್ಚಾರಣೆಯಲ್ಲಿ ನನಗೆ ಸ್ಪಷ್ಟತೆ ಇರಲಿಲ್ಲ. ರೆಕಾರ್ಡಿಂಗ್ ಕೂಡ ತುಂಬಾ ಮೋಜಿನ ಅನುಭವವಾಗಿತ್ತು. ಎಲ್ಲರೊಂದಿಗೆ ಕುಳಿತು ಅಭ್ಯಾಸಮಾಡುವುದು. ಅವರ ಮುಂದೆ ಭಾವಪೂರ್ಣವಾಗಿ ವಾಚಿಸುವುದು. ಅವರ ಅಭಿಪ್ರಾಯ ತಿಳಿದುಕೊಂಡು ಸರಿಪಡಿಸಿಕೊಳ್ಳುವುದು ಸವಾಲು ಎನಿಸುತ್ತಿತ್ತು. ರೆಕಾರ್ಡಿಂಗ್ ಸಮಯದಲ್ಲಿ ಧ್ವನಿಯ ಏರಿಳಿತ ಮತ್ತು ಸ್ಪಷ್ಟ ಉಚ್ಚಾರಣೆ ಮಾಡಲು ನನ್ನ ಕನ್ನಡ ಶಿಕ್ಷಕರು ಸಹಾಯ ಮಾಡಿದರು.



ನನಗೆ ಮಹೇಶ ಸರ್ ಬರೆದಿದ್ದ ಆ ಕವನವು ಕಂಠಪಾಠವಾಗಿ ಹೋಯಿತು. ಆ ಕವನದ ಎರಡನೆ ಚರಣದಲ್ಲಿ ನೀವು ನನ್ನನ್ನು ನೋಡಲು ಮೈಲುಗಳಷ್ಟು ಪ್ರಯಾಣ ಮಾಡಿ ಬರುತ್ತೀರಿ. ನನ್ನನ್ನು ಇಲ್ಲವಾಗುವಂತೆ ಮಾಡುವ ನಿಮ್ಮ ಕ್ರಿಯೆಗಳ ಪರಿಣಾಮಗಳ ಬಗ್ಗೆ ನೀವು ಎಂದಿಗೂ ಯೋಚಿಸುವುದಿಲ್ಲ ಎಂದು ತಿಳಿಸುವ ಸಾಲುಗಳು ತುಂಬಾ ಇಷ್ಟವಾಯಿತು. ಒಟ್ಟಾರೆಯಾಗಿ ನನಗೆ ಈ ನಾಟಕದಲ್ಲಿ ಭಾಗವಹಿಸಿದ್ದು ಸಂತಸವಾಯಿತು.

**ಸಾನ್ವಿಕಾ ಕೆ**
೮ನೆಯ ತರಗತಿ 'ಬಿ' ವಿಭಾಗ

## ಕರುನಾಳು ಬಾ ಬೆಳಕೆ





"ಓದುವುದು ಮುಖ್ಯವಲ್ಲ, ಓದಿ ತಿಳಿಯುವುದು ಮುಖ್ಯ" ಎನ್ನುವಂತೆ ಆಳವಾದ ಅರ್ಥವನ್ನು ಹೊಂದಿರುವ 'ಕರುನಾಡು ಬಾ ಬೆಳಕೆ' ಎಂಬ ಪುಸ್ತಕವನ್ನು ಓದಿದೆ. ಈ ಪುಸ್ತಕದಲ್ಲಿ ಜೀವನದ ಅರ್ಥವನ್ನು ಸಣ್ಣ ಕಥೆಗಳ ಮೂಲಕ ಸ್ಪೂರ್ತಿದಾಯಕವಾಗಿ ಹೇಳಿದ್ದಾರೆ. ಈ ಪುಸ್ತಕದಲ್ಲಿ ನನ್ನನ್ನು ಆಕರ್ಷಿಸಿದ್ದು 'ಯಶಸ್ಸಿನ ಶಿಖರದಲ್ಲಿ' ಎಂಬ ಕಥೆ. ಆ ಕಥೆಯಲ್ಲಿ ಯಶಸ್ವಿಯಾದ ಗಾಯಕ ಎನ್ರಿಕೋ ಕಾರುಜೋ ಅವರು ತಮ್ಮ ಜೀವನದ ಯಶಸ್ಸಿನ ಹಂತದಲ್ಲಿದ್ದರೂ ಸಹ ಜನರ ನಿರೀಕ್ಷೆಯನ್ನು ಪೂರೈಸುವ ಗಾಯನ ಪ್ರದರ್ಶನ ನೀಡಲು ಭಯದಿಂದ ನಡುಗುತ್ತಿದ್ದರು. ಈ ಭಯವು ಅವರನ್ನು ಮತ್ತಷ್ಟು ಚೆನ್ನಾಗಿ ಹಾಡಲು ಪ್ರೇರಣೆ ನೀಡಿದ್ದ ಅದನ್ನು ಗಮನಸೆಳೆಯುವ ಹಾಗೆ ಲೇಖಕರು ಚಿತ್ರಿಸಿದ್ದಾರೆ. 'ನಮ್ಮ ಆಯ್ಕೆ' ಎಂಬ ಕಥೆಯು ಕೂಡ ಮನೋಹರವಾಗಿತ್ತು. ಅದು ಕಿಂಗ್ ಶರ್ಮನ್ ಮತ್ತು ಬೋನ್ಸಾಯ್ ಮರಗಳ ಹೋಲಿಕೆಯ ಮೂಲಕ ಜೀವನದಲ್ಲಿ ಸ್ವತಂತ್ರವಾಗಿ ಬೆಳೆಯಬೇಕೆ ಅಥವಾ ಇತರರ ಮೇಲೆ ಅವಲಂಬಿಸಬೇಕೆ ಎಂಬುದನ್ನು ನಾವೇ ಆಯ್ಕೆ ಮಾಡಿಕೊಳ್ಳಬೇಕು ಎಂಬ ಸಂದೇಶವನ್ನು ತಿಳಿಸಿಕೊಟ್ಟಿತು. ಇಂತಹ ತುಂಬಾ ಕಥೆಗಳಿರುವ ಸಕಾರಾತ್ಮಕ ಚಿಂತನೆಗಳನ್ನು ಮತ್ತು ಜೀವನದ ಅರ್ಥವನ್ನು ತಿಳಿಸುವ ಈ ಪುಸ್ತಕ ನನ್ನ ಮೆಚ್ಚಿನ ಪುಸ್ತಕಗಳಲ್ಲಿ ಒಂದಾಯಿತು.



**ಅಚಿತಾ ಎನ್**
೮ನೆಯ ತರಗತಿ 'ಎ' ವಿಭಾಗ

## ನನ್ನ ಊರಿಗೆ ಪಯಣ



ಬೆಳಿಗ್ಗೆ ಹತ್ತಕ್ಕೆ ಬಿಟ್ಟರೆ ಸಂಜೆ ಐದಕ್ಕೆ ನನ್ನ ಊರಿಗೆ ತಲುಪುವೆ. ಎಂತಹ ಸೊಗಸಾದ ಜಾಗ ನನ್ನೂರು. ಭಾಷೆಯಲ್ಲಾಗಲೀ, ಸಂಸ್ಕೃತಿಯಲ್ಲಾಗಲೀ ನಾನು ಕಂಡ ಸುಂದರವಾದ ಸ್ಥಳ ನನ್ನೂರು. ಅಲ್ಲಿನ ಪ್ರಕೃತಿ ಬಹಳ ಅಂದವಾಗಿದೆ. ಎಲ್ಲಿ ನೋಡಿದರೂ ಹಸಿರಿನಿಂದ ತುಂಬಿದ ಬಯಲುಗಳು. ಹೊಗೆ ಇಲ್ಲದ ಆಕಾಶ. ಕೆರೆಗಳಲ್ಲಿ ಮತ್ತು ನದಿಗಳಲ್ಲಿ ಶುದ್ಧವಾದ ನೀರು. ಮುಂಜಾನೆ ಶ್ರಮದಿಂದ ತೋಟಗಳಲ್ಲಿ ಕೆಲಸ ಮಾಡುವ ರೈತರು. ಕುರಿ ಮೇಕೆಗಳನ್ನು ಮೇಯಿಸುವ, ಹಸು ಎಮ್ಮೆಗಳನ್ನು ಕಾಯುವ ನನ್ನವರು ನನ್ನೂರಿನವರು ಎಂದಿಗೂ ಅಚ್ಚುಮೆಚ್ಚು. ನನ್ನ ಊರಿನ ಹಬ್ಬ, ಸಂಸ್ಕೃತಿ, ಸಂಪ್ರದಾಯದ ಆಚರಣೆಗಳಿಂದಾಗಿ ನಮ್ಮದು ಪರಿಪೂರ್ಣ ಬದುಕು. ಮೊಬೈಲ್ ಇಲ್ಲದೆ ನಾನು ನನ್ನ ದಸರಾ ದಿನಗಳನ್ನು ಕಳೆದ ನೆನಪು. ನಾನು ದೇಶವಿದೇಶಗಳನ್ನು ಸುತ್ತಿ ಬಂದಿದ್ದರೂ ಅಲ್ಲೂ ಸಿಗದ ಅನುಭವದ ಗಣಿ ನನ್ನೂರು. ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹೂಡೆಂ ಎಂಬ ಪುಟ್ಟ ಊರು ನನ್ನೂರು.



**ವಿಭಾ ಪಿ ರವೀಂದ್ರ**
೮ನೆಯ ತರಗತಿ, 'ಎ' ವಿಭಾಗ

## ಅಂದು – ಇಂದು



ಜೀವನವು ಸತತವಾಗಿ ಬದಲಾಗುವ ಒಂದು ಪಯಣ. ತಿಳುವಳಿಕೆಯು ಒಂದೇ ಬಾರಿಗೆ ಬರುವುದಿಲ್ಲ, ಸಣ್ಣ ಪುಟ್ಟ ದೈನಂದಿನ ಘಟನೆಗಳು ಮತ್ತು ಸನ್ನಿವೇಶಗಳು ನಮ್ಮ ಜೀವನದಲ್ಲಿ ಪ್ರತಿಯೊಂದು ಅನುಭವವೂ ನಮ್ಮ ತಿಳುವಳಿಕೆಗೆ ಒಂದೊಂದು ಇಟ್ಟಿಗೆಯಂತೆ ಸೇರಿಕೊಳ್ಳುತ್ತವೆ. ನಮ್ಮ ಅಜ್ಜ ತಾತಂದಿರು ಹೆಚ್ಚಾಗಿ ಪ್ರಕೃತಿ ಮತ್ತು ಹಳ್ಳಿಗಳ ವಾತಾವರಣದಲ್ಲಿ ಜೀವನ ನಡೆಸುತ್ತಿದ್ದರು. ಅವರು ರಾಸಾಯನಿಕಗಳಿಲ್ಲದೆ ಸ್ವತಃ ತಾವೇ ಬೆಳೆದ ತಾಜಾ ತರಕಾರಿಗಳು, ಹಣ್ಣುಗಳು ಮತ್ತು ಧಾನ್ಯಗಳನ್ನು ಸೇವಿಸುತ್ತಿದ್ದರು. ನಾಟಕ, ಹರಿಕಥೆ ಮತ್ತು ಜಾನಪದ ಹಾಡುಗಳು ಕೇವಲ ಮನೋರಂಜನೆಯನ್ನು ಪಡೆಯಲಷ್ಟೇ ಅಲ್ಲದೆ ಬಾಂಧವ್ಯ ಬೆಸೆಯಲು ಅಸ್ತ್ರವಾಗಿದ್ದವು. ಆದರೆ ಈಗ ನಮ್ಮ ಮನೆಗಳಲ್ಲಿ ಸ್ಮಾರ್ಟ್ ಫೋನ್‌ಗಳು, ಇಂಟರ್ನೆಟ್ ಮತ್ತು ಟಿವಿಗಳು ನಮ್ಮ ಮನೆಯವರನ್ನು ಪರಸ್ಪರ ಹತ್ತಿರ ತಂದಿದ್ದರೂ ವೈಯಕ್ತಿಕ ಸಂಬಂಧಗಳು ಕಡಿಮೆಯಾಗುತ್ತಿರುವುದಕ್ಕೆ ಕಾರಣಗಳಾಗಿವೆ.

ಅಷ್ಟೆ ಅಲ್ಲದೆ ನಾನು ಮತ್ತೊಂದು ಸನ್ನಿವೇಶವನ್ನು ಗಮನಿಸಿದ್ದೇನೆ. ಅದೇನೆಂದರೆ ನಂಬಿಕೆ ಮತ್ತು ನಿಷ್ಠೆಗೆ ಸಂಬಂಧಿಸಿದ್ದು. ಹಳೆಯ ಕಾಲದಲ್ಲಿ ತುಂಬಾ ನಂಬಿಕೆ ಮತ್ತು ನಿಷ್ಠೆಯಿರುವ ಕಾರಣದಿಂದ ಬಾಂಧವ್ಯ ಗಟ್ಟಿಯಾಗಿತ್ತು. ಇತ್ತೀಚಿನ ಗೆಳೆತನಗಳು ಅಥವಾ ಸಂಬಂಧಗಳು ಹೆಚ್ಚಾಗಿ ಪಾರ್ಟಿ, ಉದ್ಯೋಗ ಮತ್ತು ಹವ್ಯಾಸಗಳಿಗೆ ಸೀಮಿತವಾಗಿವೆ. ಹೆಚ್ಚಿನ ಜನರಿಗೆ ಸ್ನೇಹ ಗಳಿಸುವುದು ಸುಲಭ, ಆದರೆ ಅವರೊಂದಿಗೆ ಆಳವಾದ ಬಂಧವನ್ನು ಕಾಪಾಡಿಕೊಳ್ಳುವುದು ಕಷ್ಟವಾಗಿದೆ. ಈ ಪ್ರತಿಕ್ರಿಯೆಯು ನಾವು ಹೇಗೆ ಬದಲಾಗಿದ್ದೇವೆ ಎಂಬುದನ್ನು ತಿಳಿದು, ಜೀವನದ ಕಳೆದು ಹೋದ ಸಂಪರ್ಕಗಳನ್ನು ಪುನಃ ಸ್ಥಾಪಿಸಲು ಮತ್ತು ಸಂತೋಷದ ಹಾದಿಯನ್ನು ಕಂಡುಕೊಳ್ಳಲು ಸಹಾಯಮಾಡುತ್ತದೆ ಎಂದು ನಂಬುತ್ತೇನೆ. ಇದು ನಾನು ಮತ್ತು ನನ್ನ ಗೆಳತಿಯಾದ ಅಚಿತಾ 'ಹಳೆಯ ಕಾಲದ ನೆನಪು ಮತ್ತು ಗೆಳೆತನ' ಎಂಬ ವಿಷಯದ ಬಗ್ಗೆ ಚರ್ಚಿಸಿದ್ದಾಗಿದೆ.



**ಸಾನಿಧ್ಯಾ ಕೆ**
8ನೆಯ ತರಗತಿ, 'ಚ' ವಿಭಾಗ

## ಬಹುಮಾನ – ಹೃದಯಸ್ಪರ್ಶಿ ಕಲಿಕೆ



'ಬಹುಮಾನ' ಕವಿತೆಯು ಕುವೆಂಪು ಅವರ ಜೀವನದ ಒಂದು ಮಹತ್ವದ ತಿರುವಿನ ಕ್ಷಣವನ್ನು ಚಿತ್ರಿಸುತ್ತದೆ. ಕುವೆಂಪು ಅವರು ತಮ್ಮ ಕಾವ್ಯ ಪ್ರತಿಭೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆಯಲು ಪ್ರಾರಂಭಿಸಿದಾಗ ಐರಿಷ್ ದೇಶದ ಕವಿಯೊಬ್ಬರು ಅವರಿಗೆ ಮಾತೃಭಾಷೆಯಲ್ಲಿ ಬರೆಯಲು ಸಲಹೆ ನೀಡುತ್ತಾರೆ. ಈ ಮಾತು ಕುವೆಂಪು ಅವರ ಮನಸ್ಸಿನಲ್ಲಿ ಬೆಳಕಿನ ಕಿರಣದಂತೆ ಹೊಳೆಯಿತು. ಅದರಂತೆ ಕುವೆಂಪು ಅವರು ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದರು.

ಈ ಕವಿತೆ ನನಗೆ ಕೇವಲ ಒಂದು ಪಾಠವಲ್ಲ, ಅದು ಬದುಕಿನ ಪಾಠವಾಗಿದೆ. ನಮ್ಮ ತಾಯಿಭಾಷೆ ಕೇವಲ ಮಾತನಾಡುವ ಸಾಧನವಲ್ಲ, ಅದು ನಮ್ಮ ಹೃದಯದ ಸ್ಪಂದನೆ, ನಮ್ಮ ಆತ್ಮದ ಧ್ವನಿ. ಕುವೆಂಪು ಅವರ ಈ ಅರಿವು ನನ್ನೊಳಗೆ ಕನ್ನಡದ ಮೇಲಿನ ಅಪಾರ ಪ್ರೀತಿ ಮತ್ತು ಗೌರವವನ್ನು ಹೆಚ್ಚಿಸಿತು.



ನಾವು ಕನ್ನಡದಲ್ಲಿ ಯೋಚಿಸಿದಾಗ ನಮ್ಮ ಭಾವನೆಗಳು ಸತ್ಯವಾಗಿ ವ್ಯಕ್ತವಾಗುತ್ತವೆ. ತಾಯಿಭಾಷೆಯಲ್ಲಿ ಬರೆಯುವ ಪ್ರತಿಯೊಂದು ಪದವು ಹೃದಯ ಸ್ಪರ್ಶಿಯಾಗಿರುತ್ತದೆ. ಹಾಗೆಯೇ ನಾವು ಯಾವ ಕೆಲಸದಲ್ಲಿ ಪರಿಣಿತರೋ ಅದನ್ನು ಅತ್ಯಂತ ನಿಸ್ವಾರ್ಥದಿಂದ, ಪ್ರಾಮಾಣಿಕತೆಯಿಂದ ಮಾಡಬೇಕು ಎಂಬುದನ್ನು ಕಲಿತೆ. 'ತಾಯಿಭಾಷೆಯ ಗೌರವವೇ ನಿಜವಾದ ಬಹುಮಾನ' ಎಂಬುದು ನಾನು ಈ ಕವಿತೆಯಿಂದ ಕಲಿತ ಅತ್ಯಂತ ಅಮೂಲ್ಯವಾದ ಪಾಠವಾಗಿದೆ.

**ಧೃತಿ ಎಂ**
8ನೆಯ ತರಗತಿ 'ಚ' ವಿಭಾಗ

## ಪರಿಶ್ರಮ



ಪುಟ್ಟ ಹಕ್ಕಿಯ ಪರಿಶ್ರಮದ ಗುಣವನ್ನು ನಾನು ಮೆಚ್ಚುತ್ತೇನೆ. ತನ್ನ ಮರಿಗಳು ಚಳಿ, ಮಳೆ ಹಾಗೂ ಬಿರುಗಾಳಿಯಿಂದ ಸುರಕ್ಷಿತವಾಗಿರಲಿ ಎಂದು ಹಗಲು ರಾತ್ರಿ ಗೂಡನ್ನು ಕಟ್ಟಲು ತುಂಬಾ ಪರಿಶ್ರಮ ಪಡುತ್ತದೆ. ಈ ಪರಿಶ್ರಮದ ಗುಣವನ್ನು ನಾನು ನನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದೇನೆ. ಅದಕ್ಕೆ ಉದಾಹರಣೆಗೆ ನಾನು ಎಂಟನೇ ತರಗತಿಯಲ್ಲಿ ಓದುತ್ತಿದ್ದಾಗ ಪರೀಕ್ಷೆ ನಡೆಯುತ್ತಿತ್ತು. ಮುಂದಿನ ಪರೀಕ್ಷೆ ಕನ್ನಡ ಇದ್ದುದರಿಂದ ಹಿಂದಿನ ದಿನ ರಾತ್ರಿ ತುಂಬ ಶ್ರಮಪಟ್ಟು ಓದಿ, ಬರೆದು ತಯಾರಿ ನಡೆಸಿ ಪರೀಕ್ಷೆಯನ್ನು ಚೆನ್ನಾಗಿ ಬರೆದು ಬಂದೆ. ಒಂದು ವಾರದ ನಂತರ ಕನ್ನಡದಲ್ಲಿ ನನಗೆ 25ಕ್ಕೆ 24 1/2 ಅಂಕಗಳು ದೊರಕಿದವು. ಯಾವುದೇ ಕೆಲಸವನ್ನು ಶ್ರದ್ಧೆ, ಭಕ್ತಿ, ಪ್ರೀತಿ ಮತ್ತು ಪರಿಶ್ರಮದಿಂದ ಮಾಡಿದರೆ ಅದು ನಮಗೆ ಗೆಲುವು ತಂದುಕೊಡುತ್ತದೆ ಎಂಬ ಅರಿವಾಯಿತು.



**ಧ್ರುವ್ ಆರ್**
9ನೆಯ ತರಗತಿ 'ಸಿ' ವಿಭಾಗ

## ಒಡೆಯರಿಗೊಂದು ಪತ್ರ



ಪೂಜ್ಯ ನಾಲ್ವಡಿ ಕೃಷ್ಣರಾಜ ಒಡೆಯರೇ,

ನಿಮ್ಮ ಕಾಲದ ಕರ್ನಾಟಕವನ್ನು ನೆನಪಿಸಿಕೊಳ್ಳುತ್ತಾ ಕನ್ನಡಿಗನಾದ ನಾನು ನಿಮ್ಮ ನಾಯಕತ್ವ ಹಾಗೂ ನಿಮ್ಮ ಅಭಿವೃದ್ಧಿಗಳನ್ನು ಮೆಚ್ಚಿ ಹೊಗಳಲು ಇಚ್ಛಿಸುತ್ತೇನೆ. ನಿಮ್ಮ ರಾಜ್ಯಭಾರದಲ್ಲಿ ನಮ್ಮ ಕರುನಾಡು ಯಾವುದೇ ರಾಜ್ಯ ನೋಡದ ಅಭಿವೃದ್ಧಿಯನ್ನು ಕಂಡಿತು. ಶೇಷಾದ್ರಿ ಅಯ್ಯರ್ ಹಾಗೂ ಸರ್ ಎಂ ವಿಶ್ವೇಶ್ವರಯ್ಯ ಅವರಂತಹ ವಿವೇಕವುಳ್ಳ, ಶ್ರೇಷ್ಠ ದಿವಾನರ ಜೊತೆ ಸೇರಿ ಚತುರ, ವೀರ, ಆದರ್ಶ ನಾಯಕರಾದ ನೀವು ನಮ್ಮ ನಾಡನ್ನು ಸ್ವರ್ಗವನ್ನಾಗಿ ಮಾಡಲು ಯೋಜನೆಗಳನ್ನು ರೂಪಿಸಿದ್ದೀರಿ. ಪ್ರಜಾಪ್ರಭುತ್ವ ಸಭೆ, ಹಲವಾರು ಸಾಮಾಜಿಕ ಕಾನೂನುಗಳು, ವಿಕ್ಟೋರಿಯಾ ಆಸ್ಪತ್ರೆ, ಮೈಸೂರಿನ ಭೂ ವಿಜ್ಞಾನ ಸಂಸ್ಥೆಯ ಸ್ಥಾಪನೆ, ಓರಿಯಂಟಲ್ ರಿಸರ್ಚ್ ಸಂಸ್ಥೆ ಇತರ ಅಭಿವೃದ್ಧಿಯ ಯೋಜನೆಗಳನ್ನು ಜಾರಿಗೊಳಿಸಿದ್ದೀರಿ. ಸ್ವತಃ ರಾಜರಾದ ತಾವು, ಪ್ರಜೆಗಳಿಗೆ ಮನ್ನಣೆ ನೀಡಿ ಪ್ರಜಾಪ್ರಭುತ್ವಕ್ಕೆ ಕೊಡುಗೆ ನೀಡಿದ್ದು ನಮಗೆ ಹೆಮ್ಮೆಯ ವಿಷಯ. ನಿಮ್ಮ ಈ ಹಲವು ಕಾನೂನುಗಳಿಂದ ಭಾರತದ ಮುಂದಿನ ನಾಯಕರು ಕಲಿತು ಪ್ರೇರಿತರಾಗಲಿ ಎಂಬುದು ನನ್ನ ಅಭಿಲಾಷೆ.



ಮೈಸೂರು ರಾಜ್ಯವು ಈಗ ಅದೇ ರೀತಿಯಲ್ಲಿಲ್ಲ. ಹೇಗೋ ಏನೋ ರಾಜಕೀಯ ನಾಯಕರು ವಿದ್ಯೆ, ವಿವೇಕತನದಿಂದ ಮೈಸೂರಿನ ಇತಿಹಾಸವನ್ನು ಸ್ವಲ್ಪ ಉಳಿಸಿದ್ದಾರೆ. ಅವರ ಅಸಮರ್ಥ ನಾಯಕತ್ವ, ಧನ-ಧಾನ್ಯದ ದುರಾಸೆ, ಶಕ್ತಿಗಾಗಿ ಕಾದಾಟ ಇವೆಲ್ಲಾ ಕಾರಣಗಳಿಂದ ಅಸಮರ್ಥ, ಅವಿವೇಕಿಗಳನ್ನು ನಮ್ಮ ರಾಜ್ಯದ ನಾಯಕರನ್ನಾಗಿ ಮಾಡಲಾಗುತ್ತಿದೆ. ಕೊಳಕು ರಾಜಕೀಯ ಹಾಗೂ ದುಡ್ಡು ನೀಡಿ ಮತ ತೆಗೆದುಕೊಳ್ಳುವ ಅಭ್ಯಾಸಗಳಿಂದ ನಾಯಕರ ಮತಗಳು ಪ್ರಜಾಪ್ರಭುತ್ವಕ್ಕೆ ನಾಚಿಕೆಯನ್ನುಂಟುಮಾಡುತ್ತಿವೆ. ಈ ಸಮಸ್ಯೆಗೆ ನಿಮ್ಮ ನಾಯಕತ್ವವು ಪರಿಹಾರವಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಇತಿ ತಮ್ಮ ಪ್ರೀತಿಯ


**ಪ್ರಣವ್ ಸಿ ಎನ್**

10ನೆಯ ತರಗತಿ 'ಎಫ್' ವಿಭಾಗ

## ಪರಿಸರ ಸಂರಕ್ಷಣೆ



ನೂರಾರು ವರ್ಷಗಳ ಹಿಂದೆ ಎಲ್ಲೆಲ್ಲಿಯೂ ಪ್ರಕೃತಿಯು ಹಸಿರಿನಿಂದ ಕಂಗೊಳಿಸುತ್ತಿತ್ತು. ಜನರು ಪ್ರಕೃತಿಯನ್ನು ಪ್ರೀತಿ ಹಾಗೂ ಗೌರವದಿಂದ ಕಾಣುತ್ತಿದ್ದರು. ಈಗಿನ ಕಾಲದ ಅನೇಕ ಜನರು ಪ್ರಕೃತಿಯು ನೀಡುವ ಎಲ್ಲ ವಸ್ತುಗಳನ್ನು ಬಳಸಿ ಪ್ರಕೃತಿಗೆ ಗೌರವ ನೀಡದೆ ಅದರ ಬಗ್ಗೆ ಯೋಚಿಸದೆ ಅಹಂಕಾರದಿಂದ ಬದುಕುತ್ತಿದ್ದಾರೆ. ಅಲ್ಲದೆ ಪರಿಸರವನ್ನು ಹಾಳು ಮಾಡುವ ಕೆಲಸಗಳನ್ನು ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಕಾರ್ಖಾನೆಗಳಿಂದ ವಾಯು, ನೆಲ ಹಾಗೂ ಜಲಮಾಲಿನ್ಯ ಉಂಟಾಗುತ್ತಿದೆ. ಗಿಡಮರಗಳನ್ನು ಕತ್ತರಿಸಿ ದೊಡ್ಡ ದೊಡ್ಡ ರಸ್ತೆಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಜನರು ಪ್ಲಾಸ್ಟಿಕ್ ವಸ್ತುಗಳನ್ನು ಬಳಸುತ್ತಿದ್ದಾರೆ. ಇವೆಲ್ಲವನ್ನೂ ಸಂಪೂರ್ಣವಾಗಿ ನಿಲ್ಲಿಸಲು ಆಗದಿದ್ದರೂ ಸಾಮಾನ್ಯ ಜನರಾದ ನಾವು ಪರಿಸರ ಸಂರಕ್ಷಣೆಯಲ್ಲಿ ನಮ್ಮ ಪಾತ್ರವೇನೆಂಬುದನ್ನು ಅರಿತು ಪರಿಸರ ಸಂರಕ್ಷಣೆಯ ಬಗ್ಗೆ ಜನರಿಗೆ ಅರಿವು ಮೂಡಿಸುವುದು, ಪ್ಲಾಸ್ಟಿಕ್ ಬದಲು ಬಟ್ಟೆ ಅಥವಾ ಪೇಪರ್ ಕೈಚೀಲಗಳನ್ನು ಬಳಸುವುದರಿಂದ ನಾವು ಪರಿಸರ ಸಂರಕ್ಷಣೆಯಲ್ಲಿ ನಮ್ಮ ಪಾತ್ರವನ್ನು ನಿರ್ವಹಿಸಬಹುದು. ಇವೆಲ್ಲ ಕಾರ್ಯಗಳನ್ನು ನಾವು ಮಾಡಲು ಪ್ರಯತ್ನಿಸಿದರೆ ಪರಿಸರ ಸಂರಕ್ಷಣೆಯನ್ನು ಸುಲಭವಾಗಿ ಮಾಡಬಹುದು.



**ತನ್ಮಯ್ ಆರ್**

10ನೆಯ ತರಗತಿ 'ಇ' ವಿಭಾಗ

## ಬದುಕನ್ನು ಸಂಭ್ರಮಿಸೋಣ



ಮನುಷ್ಯರಾದ ನಾವು ಕಾಲಕ್ಕೆ ತಕ್ಕಂತೆ ಜೀವನದಲ್ಲಿ ಬದಲಾವಣೆಯನ್ನು ತಂದುಕೊಂಡು ಬಾಳಬೇಕು. ನಮಗೆ ಕಷ್ಟ ಬಂದಾಗ ನಾವು ಹೆಚ್ಚು ಚಿಂತಿಸದೆ ನಮಗೂ ಒಂದು ದಿನ ಸಂಭ್ರಮ ಪಡುವ ದಿನ ಬಂದೇ ಬರುತ್ತದೆ; ಕಷ್ಟವೇ ಕೊನೆವರೆಗೂ ಇರುವುದಿಲ್ಲ, ಸಂಭ್ರಮವೂ ಇರುವುದಿಲ್ಲ ಎಂಬ ಭಾವನೆಯೊಂದಿಗೆ ಜೀವನದಲ್ಲಿ ಕಷ್ಟಗಳು ಬಂದಾಗ ಅದನ್ನು ಧೈರ್ಯದಿಂದ ಎದುರಿಸಬೇಕು. ಅದರ ಬದಲು ಅಯ್ಯೋ! ನಮಗೆ ಕಷ್ಟ ಬಂತಲ್ಲಪ್ಪ ಎಂದು ಚಿಂತಿಸಬಾರದು. ಕಷ್ಟ ಕಳೆದು ಮುಂದೆ ಒಂದು ದಿನ ವಸಂತವು ಬಂದೇ ಬರುತ್ತದೆ ಎಂಬ ಭರವಸೆಯಿಂದ ಬಾಳಬೇಕು. ಕಾಲಕ್ಕೆ ತಕ್ಕಂತೆ ನಮ್ಮಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವುದೇ ಜೀವನ. ಮನುಷ್ಯನ ಜೀವನವೆಂಬುದು ಸದಾ ಸಂಭ್ರಮದ ವಸಂತ ಋತುವೇ ಆಗಿರುವುದಿಲ್ಲ. ಹೊಸ ಋತು ಬಂದಾಗ ಮನುಷ್ಯನು ಕೂಡ ಹೊಸಕಾಲಕ್ಕೆ ಹೊಂದಿಕೊಳ್ಳಬೇಕು, ಬಂದ ಕಷ್ಟ ಸುಖಗಳನ್ನು ಸಮನಾಗಿ ಸ್ವೀಕರಿಸಬೇಕು ಹಾಗೆಯೇ ಸಂಭ್ರಮಿಸಬೇಕು.



**ಪ್ರಣವಿ ಪಿ ಜಿ**

9ನೆಯ ತರಗತಿ 'ಡಿ' ವಿಭಾಗ

## ನಾ ಕಂಡಂತೆ ಸರ್ ಎಂ ವಿ



ನಾಲ್ವಡಿ ಕೃಷ್ಣರಾಜ ಒಡೆಯರು ರಾಜರಾದ್ದರಿಂದ ತಮ್ಮ ಜನರ ಏಳಿಗೆಗಾಗಿ ಕೆಲಸ ಮಾಡಬೇಕೆಂಬುದು ಅವರ ಕರ್ತವ್ಯವೇನೋ ಸರಿ. ಸರ್ ಎಂ ವಿಶ್ವೇಶ್ವರಯ್ಯನವರು ತಮ್ಮ ಜೀವನದುದ್ದಕ್ಕೂ ಜನರಿಗೆ ಉಪಯೋಗವಾಗುವಂತಹ ಕೆಲಸಗಳನ್ನೇ ಮಾಡಿದರು. ತಮ್ಮ ಸ್ವಾರ್ಥಕ್ಕಾಗಿ ಯಾವುದೇ ಕೆಲಸ ಮಾಡದೆ ಜನರಿಗೆ ಆಗಿನ ಕಾಲಕ್ಕೆ ಬೇಕಾದ ಬ್ಯಾಂಕ್ ವ್ಯವಸ್ಥೆ, ಸಾಲದ ಸಹಾಯ, ಜೀವವಿಮಾ ಯೋಜನೆಗಳು, ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿಸುವ ನಿಟ್ಟಿನಲ್ಲಿ ಕೆಲಸಗಳನ್ನು ಮಾಡಿದರು. ನಿಸ್ವಾರ್ಥ ಮನೋಭಾವದಿಂದ ಜನರಿಗೆ ಸಹಾಯ ಮಾಡುವ ಉದ್ದೇಶದಿಂದ ಪ್ರಗತಿಪರ ಕೆಲಸ ಮಾಡಿದ್ದು ಹೊಗಳುವಂತಹ ಕಾರ್ಯವಾಗಿದೆ. ಜನರಿಗೆ ಒಳಿತು ಮಾಡುವ ಯೋಚನೆ, ಜನರ ಅಭಿವೃದ್ಧಿಗಾಗಿ ಹಗಲು ರಾತ್ರಿ ಕಷ್ಟಪಡುವ ಗುಣ, ಭೇದ ಭಾವಗಳ ವಿರುದ್ಧ ದನಿಯೆತ್ತಿ ಶಿಕ್ಷಣ ಎಂಬುದು "ಕೆಲವೇ ಜನರ ಸ್ವತ್ತಲ್ಲ. ಅದು ಎಲ್ಲರ ಆ ಜನ್ಮ ಸಿದ್ಧ ಹಕ್ಕು." ಎಂದು ಮಾತನಾಡಿರುವುದು ಇವರ ಕೆಲವು ಗುಣ ವಿಶೇಷಗಳು. ತಾವು ಮಾಡುವ ಕಾರ್ಯದಲ್ಲಿ ಭಕ್ತಿ ಶ್ರದ್ಧೆಯನ್ನು ಇಟ್ಟಿರುವುದು ಮೆಚ್ಚುವಂಥದ್ದು.


ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ಪ್ರಮುಖ ಯೋಜನೆಗಳು. ಇವರು ಕಾರ್ಖಾನೆಗಳ ಉತ್ಪಾದನೆಯನ್ನು ಹೆಚ್ಚಿಸಿದರು. ಜನರಿಗೆ ಅದರಲ್ಲೂ ರೈತರಿಗೆ ಬೇಕಾದ ಸಾಲ ಸೌಲಭ್ಯದ ವ್ಯವಸ್ಥೆಯನ್ನು ಮಾಡಿದರು. ಈ ಎಲ್ಲ ಕಾರ್ಯಗಳಿಂದಾಗಿ ಆ ಕಾಲದಲ್ಲೇ ಮೈಸೂರಿಗೆ 'ಮಾದರಿ ಮೈಸೂರು' ಎಂಬ ಹೆಸರು ಬಂದಿತು. ಅವರ ಜೀವನದಿಂದ ನನಗೆ ನಿಸ್ವಾರ್ಥತೆಯಿಂದ ಬಾಳಬೇಕು, ಪರರ ಏಳಿಗೆಗಾಗಿ ಕೆಲಸ ಮಾಡಬೇಕು, ಸರಳವಾಗಿ ಜೀವನ ನಡೆಸಬೇಕು, ಜನರಿಗೆ ಮತ್ತು ಸಮಾಜಕ್ಕೆ ಒಳಿತಾಗುವ ಕಾರ್ಯಗಳನ್ನು ಕೈಗೊಳ್ಳಬೇಕೆಂಬ ನೀತಿ ಪಾಠವನ್ನು ನಾನು ಕಲಿತಿರುವೆ.



**ಲೇಖಾ ಗೌಡ**
10ನೆಯ ತರಗತಿ 'ಇ' ವಿಭಾಗ

## ಗೆಳೆತನ


'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಲ್ಲಿರುವ ಮಹಾನ್ ನಾಯಕರಾದ ಕೃಷ್ಣ ಹಾಗೂ ಕರ್ಣನ ಪಾತ್ರಗಳಿಂದ ಹಲವಾರು ಜೀವನದ ಪಾಠಗಳನ್ನು ಕಲಿಯಬಹುದು. ಕರ್ಣನು ದಾನ ಧರ್ಮದಂತಹ ಸದ್ಗುಣಗಳನ್ನು ಹೊಂದಿದ್ದರೂ ದುರ್ಯೋಧನನ ಸಹವಾಸ ಮಾಡಿ ತಾನು ಕೆಟ್ಟವರ ಗುಂಪಿನಲ್ಲಿ ಒಬ್ಬನಾದನು. ನಮ್ಮ ಜೀವನದಲ್ಲಿ ಗೆಳೆತನ ಅಥವಾ ಸಂಬಂಧವನ್ನು ಬೆಳೆಸುವಾಗ ಅವರ ಗುಣಗಳನ್ನು ಹಾಗೂ ವ್ಯಕ್ತಿತ್ವವನ್ನು ಸರಿಯಾಗಿ ಅರಿಯಬೇಕು. ಕರ್ಣನು ತನ್ನ ಗೆಳೆಯ ಅಪರಾಧವನ್ನು ಮಾಡುತ್ತಿರುವುದನ್ನು ಕಂಡರೂ ಅವನನ್ನು ತಿದ್ದಲಿಲ್ಲ. ಆದ್ದರಿಂದ ಜೀವನದಲ್ಲಿ ಒಬ್ಬರಿಗೆ ಒಳ್ಳೆಯ ಮಿತ್ರರಾಗುವುದೆಂದರೆ ಅವರ ತಪ್ಪುಗಳನ್ನು ಅರಿತು ಅವರನ್ನು ತಿದ್ದಲು ಪ್ರಯತ್ನಿಸುವುದು. ಕರ್ಣನು ಕೃಷ್ಣನ ಮಾತಿಗೆ ಒಪ್ಪದಿದ್ದರೂ ಅವನ ಕೊನೆಯ ನಿರ್ಧಾರ ಪಾಂಡವರ ಪಕ್ಷಕ್ಕೆ ಸಹಾಯವಾಯಿತು. ಕರ್ಣನು ತನ್ನ ಗೆಳೆಯನನ್ನು ಮೊದಲೇ ತಿದ್ದಿದ್ದರೆ ಅವನಿಗೆ ತನ್ನ ಗೆಳೆಯ ಹಾಗೂ ತಮ್ಮಂದಿರ ನಡುವೆ ಆಯ್ಕೆ ಮಾಡುವ ಪರಿಸ್ಥಿತಿ ಬರುತ್ತಿರಲಿಲ್ಲ. ಈಗ ಅವರು ತೆಗೆದುಕೊಂಡಿರುವ ಕೊನೆಯ ನಿರ್ಧಾರ ದುರ್ಯೋಧನನ ಪಕ್ಷದಲ್ಲಿದ್ದು ಪಾಂಡವರ ಪರವಾಗಿದೆ. ಹೀಗೆ ಅವನು ಕೊನೆಯದಾಗಿ ಧರ್ಮದ ಗೆಲುವಿಗಾಗಿ ಸಹಾಯ ಮಾಡಿದನು ಎನಿಸುತ್ತದೆ.



ಕೃಷ್ಣನು ತನ್ನ ಮೇಲೆ ನಂಬಿಕೆ ಇಟ್ಟಿರುವ ಪಾಂಡವರನ್ನು ಉಳಿಸಿಕೊಳ್ಳಲು ಮಾಡಿದ್ದು ತಂತ್ರಗಳಾದರು ಅವನ ಉದ್ದೇಶ ಧರ್ಮದ ಗೆಲುವಾಗಿತ್ತು. ಕರ್ಣನಂತೆ ಕೃಷ್ಣನು ದುರ್ಯೋಧನನಂತಹ ದ್ವೇಷ, ಸೇಡು, ಹೊಟ್ಟೆಕಿಚ್ಚಿನಂತಹ ಗುಣಗಳುಳ್ಳವನ ಜೊತೆ ಸೇರಲಿಲ್ಲ. ಕೃಷ್ಣನ ಮುಖ್ಯ ಉದ್ದೇಶ ಕರ್ಣನಿಗೆ ಅವನ ಜನ್ಮ ರಹಸ್ಯವನ್ನು ಹೇಳಿ ಅವನು ತನ್ನ ಶಕ್ತಿಯನ್ನು ಪಾಂಡವರ ವಿರುದ್ಧ ಬಳಸುವುದನ್ನು ತಡೆಯುವುದಾಗಿತ್ತು. ಹೀಗೆ ದುಷ್ಟ ಶಕ್ತಿಯುಳ್ಳ ದುರ್ಯೋಧನನ ನಾಶವಾಗುವುದು ಹಾಗೂ ಕರ್ಣನಿಗೆ ಅಧಿಕಾರ ಸಿಗುವಂತೆ ಮಾಡುವ, ಒಳಿತನ್ನು ಬಯಸುವ ಕೃಷ್ಣನ ಗುಣಗಳು ನನಗೆ ಇಷ್ಟವಾದವು.



**ಶ್ರಾವಣಿ ಎಸ್ ಕೆ**
10ನೆಯ ತರಗತಿ 'ಎಫ್' ವಿಭಾಗ




### ವಡ್ಡಾರಾಧನೆ

ವಡ್ಡಾರಾಧನೆಯು ಶಿವಕೋಟ್ಯಾಚಾರ್ಯ ಬರೆದಿರುವನೆಂದು ನಂಬಲಾಗಿರುವ ಜೈನ ಧಾರ್ಮಿಕ (ನೋಂಪಿ) ಕಥೆಗಳ ಸಂಗ್ರಹ. ಕನ್ನಡದಲ್ಲಿ ದೊರೆತಿರುವ ಕೃತಿಗಳಲ್ಲಿ, ಎಲ್ಲದಕ್ಕಿಂತ ಹಳೆಯದಾದ ಮೊಟ್ಟಮೊದಲ ಗದ್ಯಕೃತಿ ಇದಾಗಿದೆ. ಇತ್ತೀಚೆಗಿನ ಸಂಶೋಧನೆಯ ಪ್ರಕಾರ ಈ ಕೃತಿಯು ಭ್ರಾಜಿಷ್ಣುವಿನಿಂದ ರಚಿಸಲ್ಪಟ್ಟಿತು ಎಂದು ಹೇಳಲಾಗುತ್ತಿದೆ.

## ಭರವಸೆ



ಚಳಿಗಾಲದಲ್ಲಿ ಹೂಗಳಿಲ್ಲ, ಹಸಿರಿಲ್ಲ, ಹಕ್ಕಿಗಳ ಹಾಡು ಇರುವುದಿಲ್ಲ. ಎಲ್ಲೆಲ್ಲೂ ಚಳಿ ಮತ್ತು ಮಂಜು ಆವರಿಸಿರುತ್ತದೆ. ಇದು ನಮ್ಮ ಕಷ್ಟದ ಸಮಯವನ್ನು ಸೂಚಿಸುತ್ತದೆ. ಪ್ರತಿಯೊಂದು ಋತುವಿಗೂ ತನ್ನದೇ ಆದ ಧರ್ಮವಿದೆ. ಪ್ರಕೃತಿಯು ಈ ಚಳಿಗಾಲವನ್ನು ಸ್ವೀಕರಿಸುತ್ತಿದೆ. ಇದರ ಅರ್ಥ ಕಷ್ಟದ ಸಮಯ ಬಂದಾಗ ಅದನ್ನು ಸಹಿಸಿಕೊಳ್ಳಬೇಕು. ಮನುಷ್ಯನ ಜೀವನದಲ್ಲಿ ಕಷ್ಟಗಳು ಹೇಗೆ ಬರುತ್ತದೋ ಹಾಗೆಯೇ ಚಳಿಗಾಲದ ನಂತರ ವಸಂತ ಕಾಲ ಬರುತ್ತದೆ. ಆಗ ಪ್ರಕೃತಿಯಲ್ಲಿ ಮತ್ತೆ ಹೂಗಳು ಅರಳುತ್ತವೆ, ಹಸಿರು ಚಿಗುರುತ್ತದೆ. ಅದೇ ರೀತಿ ಕಷ್ಟದ ನಂತರ ಒಳ್ಳೆಯ ದಿನಗಳು ಖಂಡಿತ ಬರುತ್ತವೆ. 'ಹೇಮಂತ' ಪದ್ಯವು ಕಷ್ಟದ ಸಮಯದಲ್ಲೂ ಭರವಸೆಯನ್ನು ಬಿಡಬಾರದು, ಒಳ್ಳೆಯ ದಿನಗಳು ಬರುತ್ತವೆ ಎಂದು ನಂಬಿ ಬದುಕಬೇಕೆಂಬುದನ್ನು ಕಲಿಸುತ್ತದೆ. ಮನುಷ್ಯನ ಬದುಕು ಸದಾ ಸಂಭ್ರಮದ ವಸಂತ ಋತುವೇ ಆಗಿರುವುದಿಲ್ಲ. ಮನುಷ್ಯನ ಬದುಕು ತೀವ್ರ ಪರೀಕ್ಷೆಗೆ ಒಳಗಾಗುತ್ತದೆ. ಇದನ್ನು ಹೇಮಂತ ಋತುವಿನ ಜಡ ಮತ್ತು ನೀರಸ ವಾತಾವರಣದೊಂದಿಗೆ ಹೋಲಿಸಿ ಜೀವನದಲ್ಲಿ ಕೇವಲ ಸಂತೋಷಗಳು ಮಾತ್ರ ಇರುವುದಿಲ್ಲ. ಎಂದು ಕವಿ ಹೇಳಿರುವ ರೀತಿ ನನಗೆ ತುಂಬಾ ಇಷ್ಟವಾಯಿತು.



**ಅರ್ಜುನ್ ಎಲ್ ಹರಿ**
9ನೆಯ ತರಗತಿ 'ಸಿ' ವಿಭಾಗ

## ಯಥಾ ರಾಜ ತಥಾ ಪ್ರಜಾ



ವಿಷ್ಣುವರ್ಧನ ಮಹಾರಾಜನು ಅವನ ಸೈನ್ಯದವರು ತಲಕಾಡನ್ನು ಗೆದ್ದ ನಂತರ ಅಲ್ಲಿನ ಎಲ್ಲವನ್ನೂ ದೋಚಬೇಕೆಂಬ ದುರಾಸೆಯ ದಾರಿಯಲ್ಲಿ ನಡೆದಾಗ ಅವರನ್ನು ಒಳ್ಳೆಯ ದಾರಿಗೆ ಕೊಂಡೊಯ್ದನು. ಅವನ ಸೈನಿಕರು ತಲಕಾಡನ್ನು ಲೂಟಿ ಮಾಡಲು ಯೋಚಿಸಿದಾಗ ವಿಷ್ಣುವರ್ಧನು ಅವರಿಗೆ ಬುದ್ಧಿ ಹೇಳಿದನು. ಯುದ್ಧ ಗೆದ್ದ ಮೇಲೆ ತಲಕಾಡಿನವರನ್ನು ನಮ್ಮವರೆಂದೇ ತಿಳಿದು ನಡೆಸಿಕೊಳ್ಳಿ ಎಂದು ತಮ್ಮ ಸೈನ್ಯಕ್ಕೆ ಬುದ್ಧಿ ಹೇಳಿದನು. ವಿಷ್ಣುವರ್ಧನನು ಧರ್ಮ ಮತ್ತು ಶಾಂತಿಯ ಸ್ಥಾಪನೆಗೆ ಆದ್ಯತೆ ನೀಡಿದ್ದನು. ಆದ್ದರಿಂದ ರಾಜ ವಿಷ್ಣುವರ್ಧನ ಎಲ್ಲರಿಗೂ ಆದರ್ಶ ನಾಯಕರಾಗಿದ್ದನು. ರಾಜನಂತೆ ರಾಜ್ಯದ ಪ್ರಜೆಗಳು ವಿಷ್ಣುವರ್ಧನನಿಗೆ ನಿಷ್ಠರಾಗಿದ್ದರು. ಅವರು ಯಾರಿಗೂ ಕೆಟ್ಟದ್ದನ್ನು ಬಯಸಲಿಲ್ಲ. ರಾಜ ವಿಷ್ಣುವರ್ಧನ ಇದಕ್ಕೆ ಕಾರಣ. ಯಾರಿಗೂ ಕೆಟ್ಟದ್ದನ್ನು ಬಯಸದ ರಾಜ ಅವರ ಪ್ರಜೆಗಳಿಗೆ ಮಾದರಿ ರಾಜನಾಗಿದ್ದನು. ರಾಜನಲ್ಲಿ ಒಳ್ಳೆಯ ಗುಣಗಳಿದ್ದರೆ ಅವರ ಪ್ರಜೆಗಳು ಅವರಂತೆ ಇರುತ್ತಾರೆ. ಆದ್ದರಿಂದ ಹಿರಿಯರು 'ಯಥಾ ರಾಜ ತಥಾ ಪ್ರಜಾ' ಎಂದು ಹೇಳುತ್ತಾರೆ.

ನಾನು ಒಂದು ಬಾರಿ ಆಟದಲ್ಲಿ ನಾಯಕಿಯಾಗಿದ್ದೆ. ಆಗ ಎಲ್ಲರನ್ನು ಸಮಾನವಾಗಿ ನೋಡಿದೆ, ಭೇದ ಭಾವ ಮಾಡಲಿಲ್ಲ. ನಾನು ನನ್ನ ತಂಡದಲ್ಲಿ ಇದ್ದ ಎಲ್ಲರಿಗೂ ಸಮಾನ ಅವಕಾಶ ನೀಡಿ ಪ್ರೋತ್ಸಾಹಿಸಿದೆ. ಅವರ ಮೇಲೆ ನಂಬಿಕೆ ಇಟ್ಟೆ. ಆದ್ದರಿಂದ ನಮ್ಮ ಗುಂಪು ಚೆನ್ನಾಗಿ ಆಡಿ ಗೆದ್ದಿತು.



**ಚಾರ್ವಿ ಎಸ್**
9ನೆಯ ತರಗತಿ 'ಡಿ' ವಿಭಾಗ

## ಹಲ್ಮಿಡಿ ಶಾಸನ



ಹಲ್ಮಿಡಿ ಶಾಸನ ಕನ್ನಡ ಲಿಪಿಯಲ್ಲಿ ರಚಿಸಲ್ಪಟ್ಟಿರುವ ಮೊಟ್ಟ ಮೊದಲ ಶಾಸನ ಎಂದು 2017ವರೆಗೂ ದಾಖಲಾಗಿತ್ತು. (ಭಾರತೀಯ ಸರ್ವೇಕ್ಷಣಾ ಇಲಾಖೆ ತಾಳಗುಂದದ ಶಾಸನ ಕನ್ನಡದ ಮೊಟ್ಟಮೊದಲ ಶಾಸನ ಎಂದು ಘೋಷಿಸಿತು.) ಇದು ಹಾಸನ ಜಿಲ್ಲೆಯ ಬಳಿಯಲ್ಲಿರುವ ಹಲ್ಮಿಡಿ ಎಂಬ ಸ್ಥಳದಲ್ಲಿ 1936ರಲ್ಲಿ ಡಾ. ಎಂ. ಎಚ್. ಕೃಷ್ಣ ಎಂಬುವವರಿಂದ ಸಂಶೋಧಿಸಲ್ಪಟ್ಟಿತು. ಇದು ಹದಿನಾರು ಸಾಲುಗಳನ್ನು ಹೊಂದಿದ್ದು, ಅದರಲ್ಲಿ 3 ಸಾಲುಗಳಲ್ಲಿ ಮಾತ್ರ ಕನ್ನಡವನ್ನು ಬಳಸಿ ಕೆತ್ತಲ್ಪಟ್ಟಿದೆ ಇನ್ನುಳಿದಂತೆ ಇದು ಸಂಸ್ಕೃತ ಭಾಷೆಯಲ್ಲಿದೆ ಇದು ಹಳಗನ್ನಡ ಹಾಗೂ ಬ್ರಾಹ್ಮೀ ಲಿಪಿಯನ್ನು ಹೋಲುವಂತಹ ಕನ್ನಡ ಲಿಪಿಯಲ್ಲಿದೆ. ಕದಂಬ ವಂಶದ ಕಾಕುಸ್ಥವರ್ಮ ಬರೆಸಿದ ದತ್ತಿಶಾಸನ ಇದಾಗಿದೆ. ಹಲ್ಮಿಡಿ ಶಾಸನ ಸಂಸ್ಕೃತ ಪ್ರಭಾವಕ್ಕೆ ಒಳಗಾಗಿದ್ದರೂ, ಆ ಕಾಲದಲ್ಲಿ ಬಳಕೆಯಲ್ಲಿದ್ದ ಪ್ರೌಢ ಕನ್ನಡವನ್ನು ನಿರೂಪಿಸುತ್ತದೆ. ಹಲ್ಮಿಡಿಯ ಲಿಪಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದು ಬ್ರಾಹ್ಮಿ ಲಿಪಿಯಿಂದ ಕವಲೊಡೆದ ಮೊದಲ ಸ್ವತಂತ್ರ ಕನ್ನಡ ಲಿಪಿ. ಖ್ಯಾತ ಇತಿಹಾಸಕಾರ ಷಡಕ್ಷರಪ್ಪ ಶೆಟ್ಟರ್ ಅವರು ಕನ್ನಡದ ಲಿಪಿ ಉಳಿದ ದ್ರಾವಿಡ ಭಾಷೆಗಳಿಗಿಂತ ಪ್ರಾಚೀನವೆಂದು ಸಂಶೋಧಿಸಿದ್ದಾರೆ.

## ಕಿಶೋರ ಕಮ್ಮಟದಲ್ಲಿ ವಿಜ್ಞಾನ ಪಯಣ



ಕನ್ನಡ ಪ್ರೇಮಿಯಾದ ನನಗೆ "ಕನ್ನಡದಲ್ಲಿ ಸ್ಪರ್ಧೆಗಳನ್ನು ಮಾಡಿದರೆ ಹೇಗಿರುವುದು?" ಎಂಬ ಪ್ರಶ್ನೆ ಹಲವು ಬಾರಿ ಮನಸ್ಸಲ್ಲಿ ಮೂಡಿದೆ. ಆದರೆ 'ಕಿಶೋರ ಕಮ್ಮಟ 2025' ನನ್ನ ಈ ಪ್ರಶ್ನೆಗೆ ಉತ್ತರವನ್ನು, ಸುಂದರ ಅನುಭವವನ್ನು ನೀಡಿತು. ಒಂದು ದಿನ, ನನ್ನ ಕನ್ನಡ ಶಿಕ್ಷಕರು ನನ್ನನ್ನು ಕರೆದು, "ಇಸ್ರೋ ಆಯೋಜಿಸಿರುವ ಸ್ಪರ್ಧೆಗೆ ನೀನು ಆಯ್ಕೆಯಾಗಿದ್ದೀಯೆ" ಎಂದು ಹೇಳಿದ ಕ್ಷಣ ನನ್ನ ಮನಸ್ಸು ಖುಷಿ, ಆಶ್ಚರ್ಯ ಮತ್ತು ಭಯದ ಮಿಶ್ರಣವಾಯಿತು. ಬಾಹ್ಯಾಕಾಶದ ಬಗ್ಗೆ ನನಗೆ ಬಹಳ ಕಡಿಮೆ ತಿಳಿದಿತ್ತು. ಆದರೆ ವಿಷಯವನ್ನು ಕನ್ನಡದಲ್ಲಿ ಹೇಳಬೇಕೆಂಬುದೇ ನನ್ನೊಳಗಿನ ಗಾಬರಿಯನ್ನು ಉತ್ಸಾಹವಾಗಿ ಬದಲಿಸಿತು. ನಾನು ಆರಿಸಿದ ವಿಷಯ "ಉಷ್ಣಬಲದ ಶೂನ್ಯ ನಿಯಮ". ಇದು ಹೇಳುವುದು ಇಷ್ಟೆ - ಎರಡು ವಸ್ತುಗಳು ಮೂರನೇ ವಸ್ತುವಿನೊಂದಿಗೆ ಬೆರೆತಾಗ ತಾಪ ಸಮತೋಲನದಲ್ಲಿದ್ದರೆ, ಅವು ಪರಸ್ಪರ ಕೂಡ ತಾಪ ಸಮತೋಲನದಲ್ಲಿರುತ್ತವೆ. ಈ ನಿಯಮವೇ ತಾಪಮಾನ ಅಳೆಯುವ ಮೂಲ. ಇದು ಕೇವಲ ಪಠ್ಯ ಪುಸ್ತಕದ ನಿಯಮವಲ್ಲ; ನಾವು ಬಳಸುವ ಥರ್ಮಾಮೀಟರ್ ಹೇಗೆ ಕೆಲಸ ಮಾಡುತ್ತದೆ? ಎಂಬುದರ ಹಿಂದಿನ ಮೂಲತತ್ವವೇ ಇದಾಗಿದೆ. ಈ ವಿಚಾರವನ್ನು ಮಾದರಿಗಳ ಮೂಲಕ ತೋರಿಸಲು, ವಿವರವಾಗಿ ಅರ್ಥಮಾಡಿಸಲು, ಉದಾಹರಣೆಗಳ ಮೂಲಕ ಸರಳಗೊಳಿಸಲು ನನ್ನ ಶಿಕ್ಷಕರು ಸಹಕಾರ ನೀಡಿದರು. ನನ್ನ ಪ್ರಪಂಚದಲ್ಲಿ ವಿಜ್ಞಾನ ಸ್ವಲ್ಪ ಭಯ ಹುಟ್ಟಿಸುವ ವಿಷಯವಾಗಿದ್ದರೂ, ಕನ್ನಡದಲ್ಲಿ ಓದುವಾಗ ಅದು ಆಶ್ಚರ್ಯಕರವಾಗಿ, ಸುಲಭವಾಗಿ ಅರ್ಥವಾಗತೊಡಗಿತು.

ಕೆಲವು ದಿನಗಳ ನಂತರ, "ಯು ಆರ್ ರಾವ್ ಉಪಗ್ರಹ ಕೇಂದ್ರ – ಇಸ್ರೋವಿನಲ್ಲಿ ನಡೆಯುವ ಅಂತಿಮ ಸುತ್ತಿಗೆ ನೀನು ಆಯ್ಕೆಯಾಗಿದ್ದೀಯೆ" ಎಂಬ ಸುದ್ದಿ ಬಂದಾಗ, ಇದು ಕೇವಲ ಸ್ಪರ್ಧೆಯಲ್ಲ; ಇದು ಒಂದು ಜವಾಬ್ದಾರಿಯೆಂದೇ ನನಗೆ ಅರಿವಾಯಿತು. ಪರಿಶೀಲನೆ, ಅಭ್ಯಾಸ, ಪ್ರಸ್ತುತಿಯ ಮೂಲಕ ಪ್ರತಿ ದಿನ ಅಭ್ಯಾಸ ಮಾಡಿದೆ. ಶಿಕ್ಷಕರಾದ ಶ್ರೀಮತಿ ಭವ್ಯ ಕೆ ಅವರು ಮತ್ತು ನನ್ನ ಜೊತೆ ಸ್ಪರ್ಧೆಗೆ ವೀಕ್ಷಕರಾಗಿ ಬಂದಿದ್ದ ಕು. ಶಮ್ಯತಾ, ಕು. ಧೃತಿ ಮತ್ತು ಚಿ. ಯದುನಂದನ್ ಇವರೊಂದಿಗೆ ಮಾಡಿದ ಪ್ರಯಾಣ ಮತ್ತು ಅಭ್ಯಾಸಗಳು ಮನಸ್ಸಿನಲ್ಲೇ ನಗು ಮತ್ತು ಧೈರ್ಯ ತುಂಬಿದವು. ವಿಜ್ಞಾನದ ನಿಜವಾದ ಮುಖ ಎಂದು ಕರೆಸಿಕೊಳ್ಳುವ ಬೆಂಗಳೂರನ್ನು ತಲುಪಿ ಇಸ್ರೋ ಕೇಂದ್ರಕ್ಕೆ ಕಾಲಿಟ್ಟ ಕ್ಷಣ - ವಿಜ್ಞಾನ, ಶ್ರಮ ಮತ್ತು ರಾಷ್ಟ್ರಸೇವೆ ಎನ್ನುವ ಮೂರು ಪದಗಳ ನಿಜವಾದ ಅರ್ಥವನ್ನು ಮೊದಲ ಬಾರಿಗೆ ಕಣ್ಣಾರೆ ನೋಡಿದೆ. ದೊಡ್ಡ ಕಟ್ಟಡಗಳು, ಗಂಭೀರ ಪರಿಶೀಲನೆ, ವಿಜ್ಞಾನಿಗಳ ಬುದ್ಧಿವಂತಿಕೆ ಇವುಗಳ ಮಧ್ಯೆ ನಿಂತಾಗ ರೋಮಾಂಚನವಾಯಿತು. ನನಗೆ 8ನೇ ಸ್ಪರ್ಧಿಯಾಗಿ ಪ್ರಸ್ತುತಪಡಿಸಲು ಅವಕಾಶ ದೊರೆಯಿತು. ಆದರೆ ವೇದಿಕೆಯ ಮೇಲೆ ನಿಂತಾಗ ನನ್ನ ಹೊರತು ಇನ್ನೊಂದು ಶಕ್ತಿ ನನ್ನೊಂದಿಗೆ ನಿಂತಂತೆ ಅನಿಸಿತು. ಅದು ಕನ್ನಡ! ಮಾತು ಆರಂಭಿಸುತ್ತಲೇ, ವಿಷಯದೊಂದಿಗೆ ಭಾಷೆಯೂ ನನ್ನನ್ನು ಬೆಂಬಲಿಸಿತು.

ಮಧ್ಯಾಹ್ನದ ನಂತರ, ಬೇರೆ ಶಾಲೆಗಳ ಶಿಕ್ಷಕರು ನನ್ನ ಬಳಿಬಂದು, ಕೆಲವು ಹೊಗಳಿಕೆಯ ಮಾತುಗಳನ್ನು ಆಡಿದರು. ಅವರ ಈ ಮಾತುಗಳಿಂದ ನನಗಿಂತಲೂ ಹೆಚ್ಚಾಗಿ, ನನ್ನ ಶಿಕ್ಷಕಿಯರ ಮುಖದಲ್ಲಿ ಕಾಣಿಸಿಕೊಂಡ ಖುಷಿಯೇ ನನಗೆ ದೊಡ್ಡ ಬಹುಮಾನವೆನಿಸಿತು. ಮಧ್ಯಾಹ್ನದ ನಂತರ 'ಉಪಗ್ರಹ ಪರಿಶೀಲನಾ ಕೇಂದ್ರ'ಕ್ಕೆ ಭೇಟಿ ಸಿಕ್ಕಿದ್ದು ಆ ದಿನದ ಅತ್ಯಂತ ದೊಡ್ಡ ಉಡುಗೊರೆ ಎಂದರೆ ಅತಿಶಯೋಕ್ತಿಯೇನಲ್ಲ. 35 ವರ್ಷಗಳ ಅನುಭವ ಹೊಂದಿದ ಇಸ್ರೋ ವಿಜ್ಞಾನಿಯೊಬ್ಬರು ನಾವು ಕೇಳಿದ ಪ್ರತೀ ಪ್ರಶ್ನೆಗೆ ಉತ್ತರಿಸುವಾಗ, ಅವರ ಧ್ವನಿಯಲ್ಲಿ "ವಿಜ್ಞಾನ = ಸೇವೆ" ಎಂಬ ನಿಜವಾದ ಅರ್ಥ ಕೇಳಿ ನಾನು ಪುಳಕಿತಳಾದೆ. ಉಪಗ್ರಹ ಹೇಗೆ ಪಥದಲ್ಲಿ ಚಲಿಸುತ್ತದೆ? ಅದರ ಫಲಿತಾಂಶಗಳನ್ನು ಹೇಗೆ ವಿಶ್ಲೇಷಿಸುತ್ತಾರೆ? ಇವುಗಳ ಬಗ್ಗೆ ನೇರವಾಗಿ ತಿಳಿದದ್ದು ನನ್ನ ಭವಿಷ್ಯಕ್ಕೆ ಬೆಳಕು ತೋರಿದ ನಿಜವಾದ ಕಲಿಕೆಯಾಯಿತು. ಜೊತೆಗೆ ಅವರು ನಮ್ಮನ್ನು ಬಾಹ್ಯಾಕಾಶ ವಸ್ತು ಪ್ರದರ್ಶನಕ್ಕೂ ಕರೆದುಕೊಂಡು ಹೋದರು. ಅಲ್ಲಿ ನಾವು ಇಸ್ರೋ ಶುರುವಾದ ದಿನದಿಂದ ಇವತ್ತಿನವರೆಗೆ ನಮ್ಮ ದೇಶಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ಮತ್ತು ಸಾಧನೆಗಳ ಬಗ್ಗೆ ಕಲಿತೆವು. ಕೊನೆಗೆ ಫಲಿತಾಂಶ ಘೋಷಿಸುವ ಸಮಯವಾಗಿತ್ತು. ನನ್ನ ಮನಸ್ಸು ಮೌನಕ್ಕೆ ಜಾರಿತು. ಗೆಲುವಿನ ಪ್ರಾರ್ಥನೆಯಲ್ಲ; ಅನುಭವಕ್ಕೆ ಕೃತಜ್ಞತೆಯಲ್ಲಿ ಮುಳುಗಿದ್ದೆ. ಅದೇ ಸಮಯಕ್ಕೆ "ಗಾನವಿ ಬಿ - ಮೊದಲನೇ ಬಹುಮಾನ" ಎಂದು ನನ್ನ ಹೆಸರು ಘೋಷಿಸಿದ ಕ್ಷಣ ಶಿಕ್ಷಕರ ಮುಖದಲ್ಲಿ ಕಂಡ ಹರ್ಷ, ಸ್ನೇಹಿತರ ಕಣ್ಣುಗಳಲ್ಲಿ ಮಿನುಗಿದ ಸಂತೋಷ ಅದೇ ನನ್ನ ನಿಜವಾದ ಸಂತಸವಾಗಿತ್ತು. ಈ ಅನುಭವ ಕಲಿಸಿದ ಪಾಠ, ಈ ಪಯಣ ಹೇಳಿಕೊಟ್ಟ ನೀತಿ ಒಂದೇ - ಕನ್ನಡದಲ್ಲಿ ವಿಜ್ಞಾನ ಹೇಳುವುದು ಕಷ್ಟವಲ್ಲ. ಕನ್ನಡವೇ ಎಲ್ಲವನ್ನು ಸರಳವಾಗಿ ಹೇಳುವ ಸೇತುವೆ. ಈ ಪ್ರಯಾಣ ಸಾಧ್ಯವಾದದ್ದು ಶಿಕ್ಷಕರಾದ ಶ್ರೀಯುತ ಮಹೇಶ ಹುಯಿಲಾಳು ಶ್ರೀಯುತ ಮಹೇಶ್ ಎಂ ಬಿ, ಶ್ರೀಮತಿ ಭವ್ಯ ಮತ್ತು ನನ್ನ ಶಾಲೆಯು ನನ್ನ ಮೇಲೆ ಇಟ್ಟಿದ್ದ ನಂಬಿಕೆಯ ಕಾರಣದಿಂದ. ಕಿಶೋರ ಕಮ್ಮಟ 2025 ಇದು ಕೇವಲ ಸ್ಪರ್ಧೆಯಲ್ಲ ಕನ್ನಡದ ಜೊತೆ ನಡೆದ ನನ್ನ ಮೊದಲ ವಿಜ್ಞಾನ ಪಯಣ.



ಗಾನವಿ ಬಿ
8ನೆಯ ತರಗತಿ, 'ಇ' ವಿಭಾಗ

### ಮಂಗಳೂರು ಸಮಾಚಾರ



ಮಂಗಳೂರಿನಲ್ಲಿ ನೆಲೆಸಿದ ಜರ್ಮನಿಯ ಹರ್ಮನ್ ಫ್ರೆಡ್ರಿಕ್ ಮೊಗ್ಲಿಂಗ್ ಅವರು ಹೊರಗಿನ ಪ್ರಪಂಚವನ್ನು ಅರ್ಥಮಾಡಿಕೊಳ್ಳಲು ಜನರಿಗೆ ಕನ್ನಡದಲ್ಲಿ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಆಗ ಹುಟ್ಟಿದ್ದೇ ಮಂಗಳೂರು ಸಮಾಚಾರ. ಇದು ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿತು.

## ಅಕ್ಷರದ ಬೆಳಕಿನಲ್ಲಿ ಅರಳಿದ ಅನುಭವ – ಎಕ್ಸೆಲ್ ಪಬ್ಲಿಕ್ ಸ್ಕೂಲ್

ನಾನು ಈ ಶಾಲೆಗೆ ಸೇರುವ ಮುನ್ನ ಮನಸ್ಸಿನಲ್ಲಿ ಹಲವು ಗೊಂದಲಗಳು, ಆತಂಕಗಳು ಮತ್ತು ಅನಿಶ್ಚಿತ ಭಾವನೆಗಳು ತುಂಬಿದ್ದವು. ಹೊಸ ವಾತಾವರಣ, ಹೊಸ ಶಿಕ್ಷಕರು, ಹೊಸ ನಿರೀಕ್ಷೆಗಳು ಈ ಎಲ್ಲದರ ಕುರಿತು ಸ್ವಲ್ಪ ಭಯವೂ ಇತ್ತು. ಶಾಲೆಗೆ ಬಂದ ಮೊದಲ ದಿನ ಎಲ್ಲಾ ಶಿಕ್ಷಕರ ನಗುಮೊಗಗಳನ್ನು ನೋಡಿದಾಗ ಮನಸ್ಸು ಸ್ವಲ್ಪ ನಿರಾಳವಾಯಿತು. ಪ್ರಾಂಶುಪಾಲರು, ಉಪಪ್ರಾಂಶುಪಾಲರು, ಹಾಗೂ ಮುಖ್ಯ ಶಿಕ್ಷಕರ ಮಾತುಗಳಲ್ಲಿ ಇದ್ದ ಪ್ರೀತಿ, ಪ್ರೋತ್ಸಾಹ ಮತ್ತು ಉತ್ಸಾಹ ನನ್ನಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿತು. ಆ ಕ್ಷಣವೇ ಈ ಶಾಲೆ ನನ್ನದು ಎಂಬ ಭಾವನೆ ನನ್ನ ಮನಸ್ಸಿನಲ್ಲಿ ಮೂಡಿತು.

ಪ್ರತಿಯೊಬ್ಬ ವಿದ್ಯಾರ್ಥಿಗೂ ಶಿಕ್ಷಕರು ನೀಡುವ ಮಾರ್ಗದರ್ಶನ, ಸಹಕಾರ ಅಮೂಲ್ಯವಾದುದು. ಯಾವುದೇ ಕಾರ್ಯಕ್ರಮವಾಗಲಿ, ಕೆಲಸವಾಗಲಿ, ನಾವೆಲ್ಲ ಸಹಭಾಗಿತ್ವದಿಂದ ಕೆಲಸ ಮಾಡುವ ಶೈಲಿ; ಯಾರೊಬ್ಬರು ಹಿಂದೆ ಸರಿಯದೆ, ಪ್ರತಿಯೊಬ್ಬರು ತಮ್ಮ ಪಾತ್ರವನ್ನು ನಿಷ್ಠೆಯಿಂದ ನಿರ್ವಹಿಸುವುದು ನಮ್ಮ ಶಾಲೆಯ ವಿಶೇಷತೆ. ಇದಕ್ಕೆ ಪ್ರಮುಖ ಕಾರಣವೆಂದರೆ ನಮ್ಮ ಶಾಲೆಯ ಪ್ರಾಂಶುಪಾಲರ ಮಾರ್ಗದರ್ಶನ. ಅವರು ಎಲ್ಲರನ್ನೂ ಒಂದೇ ದಾರಿಯಲ್ಲಿ ಸಾಗಿಸುವ ಶಕ್ತಿ ಹೊಂದಿರುವ ಪ್ರೇರಣಾದಾಯಕರು. ಅವರ ನೇತೃತ್ವದಲ್ಲೇ ಪ್ರತಿಯೊಂದು ಕಾರ್ಯಕ್ರಮವೂ ಅಚ್ಚುಕಟ್ಟಾಗಿ ನಡೆಯುವುದು.

ಪ್ರತಿ ಕಾರ್ಯಕ್ರಮವೂ ಸಮಯಕ್ಕೆ ಸರಿಯಾಗಿ, ಸರಿಯಾದ ಯೋಜನೆಯೊಂದಿಗೆ ನಡೆಯುತ್ತದೆ ಎಂಬುದು ಇಲ್ಲಿ ನಾನು ಕಂಡ ಪ್ರಮುಖ ಅಂಶ. ಅದರಲ್ಲಿ ಒಂದು ಮರೆಯಲಾಗದ ಅನುಭವ ನನಗೆ ಸ್ವಾತಂತ್ರ್ಯದಿನಾಚರಣೆ ವೇಳೆ ದೊರಕಿತು. ಆ ದಿನ 'ಸಾಮುದಾಯಿಕ ಸಹಭೋಜನ' ಎನ್ನುವ ವಿಶಿಷ್ಟ ಕಾರ್ಯಕ್ರಮವನ್ನು ನಾನು ಮೊದಲ ಬಾರಿಗೆ ನೋಡಿದೆ. ಮಕ್ಕಳು ಮನೆಗಳಿಂದ ತಮಗೆ ಇಷ್ಟವಾದ ತಿಂಡಿಗಳನ್ನು ತಂದು ಪರಸ್ಪರ ಹಂಚಿಕೊಂಡ ಕ್ಷಣಗಳು ಅತಿ ಮಧುರವಾಗಿದ್ದವು. ಅದು ಕೇವಲ ತಿಂಡಿ ಹಂಚಿಕೊಳ್ಳುವ ಕಾರ್ಯಕ್ರಮವಲ್ಲ; ಅದು ಸೌಹಾರ್ದತೆಯ ಸಂಕೇತವಾಗಿತ್ತು.

ನಾನು ಕನ್ನಡ ಶಿಕ್ಷಕಿಯಾಗಿ, ಈ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವದ ಸಂಭ್ರಮದಲ್ಲಿ ಭಾಗಿಯಾದ ಅನುಭವ ಮರೆಯಲಾಗದ್ದು. ಅತ್ಯಂತ ದೊಡ್ಡಮಟ್ಟದಲ್ಲಿ ಕಾರ್ಯಕ್ರಮ ಆಯೋಜನೆಗೊಂಡು ಸುಂದರವಾಗಿ ಮೂಡಿ ಬಂತು. ಪ್ರತಿ ಕಾರ್ಯಕ್ರಮವೂ ಹೊಸತನ, ವಿಭಿನ್ನತೆಯಿಂದ ಕೂಡಿರುತ್ತದೆ. ಗುರುಶಿಷ್ಯರಿಬ್ಬರೂ ಒಂದೇ ಕುಟುಂಬದಂತೆ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿರುವುದನ್ನು ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಕಾಣುವುದೇ ಒಂದು ಅದ್ಭುತ ಅನುಭವ. ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆ 'ಮೈಸೂರಿನ ನಂಬರ್ ಒನ್ ಶಾಲೆ' ಎಂದು ಹೇಳಲು ನನಗೆ ಹೆಮ್ಮೆ ಇದೆ.

ನಮ್ಮ ಶಾಲೆ ಮಕ್ಕಳ ಕನಸಿಗೆ ಬೆಳಕು ಕೊಡುವ ಮನೆ
ಇಲ್ಲಿ ಪ್ರತಿದಿನ ಹೊಸ ಕಲಿಕೆಯ ಹಾದಿ ತೆರೆಯುತ್ತದೆ.
ಶಿಕ್ಷಕರ ಮಾತಿನಲ್ಲಿ ಪ್ರೇರಣೆಯ ಬೀಜ ಮೊಳಕೆಯೊಡೆಯುತ್ತದೆ.
ಪ್ರಾಂಶುಪಾಲರ ದಾರಿದೀಪದಲ್ಲಿ ಶಾಲೆಯ ನಡಿಗೆ ಸುಂದರವಾಗುತ್ತದೆ
ಇದು ಜ್ಞಾನ ತುಂಬುತ್ತಿರುವ ಸತ್ಯದ ಗೂಡು.




**ಗೀತಾ ಎಚ್ ಆರ್**
ಕನ್ನಡ ಶಿಕ್ಷಕರು



### ಸಂತ ಶಿಶುನಾಳ ಶರೀಫರು



ಸಂತ ಶಿಶುನಾಳ ಶರೀಫರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಶಿಶುವಿನ ಹಾಳ ಗ್ರಾಮದಲ್ಲಿ ಕ್ರಿ.ಶ. 1819 ಜುಲೈ 3ರಂದು ಜನಿಸಿದರು. ಇವರ ತಂದೆ ದೇವಕಾರ ಮನೆತನದ ಇಮಾಮ ಹಜರತ ಸಾಹೇಬರು ಹಾಗು ತಾಯಿ ಹಜ್ಜೂಮಾ. ಇವರ ಪೂರ್ಣ ಹೆಸರು ಮಹಮ್ಮದ ಶರೀಫ. ಮುಲ್ಕಿ ಪರೀಕ್ಷೆ ಪಾಸು ಮಾಡಿದ ಬಳಿಕ ಶರೀಫರು ಕೆಲ ಕಾಲ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಕನ್ನಡ ಸಾಹಿತ್ಯದ ಹೆಮ್ಮೆಯ ಕವಿ ಮತ್ತು ಸಂತ, ಶಿಶುನಾಳ ಷರೀಫರು ತಮ್ಮ ತತ್ವಪದಗಳಿಂದ ಜನರ ಮನೆ ಮಾತಾಗಿದ್ದಾರೆ. ಕರ್ನಾಟಕ ಸರ್ಕಾರವು ಅವರ ಹೆಸರಿನಲ್ಲಿ 1995ರಿಂದ 'ಸಂತ ಶಿಶುನಾಳ ಷರೀಫ ಪ್ರಶಸ್ತಿ'ಯನ್ನು ನೀಡುತ್ತಾ ಬಂದಿದೆ. ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಕಲಾವಿದರು ಮಾಡಿದ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ.




ಕಥೆ: ಎದೆಯ ಹಣತೆ

ಲೇಖಕಿ: ಬಾನು ಮುಷ್ತಾಕ್

ಪ್ರಕಟಣೆ ವರ್ಷ: ಏಪ್ರಿಲ್, 2000

ವಿಮರ್ಶಕರು: ಮಹೇಶ ಹುಯಿಲಾಳು

ವಿಮರ್ಶೆಯ ಬಗೆ: ಮಾನವೀಯತಾವಾದ, ನಾರಿ ಚೇತನ, ಸಾಮಾಜಿಕ ಮತ್ತು ಕೌಟುಂಬಿಕ ದೃಷ್ಟಿಕೋನ.



**ಮಹೇಶ ಹುಯಿಲಾಳು**
ಕನ್ನಡ ಶಿಕ್ಷಕರು

ಪರಿಚಯ:

ಬಾನು ಮುಷ್ತಾಕ್ ಅವರ 'ಎದೆಯ ಹಣತೆ' ಎಂಬ ಕಥೆ ಪ್ರತ್ಯಕ್ಷವಾಗಿ ಹೆಣ್ಣಿನ ಅಸ್ತಿತ್ವ, ಅವಳ ಹಕ್ಕು, ಭಾವನೆ, ಮತ್ತು ಸಮಾಜದಲ್ಲಿ ಅವಳಿಗೆ ದೊರಕುವ ಸ್ಥಾನಮಾನವನ್ನು ಪ್ರಶ್ನಿಸುವ ಶಕ್ತಿಯುತ ಕಥೆಯಾಗಿದೆ. ಇದು ಕೇವಲ ಒಂದು ಹೆಣ್ಣಿನ ವೈಯಕ್ತಿಕ ಬದುಕಿನ ಸಂಕಷ್ಟವಲ್ಲ. ಬದಲಿಗೆ ಆ ಹೆಣ್ಣಿನ ಮಾನಸಿಕ, ಸಾಮಾಜಿಕ ಮತ್ತು ಆತ್ಮಬಲದ ಅವಲೋಕನವಾಗಿದೆ.

ಕಥಾಸಾರಾಂಶ:

ಮೆಹರುನ್ ಎಂಬ ಮಹಿಳೆ ತನ್ನ ಗಂಡನ ಅನೈತಿಕತೆ ಮತ್ತು ತವರಿನ ನೀರಸ ಪ್ರತಿಕ್ರಿಯೆಯ ನಡುವೆ ನಲುಗಿಹೋಗಿರುತ್ತಾಳೆ. ಅವಳನ್ನು ತಿರಸ್ಕರಿಸಿದ ತವರು ಮನೆ, ತನ್ನನ್ನು ಕೊನೆಯವರೆಗೆ ಬಳಸಿಕೊಂಡ ಗಂಡನನ್ನು ನೆನೆದು ನರಕದಂಥ ಬದುಕಿನಿಂದ ಹೊರಬರಲು ಅವಳು ಆತ್ಮಹತ್ಯೆಗೂ ಮುಂದಾಗುತ್ತಾಳೆ. ಕೊನೆ ಕ್ಷಣದಲ್ಲಿ, ಅವಳ ಮಗಳಾದ ಸಲ್ಮಾ ತನ್ನ ತಾಯಿಯ ಜೀವ ಉಳಿಸುತ್ತಾಳೆ. ಈ ಸಂಬಂಧವೇ ಕಥೆಯ ಪ್ರಾಣವಾಗಿದೆ.

ಪಾತ್ರಗಳ ಪರಿಚಯ:

- ಮೆಹರುನ್: ಸಾಂಪ್ರದಾಯಿಕ ಸಂಸ್ಕಾರಗಳ ನಡುವೆ ಸಂಕಟಗಳ ಸರಮಾಲೆಯಲ್ಲಿ ಬೆಳೆದ ಒಂದು ಹೆಣ್ಣು. ಮನೆಯ, ಧರ್ಮದ, ಅಣ್ಣಂದಿರ ಕಟ್ಟುಪಾಡುಗಳು ಅದು ಸಂಸ್ಕಾರದಂತೆ ಕಂಡರೂ ಅವಳ ಪಾಲಿಗೆ ಅದು ಮುಳುವಾಯಿತು. ಈಕೆ ತನ್ನ ಸ್ವಾತಂತ್ರ್ಯವನ್ನು ಹತ್ತಿಕ್ಕಿದವರ ವಿರುದ್ಧ; ಸ್ವಾತಂತ್ರ್ಯದ ಶೋಧಕ ಧನಿಯನ್ನು ಮೆಲುವಾಗಿ ಎತ್ತಿದವಳು. ಅವಳ ಆತ್ಮಚೈತನ್ಯವನ್ನು ಮೌನದಲ್ಲಿ ತೋರಿಸಿರುವುದು ಸಾಹಸಮಯ ಎನಿಸುತ್ತದೆ.
- ಇನಾಯತ್: ಹೆಣ್ಣಿನ ದೇಹವನ್ನು ಮಾತ್ರ ತನ್ನದ್ದಾಗಿಸಿಕೊಳ್ಳುವ ಪುರುಷ - ಪಿಪಾಷುವಿನ ಪ್ರತೀಕ. ಅವನು ಹೆಣ್ಣುಮಕ್ಕಳನ್ನು ವ್ಯಕ್ತಿಗಳಾಗಿ ನೋಡುವುದಕ್ಕಿಂತ ತನ್ನ ಸ್ವಾರ್ಥಪರ ಅಗತ್ಯಗಳಿಗೆ ಮಾತ್ರ ಬಳಸುತ್ತಾನೆ. ಕೈಹಿಡಿದು ಐದು ಮಕ್ಕಳನ್ನು ಪಡೆದು ತಾನುಂಡ ದೇಹವನ್ನೇ ಕೀಳಾಗಿ ಕಾಣುವ ಈತನ ಸಣ್ಣತನ ಎದ್ದು ಕಾಣುತ್ತದೆ. ಮೂರು ಬಾರಿ ಕೂಗಿ ಹೇಳಿ ಸಂಬಂಧ ಕಡಿದುಕೊಳ್ಳುವ ಧಾರ್ಮಿಕ ಪರಿಪಾಲಕ; ಧರ್ಮವನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವ, ಧರ್ಮವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲುವಂತೆ ಮಾಡುತ್ತಾನೆ.
- ಸಲ್ಮಾ: ಇವಳು ತಾಯಿ–ಮಗಳ ಸಂಬಂಧದ ಜೀವಂತ ಸಂಕೇತ. ಇವಳ ಮಮತೆಯ ಸ್ಪರ್ಶ ತಾಯಿಗೆ ಜೀವಬಚಾವಿಗೆ ಸಾಕ್ಷಿಯಾಗಿದೆ. ಸಲ್ಮಾಳ ಪಾತ್ರವು ಮುಂದಿನ ತಲೆಮಾರಿಗೆ ಹೆಣ್ಣಿನ ಆತ್ಮಬಲ, ಬುದ್ಧಿವಂತಿಕೆ ಮತ್ತು ಸಂಬಂಧಗಳ ಬದ್ಧತೆ ಇವುಗಳ ಸಂಕೇತವಾಗಿದ್ದಾಳೆ. ಹೆಣ್ಣು ಹುಟ್ಟುತ್ತಲೇ ತಾಯ್ತನವನ್ನು ಹೊಂದಿರುವವಳು ಎಂಬುದು ಇಲ್ಲಿ ಸಾಬೀತಾಗಿದೆ. ಎಳೆ ಮನಸ್ಸಿನ ಹೆಣ್ಣು ಇಲ್ಲಿ ತನ್ನ ತಾಯಿಗೆ ನಿಜತಾಯಿಯಾಗಿರುವುದನ್ನು ಕಾಣಬಹುದು. ತನ್ನ ತಮ್ಮ ತಂಗಿಯರನ್ನು ಪೊರೆಯುವ ತಾಯಿ ಇವಳು. ತಾಯಿ-ತಂದೆಯರ ಸಂಬಂಧ ಬೆಸೆಯುವ ನಿಜವಾದ ಕೊಂಡಿ ಎನಿಸಿಕೊಂಡಿದ್ದಾಳೆ. ತಾಯಿಯ ಎದೆಯಾಳದಲ್ಲಿ ಮಿಣುಕುವ ಹಣತೆ ಎಂದರೆ ಇವಳೆ.
- ಅಣ್ಣಂದಿರು: ಇಲ್ಲಿ ಅಣ್ಣಂದಿರು ಪುರುಷ ಪ್ರಧಾನತೆಯ ಸಂಕೇತವಾಗಿದ್ದಾರೆ. "ಗಂಡು ಕೆಸರು ತುಳಿದು ಕಾಲು ತೊಳೆದುಕೊಳ್ಳಬಹುದು" ಎಂಬ ಸಂದೇಶ ಸಾರುವ ದೂತರಂತೆ ಅರ್ಥಾತ್ ಧೂರ್ತರಂತೆ ಕಾಣುತ್ತಾರೆ. ಗಂಡಿಗಾಗಿ ಎಲ್ಲವನ್ನೂ ಸಹಿಸಿಕೊಳ್ಳಬೇಕು, ನಿನ್ನ ನೋಡಿ ನಮ್ಮ ಮನೆಯ ಸೊಸೆಯಂದಿರು, ಹೆಣ್ಣುಮಕ್ಕಳು ಕಲಿತಾರು ಎಂಬ ಮಾತು; ಹೆಣ್ಣನ್ನು ಭಾವನೆಯಿಲ್ಲದ ಕೇವಲ ವಸ್ತುವೆಂಬಂತೆ ಬಳಸಿಕೊಂಡಿದ್ದಾರೆ ಎನ್ನಬಹುದು.

ಸಮಾಜದ ಸಮಾಲೋಚನೆ:

ಕಥೆಯಲ್ಲಿ ತವರು ಮನೆ ಕೂಡ ತನ್ನ ಹೆಣ್ಣುಮಕ್ಕಳ ಪರವಾಗಿಲ್ಲ. ಹೆಣ್ಣುಮಕ್ಕಳ ತಪ್ಪಿಲ್ಲದ ಹೋರಾಟವನ್ನೂ ಪಾಪಕರವಾಗಿ ನೋಡುತ್ತಾರೆ. ಹೆಣ್ಣುಮಕ್ಕಳ ಬದುಕಿನಲ್ಲಿ ಅವರ ಅಭಿಪ್ರಾಯವೇ ಇಲ್ಲದಂತೆ, ಅವರ ನಿರ್ಧಾರಗಳನ್ನು ಕುಟುಂಬದ ಗೌರವದ ಹೆಸರಿನಲ್ಲಿ ಒತ್ತಾಯದಿಂದ ಹತ್ತಿಕ್ಕುತ್ತಾರೆ. ಇದು ಹೆಣ್ಣುಮಕ್ಕಳಿಗೆ ತನ್ನದೇ ಆದ ಆಯ್ಕೆಗಳಿಗಾಗಿ ಹೋರಾಟ ಮಾಡುವಂತೆ ಮಾಡುತ್ತದೆ. ತವರು ಮನೆ ಮತ್ತು ಗಂಡನ ಮನೆ ಎರಡೂ ಹೆಣ್ಣುಮಕ್ಕಳಿಗೆ ಭದ್ರತೆಯ ಕೇಂದ್ರವಾಗಬೇಕಾದರೆ, ಇಲ್ಲಿಯ ಕಥೆಯಲ್ಲಿ ಅವು ತಾನು ಸೇರುವ ಸ್ಥಳಗಳಲ್ಲ, ಹೊರದಬ್ಬಿಸುವ ಅರಣ್ಯಗಳಂತೆ ತೋರುತ್ತವೆ.

ಮೌನದ ಅರ್ಥ:

ಮೆಹರುನ್ ಮಾತನಾಡುವುದಕ್ಕಿಂತ ಹೆಚ್ಚು ನಿಂತು ತಾಳ್ಮೆಯಿಂದ ನೋಡುತ್ತಾಳೆ. "ಮೌನ – ಪ್ರತಿರೋಧದ ಹೊಸ ರೂಪ" ಎಂಬುದಾಗಿ ಪರಿಗಣಿಸಬಹುದು. ಈ ಮೌನದೊಳಗೆ ಭೀತಿಯ ಶಬ್ದ, ಪ್ರಶ್ನೆಗಳ ಸರಮಾಲೆ ಮತ್ತು ಅಸಹಾಯಕತೆಯ ಮಾತುಗಳು ಗೂಢವಾಗಿ ಅಡಗಿರುತ್ತವೆ. ಮೌನವು ಅವಳ ಪ್ರತಿರೋಧದ ಶಕ್ತಿಯನ್ನೇ ಪ್ರತಿನಿಧಿಸಿದರೂ, ಅದು ಅವಳ ಕರಾಳ ಬದುಕಿನ ಪ್ರತಿಯುತ್ತರವಾಗಿದೆ. ಇದೇ

ಮೌನದ ಒಳಗೆ ಅವಳ ಅಂತರಾಳದ ಚಿಂತನೆ, ತೀರ್ಮಾನಗಳು ಒಡಮೂಡುತ್ತವೆ. ಮೆಹರುನ್ ಮೌನವಾಗಿದ್ದರೂ, ಕಥೆಯ ಓದುಗನ ಮನಸ್ಸಿನಲ್ಲಿ ಗಂಭೀರ ಹೋರಾಟದ ಧ್ವನಿ ಪ್ರತಿಧ್ವನಿಸುವಂತೆ ಮಾಡುತ್ತದೆ.

ಸಾಹಿತ್ಯಶೈಲಿ ಮತ್ತು ರೂಪಕಗಳ ವಿಶ್ಲೇಷಣೆ:

ಬಾನು ಮುಷ್ತಾಕ್ ಅವರು ತಮ್ಮ ಕಥೆಯ ಮೂಲಕ ಒಂದೆಡೆಯಿಂದ ಮನಸ್ಸಿನ ಆಳದಲ್ಲಿ ಉಳಿದುಕೊಳ್ಳುವ ಭಾವವಿಲ್ಲದ ನೋವನ್ನೂ, ಮತ್ತೊಂದೆಡೆಯಿಂದ ಸಾಹಿತ್ಯಿಕ ಶಕ್ತಿಯನ್ನೂ ಸಮರ್ಪಕವಾಗಿ ವ್ಯಕ್ತಪಡಿಸುತ್ತಾರೆ. ಅವರ ಶೈಲಿ ಸರಳವಾಗಿದೆ, ಆದರೆ ಪರಿಣಾಮಕಾರಿಯಾದ ಭಾವಚಿತ್ರಣದ ಮೂಲಕ ಓದುಗನ ಅಂತರಂಗವನ್ನು ತಲುಪುತ್ತದೆ.

1. ವಿಶಿಷ್ಟ ಭಾಷಾಶೈಲಿ:

- ಸಂಭಾಷಣೆಯಲ್ಲಿ ಸ್ಥಳೀಯ ಶಬ್ದಗಳ ಬಳಕೆ (ಉದಾ: ಪುಪ್ಪು, ತಸ್‌ಬೀಹ್, ನಿಕಾಬ್) ಅವರು ಕಟ್ಟಿದ ನೈಜ ವಾತಾವರಣಕ್ಕೆ ಸ್ಫೂರ್ತಿ ನೀಡುತ್ತದೆ.
- ವರ್ಣನೆಯು ನೈಜವಾಗಿದ್ದು ಹೊಸ ಸಂವೇದನೆಗಳೊಂದಿಗೆ ದೈನಂದಿನ ವಿವರಗಳ ಮೂಲಕ ಓದುಗರ ಮುಂದೆ ವಿಜೃಂಭಿಸಿವೆ.

2. ರೂಪಕದ ಶಕ್ತಿ – 'ಹಣತೆ':

- 'ಹಣತೆ' ಎಂಬ ಶಬ್ದದ ಮೂಲ ಅರ್ಥ – ಬೆಳಕು ನೀಡುವ ಪರಿಕರ. ಲೇಖಕಿ ಇದರ ಮೂಲಕ ಮೆಹರುನ್‌ನ ಎದೆಗೆ ಹಚ್ಚಿರುವ ಜೀವದ ಉರಿಯನ್ನು ಸಂಕೇತವಾಗಿ ಬಳಸಿದ್ದಾರೆ.
- ಮೆಹರುನ್‌ನ ಆತ್ಮವಿಷಾದ, ನಿರಾಸೆ, ನಿರಾಕರಣೆ, ಪ್ರತಿದಿನದ ತೊಂದರೆಗಳು ಇವೆಲ್ಲವೂ ಅವಳ ಪಾಲಿಗೆ ನೋವಿನ ಕಿಡಿಗಳು. ಅಂತರಂಗದಲ್ಲಿ ದಳ್ಳುರಿ ಹೊತ್ತಿ ಉರಿಯುತ್ತಿದ್ದರೂ ನೋಡುಗರ ಪಾಲಿಗೆ ಮೌನದ ದೀಪ ಮೆಲ್ಲಗೆ ಮಿಣುಕಾಡುವಂತೆ ತೋರುತ್ತದೆ.
- ಕೊನೆಗೆ ಬೆಂಕಿ ಹೊತ್ತಿಸಿಕೊಂಡು 'ಆತ್ಮಹತ್ಯೆ' ಮಾಡಿಕೊಳ್ಳಲು ಹೊರಡುವಾಗ; ಸಮಾಜದ ಕಗ್ಗತ್ತಲ ಕಡಿದು ಬೆಳಕಿನ ಸಂದೇಶ ಸಾರುವ ಹೀನ ಪ್ರಯತ್ನಕ್ಕೆ ಮುಂದಾಗುವಾಗ ಮಗಳು ಸಲ್ಮಾ "ಅಬ್ಬಾಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು, ನಮಗಾಗಿ ಬದುಕಲು ಸಾಧ್ಯವಿಲ್ಲವೇ? ನಮ್ಮನ್ನೆಲ್ಲ ನೀನು ಹೇಗೆ ತಬ್ಬಲಿಯನ್ನಾಗಿ ಮಾಡಲು ಸಾಧ್ಯ ಅಮ್ಮಿ?" ಎಂದು ಕಾಲು ಹಿಡಿದು ಕೇಳುವಾಗ ತನ್ನ ಅಂತರಾಳದ ನಂದಾದೀಪ ಪುನಃ ಮೆಲ್ಲನೆ ಬೆಳಗುವಂತೆ ತೋರುತ್ತದೆ. ಇದು ಹೃದಯದ ಪ್ರಜ್ಞೆಯ ಪುನರುತ್ಥಾನ ಎಂದು ಸಾಬೀತಾಗುತ್ತದೆ.

3. ಅಂಗಸೂಚನೆಗಳ ಬಳಕೆ:

- ಮೌನ, ಕಣ್ಣೀರಿನ ಹರಿವು, ಹೆಜ್ಜೆಯ ತಡವರಿಕೆ – ಇವು ಪಾತ್ರಗಳ ಆಂತರಿಕ ಭಾವವನ್ನು ಬಹುಮಟ್ಟಿಗೆ ಶಬ್ದರಹಿತವಾಗಿ ವಿವರಿಸುತ್ತವೆ. ಉದಾಹರಣೆಗೆ ಮೆಹರುನ್ ಮೌನದ ಮೂಲಕ ತನ್ನ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ. ಇದು ಬಹುಪಾಲು ಶಬ್ದಪೂರಿತ ಸಂವಹನಕ್ಕಿಂತ ಬಲವಾದ ರೂಪಕವಾಗಿ ಓದುಗರ ಮೇಲೆ ಪರಿಣಾಮ ಬೀರುತ್ತದೆ.

4. ವಾತಾವರಣದ ಚಿತ್ರಣ ಮತ್ತು ಬಾಹ್ಯ ಜಗತ್ತಿನ ಪ್ರತಿಬಿಂಬ:

- ಹಜಾರಿನ ಶಾಂತತೆ, ಅಂಗಳದ ಗಿಡಗಳ ದೃಶ್ಯಗಳು, ಕುಳಿತ ಮುಖಗಳು - ಈ ಎಲ್ಲ ದೃಶ್ಯಗಳು ಕಥಾನಾಯಕಿಯಲ್ಲಿ ನಡೆಯುತ್ತಿರುವ ಆಳವಾದ ಒತ್ತಡ ಮತ್ತು ಖಿನ್ನತೆಗೆ ಅಸಹಾಯಕತೆಯನ್ನು ತೋರುವಂತಿವೆ.
- ಆತ್ಮಹತ್ಯೆಗೆ ಸಜ್ಜಾಗಿರುವ ಮೆಹರುನ್‌ಳ ಪ್ರಯತ್ನ ಪೂರ್ವಕ ಮನೆಯ ಸುತ್ತಣ ತಿರುಗಾಟ, ಮತ್ತೆ ಮನೆಯ ಒಳಗಿನಿಂದ ಬೆಂಕಿ ಪೊಟ್ಟಣ ತೆಗೆದುಕೊಂಡು ಬರುವಾಗ ಬಾಗಿಲು ತೆರೆಯುವ ಸನ್ನಿವೇಶ ಮತ್ತೆ ಮತ್ತೆ ಓದಿದಂತೆ ಭಾಸವಾಗುತ್ತದೆ.

5. ಸಾಮಾಜಿಕ ರೂಪಕಗಳು:

- "ಡೋಲಿ ಹೋದ ಮನೆಯಿಂದಲೇ – ಡೋಲಿ ಹೋಗಬೇಕು" ಎಂಬ ಮಾತು, ಹೆಣ್ಣಿನ ಬದುಕಿನಲ್ಲಿ ಹೇಗೆ ಸಮಾಜದ ಮಿತಿಗಳು ನಿರ್ದಿಷ್ಟಗೊಳಿಸುತ್ತವೆ ಎಂಬುದನ್ನು ತೋರಿಸುತ್ತದೆ.
- ಅಡಿಗೆ ಮನೆಯ ಬೆಂಕಿ ಪೊಟ್ಟಣ' - ಅವಳ ಆತ್ಮವಿಲೀನದ (ಆತ್ಮಹತ್ಯೆ ಯತ್ನದ) ತೀವ್ರ ರೂಪಕದಂತೆ ಕಂಡುಬರುತ್ತದೆ.

6. ಅಂತರಂಗ ಮತ್ತು ವೈಚಾರಿಕ ರೂಪಕ:

- "ದೇವರೇ! ನನ್ನ ಇಡೀ ಬದುಕಿನ ಯಾವುದಾದರೂ ಪುಣ್ಯವಿದ್ದರೆ..... ನನ್ನ ಮಗಳ ಬದುಕನ್ನು ನೇರಗೊಳಿಸು" ಎಂಬ ತಾಯಿಯ ಪ್ರಾರ್ಥನೆ – ಇದು ತಾಯಿತನದ ಆಂತರಿಕ ಗಂಭೀರತೆ ಮತ್ತು ಭಾರತೀಯ ಸಾಂಸ್ಕೃತಿಕ ಸಾಮರಸ್ಯದ ಪ್ರತಿರೂಪವಾಗಿದೆ.

ಉಪಸಂಹಾರ:

ಒಟ್ಟಾರೆಯಾಗಿ ಬಾನು ಮುಷ್ತಾಕ್ ಅವರು ಬಳಸಿದ ಸಾಹಿತ್ಯಶೈಲಿ ಮತ್ತು ರೂಪಕಗಳು ಕೇವಲ ಕಲಾತ್ಮಕವಾಗಿ ಅಲ್ಲ, ಬದಲಿಗೆ ನೈಜತೆಯ ಭಾವಪೂರ್ಣ ಪ್ರತಿಬಿಂಬಗಳಾಗಿ ಓದುಗರಲ್ಲಿ ಸಹಾನುಭೂತಿ, ಸಂವೇದನೆ ಮತ್ತು ಸತ್ಯದ ಅರಿವು ಮೂಡಿಸುತ್ತವೆ. "ಎದೆಯ ಹಣತೆ" ಕೇವಲ ಒಂದು ಕಥಾನಕವಲ್ಲ; 'ಹಣತೆ' ಕೇವಲ ಮೆಹರುನ್‌ನ ಎದೆಯಲ್ಲ, ಅದು ಲಕ್ಷೋಪಲಕ್ಷ ಹೆಣ್ಣುಮಕ್ಕಳ ಬಾಳಿನ ಸಂಕಲನದ ಸಂಕೇತವಾಗಿದೆ. ಲೇಖಕಿಯು ಇಲ್ಲಿ ನೈಜತೆಯನ್ನು ನಿಖರವಾಗಿ ಎಳೆದು ತೋರಿಸುವ ಮೂಲಕ ಓದುಗರ ಅಂತರಂಗದಲ್ಲೂ 'ಹಣತೆ' ಹೊತ್ತಿಬಿಡುವಂತೆ ರೂಪುಗೊಳಿಸಿದ್ದಾರೆ.

## ವಿದ್ಯಾರ್ಥಿಗಳೊಂದಿಗೆ ಗೊಂಬೆಗಳ ಪ್ರದರ್ಶನಕ್ಕೆ ಭೇಟಿ.



ನವೆಂಬರ್ 6 ಮತ್ತು 7, 2025ರಂದು, 4ನೆ ತರಗತಿಯ 240 ವಿದ್ಯಾರ್ಥಿಗಳು, 10 ಶಿಕ್ಷಕರು ಮತ್ತು 8 ಸಹಾಯಕ ಸಿಬ್ಬಂದಿಯೊಂದಿಗೆ, ಮೈಸೂರಿನ ವಿಜಯನಗರ 2ನೆ ಹಂತದಲ್ಲಿರುವ 'ಇಂಚರ ಕಲಾಕ್ಷೇತ್ರ'ದಲ್ಲಿರುವ ಹೆಸರಾಂತ ಪೇಪರ್‌ಪಲ್ಪ್ ಗೊಂಬೆಗಳ ಪ್ರದರ್ಶನಕ್ಕೆ ನಮ್ಮ ಶಾಲೆಯಿಂದ ಶೈಕ್ಷಣಿಕ ಹೊರಸಂಚಾರ ಕೈಗೊಂಡೆವು.

ಕಲಾವಿದರಾದ ಶ್ರೀ ಕೆ. ಎಸ್. ರಾಘವೇಂದ್ರ ಅವರು 85 ವರ್ಷದ ಆಸುಪಾಸಿನ ಹಿರಿಯ ವ್ಯಕ್ತಿಗಳು. ತಮ್ಮ ಬಿಡುವಿನ ಸಮಯವನ್ನು ಸದುಪಯೋಗಪಡಿಸಿಕೊಳ್ಳುವ ಮಾರ್ಗವನ್ನು ಕಂಡುಕೊಂಡು ಎಲ್ಲರಿಗೂ ಮಾದರಿಯಾದ ಹಸನ್ಮುಖಿ ಮಾತ್ರವಲ್ಲದೆ ಮೃದುಮಾತಿನ, ಸರಳ ವ್ಯಕ್ತಿತ್ವದ, ತಾಳ್ಮೆ ಇರುವ, ಕನ್ನಡ ಭಾಷೆ, ಸಂಸ್ಕೃತಿಯ ಬಗ್ಗೆ ಅಗಾಧ ಪ್ರೇಮವಿರುವ, ಸೃಜನಶೀಲ ವ್ಯಕ್ತಿ. ತಾವೇ ಸ್ವತಃ ಮರು ಬಳಕೆಯ ಪತ್ರಿಕೆಗಳಿಂದ ತಯಾರಿಸಿದ 500ಕ್ಕೂ ಹೆಚ್ಚು ಗೊಂಬೆಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಗಳ ಮಹಿಮೆ, ದಶಾವತಾರ, ಶ್ರೀಕೃಷ್ಣನ ಬಾಲ ಲೀಲೆ, ದೇವಕಿ ಮತ್ತು ವಸುದೇವರ ಸೆರಮನೆ ವಾಸ, ಕಂಸನ ವಧೆ, ಅಭಿಮನ್ಯುವಿನ ಸಾಹಸ, ಮತ್ತು ಸಮುದ್ರ ಮಂಥನದಿಂದ ಹೊರಬಂದ 14 ರತ್ನಗಳು, ದಶಶಿರ ರಾವಣ ಮತ್ತು ರಾಮನ ನಡುವಿನ ಸಮರ, ಮುಂತಾದ ಕಥೆಗಳನ್ನು ನಿರೂಪಿಸುವ ಗೊಂಬೆಗಳು ನಮ್ಮನ್ನು ಮಾತ್ರವಲ್ಲದೆ ವಿದ್ಯಾರ್ಥಿಗಳನ್ನು ಆಕರ್ಷಿಸಿದವು.

ಶ್ರೀಯುತರು, ಗೊಂಬೆ ತಯಾರಿಕೆಯ ಶ್ರಮದಾಯಕ ಪ್ರಕ್ರಿಯೆಯನ್ನು ವಿದ್ಯಾರ್ಥಿಗಳಿಗೆ ಹೇಳಿಕೊಟ್ಟರು. ಮೊದಲನೆಯದಾಗಿ ತೆಳುವಾದ ತಂತಿಗಳನ್ನು ಬಳಸಿ ಆರ್ಮೇಚರ್‌ಗಳನ್ನು ನಮಗೆ ಬೇಕಾದ ಬೊಂಬೆ ಆಕಾರದಲ್ಲಿ ರಚಿಸುವುದು. ತ್ಯಾಜ್ಯ ಕಾಗದದ ಚೂರುಗಳನ್ನು ಎರಡು ದಿನ ನೀರಿನಲ್ಲಿ ನೆನೆಯಲು ಹಾಕಿ, ಮೃದುವಾದ ನಂತರ ನೀರಿನಿಂದ ಚೂರುಗಳನ್ನು ಬೇರ್ಪಡಿಸಿ ಅದಕ್ಕೆ ಫೆವಿಕಾಲ್, ಪಟ್ಟಿ ಪುಡಿ ಮತ್ತು ಜೋಳದ ಹಿಟ್ಟು ಸೇರಿಸಿ ಚೆನ್ನಾಗಿ ನಾದಿ ಎರಡು ದಿನ ಹಾಗೇ ಇಡಬೇಕು. ಎರಡು ದಿನದ ನಂತರ ಅದನ್ನು ಮತ್ತೆ ನಾದಬೇಕು. ಈಗ ಅದು ಮನೆಯಲ್ಲೇ ಸಿದ್ಧವಾದ ಹೋಮ್‌ಮೇಡ್ ಕ್ಲೇ ಆಯಿತು. ಯಾವ ಗೊಂಬೆಯನ್ನು ತಯಾರಿಸಬೇಕೋ ಅದಕ್ಕೆ ಸೂಕ್ತವಾದ ಮತ್ತು ಹೊಂದಿಕೆಯಾಗುವ ಬಣ್ಣಗಳನ್ನು ಸೇರಿಸುವುದು. ನಂತರ ವಿವಿಧ ಆಕಾರದ ಬೊಂಬೆಗಳ ಆರ್ಮೇಚರ್‌ಗಳಿಗೆ ಆ ಪತ್ರಿಕೆಯ ಮುದ್ದೆಯನ್ನು ಮೆತ್ತಿ, ಮುಖ, ಕಣ್ಣು, ಮೂಗು, ಬಾಯಿ, ಕೈ, ಕಾಲುಗಳನ್ನು ರಚಿಸುವುದು. ನಂತರ ದರ್ಜಿಯ ಬಳಿ ಹೋಗಿ ಅವರಿಗೆ ಬೇಡವಾದ ಬಟ್ಟೆಯ ಚೂರುಗಳನ್ನು ತಂದು ಕೈಯಲ್ಲೇ ಬೊಂಬೆಗೆ ಬೇಕಾದ ಆಕಾರದಲ್ಲಿ ಹೊಲಿಯುವುದು. ಶ್ರೀ ರಾಘವೇಂದ್ರ ಅವರು ವಿವರಣೆಯನ್ನು ನೀಡುತ್ತಿರುವಾಗ, ವಿದ್ಯಾರ್ಥಿಗಳು ಚಿಂತನಾಶೀಲ ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮ ಸಂದೇಹಗಳನ್ನು ಪರಿಹರಿಸಿಕೊಂಡರು. ವಿದ್ಯಾರ್ಥಿಗಳು ಮತ್ತು ಶ್ರಿಯುತರ ನಡುವೆ ಉತ್ತಮ ಸಂವಾದ ನಡೆಯಿತು. ಬೊಂಬೆಗಳನ್ನು ತಯಾರಿಸುವ ಕಾರ್ಯಕ್ಕೆ ಅವರ ಶ್ರೀಮತಿ ಗೀತಾರವರು ಕೈಜೋಡಿಸಿದ್ದು ಮಾತ್ರವಲ್ಲದೆ ಸದಾ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ ಎಂದು ಶ್ಲಾಘಿಸಲು ಅವರು ಮರೆಯಲಿಲ್ಲ. ಅವರು ವಿದ್ಯಾರ್ಥಿಗಳ ಮಾತಿನ ವೈಖರಿಯನ್ನು ಮೆಚ್ಚಿಕೊಂಡರು. ಅಲ್ಲಿದ್ದ ಬೊಂಬೆಗಳ ವೇಷಭೂಷಣ, ಬೊಂಬೆಗಳನ್ನು ಜೋಡಿಸಿದ ರೀತಿ ಎಲ್ಲರ ಮನ ಸೆಳೆಯಿತು. ಗೊಂಬೆಗಳನ್ನು ನೋಡಿ ನಮಗೆಲ್ಲಾ ಅಚ್ಚರಿಯಾಯಿತು. ಅಂದವಾಗಿ, ಸೂಕ್ಷ್ಮವಾಗಿ ಗೊಂಬೆಗಳನ್ನು ತಯಾರಿಸಿದ್ದರು. ಒಂದೊಂದು ಗೊಂಬೆಗಳ ಗುಂಪು ಒಂದೊಂದು ಪುರಾಣದ ಕಥೆಗಳನ್ನು ಪ್ರತಿನಿಧಿಸುತ್ತಿದ್ದವು. ಆ ಗೊಂಬೆಗಳ ಗುಂಪುಗಳಿಗೆ ಸಂಬಂಧಿಸಿದಂತೆ ಕಥೆಗಳನ್ನು ಸಹ ಅಲ್ಲಿಯೇ ಮುದ್ರಿಸಿ ಇಡಲಾಗಿತ್ತು. ಬೊಂಬೆಗಳನ್ನು ವೀಕ್ಷಿಸಲು ಬಂದಂತಹ ವೀಕ್ಷಕರು ಬೊಂಬೆಗಳನ್ನು ವೀಕ್ಷಿಸುತ್ತಾ, ಅಲ್ಲಿ ಮುದ್ರಿಸಿರುವ ವಿಷಯಗಳನ್ನು ಓದುತ್ತಾ, ಕಥೆಗಳನ್ನು ಅರ್ಥೈಸಿಕೊಳ್ಳಬಹುದಾಗಿತ್ತು. ಈ ಎಲ್ಲಾ ಗೊಂಬೆಗಳನ್ನು ತಮ್ಮ ಮನೆಯ ಹಜಾರದಲ್ಲಿಯೇ ಪ್ರದರ್ಶನಕ್ಕೆ ಇಟ್ಟಿದ್ದರು. ಪ್ರತಿ ವರ್ಷ ದಸರ ಗೊಂಬೆ ಪ್ರದರ್ಶನದಲ್ಲಿಯು ಈ ಎಲ್ಲ ಗೊಂಬೆಗಳನ್ನು ಇಡುವ ಸಂಪ್ರದಾಯವನ್ನು ಮಕ್ಕಳಿಗೆ ವಿವರಿಸಿದರು. ಇದು ಮೈಸೂರಿನ 'ಪಾರಂಪರಿಕ ಗೊಂಬೆ ಹಬ್ಬ' ಎಂದು ತಿಳಿಸಿದರು. ಶಾಲೆಯಲ್ಲಿ ನೀಡುವ ಕಲೆ, ಇತಿಹಾಸ, ಕನ್ನಡ, ವಿಜ್ಞಾನ, ಪರಿಸರ ವಿಷಯಕ್ಕೆ ಸಂಬಂಧಿಸಿದ ಯೋಜಿತ ಕಾರ್ಯದಲ್ಲಿ ಈ ರೀತಿ ಗೊಂಬೆಗಳನ್ನು ತಯಾರಿಸಿ ನಿಮ್ಮ ಕರಕೌಶಲವನ್ನು ಪ್ರದರ್ಶಿಸಿ ಎಂದು ಮಕ್ಕಳಿಗೆ ಸಲಹೆ ನೀಡಿದರು. ಇಷ್ಟವಾದ, ಕಲ್ಪನೆಯ ಬೊಂಬೆಗಳನ್ನು ತಯಾರಿಸಿ ಅದಕ್ಕೆ ಹೊಂದಿಕೆ ಆಗುವ ಕಥೆಗಳನ್ನು ಹೇಳಲು ಪ್ರೇರೇಪಿಸಿದರು. ನಂತರ ಶ್ರೀಕೃಷ್ಣನ ಬಾಲ ಲೀಲೆಯ ಕಥೆಯನ್ನು ಸೊಗಸಾಗಿ ಹೇಳಿದರು. ಅವರ ಈ ಪ್ರತಿಭೆಗೆ ಹಲವು ಸಂಘ ಸಂಸ್ಥೆಗಳು ಅನೇಕ ಪ್ರಶಸ್ತಿಗಳನ್ನು ನೀಡಿವೆ. ಶ್ರೀ ರಾಘವೇಂದ್ರ ಅವರು ಬೊಂಬೆಗಳನ್ನು ತಯಾರಿಸುವ ಕಲೆಗೆ ಮಾತ್ರ ಸೀಮಿತವಾಗದೆ, ಮನೆಯ ಸುತ್ತ ಹಲವು ಜಾತಿಯ ಹೂ ಗಿಡಗಳನ್ನು ಬೆಳೆಸಿದ್ದಾರೆ. ಶ್ರದ್ಧೆ ಮತ್ತು ಆಸಕ್ತಿಯಿದ್ದರೆ ನಾವು ಏನನ್ನಾದರೂ ಸಾಧಿಸಬಹುದು, ಅದರಿಂದ ನಮ್ಮ ಆರೋಗ್ಯವು ಚೆನ್ನಾಗಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.



ಅವರ ಈ ಹವ್ಯಾಸಗಳು ನಮಗೆಲ್ಲರಿಗೂ ಸ್ಫೂರ್ತಿ ನೀಡಿದವು. ವಿದ್ಯಾರ್ಥಿಗಳಿಗೆ ಮತ್ತಷ್ಟು ಕಥೆಗಳನ್ನು ಕೇಳ ಬೇಕೆನಿಸಿತು. ಶ್ರೀ ರಾಘವೇಂದ್ರ ಅವರು ನೀಡಿದ ಲಡ್ಡುಗಳನ್ನು ಹಾಗೂ ಮಿಠಾಯಿಗಳನ್ನು ಚಪ್ಪರಿಸುತ್ತಾ, ಗೊಂಬೆಗಳನ್ನು, ಅವುಗಳಿಗೆ ಹೊಂದಿಕೆಯಾಗುವ ಕಥೆಗಳನ್ನು ಮೆಲುಕು ಹಾಕುತ್ತಾ ಶಾಲೆಗೆ ಹಿಂದಿರುಗಿದೆವು. ಈ ಹೊರಸಂಚಾರವು ಎಲ್ಲರಿಗೂ ಸಂತೋಷವನ್ನು ನೀಡಿತು.

**ಸುಮಿತ್ರಾ ಕೆ ಬಿ**
ಕನ್ನಡ ಶಿಕ್ಷಕಿ

## ಕಥೆ ಕೇಳೋಣ ಬನ್ನಿ



ಕನ್ನಡ ಸಾಹಿತ್ಯದಲ್ಲಿ ಕಥೆಗಳು ಪ್ರಮುಖ ಭಾಗವಾಗಿವೆ. ಕಥೆಗಳ ಮುಖ್ಯ ಉದ್ದೇಶ ಮಕ್ಕಳಲ್ಲಿ ಸಾಂಸ್ಕೃತಿಕ ಪರಂಪರೆ, ಶಿಕ್ಷಣ, ಮೌಲ್ಯಗಳು, ಭಾಷಾ ಕೌಶಲ್ಯ, ಮಾನಸಿಕ ಆರೋಗ್ಯ ಹಾಗೂ ಸಂವಹನ ಕೌಶಲ್ಯವನ್ನು ಬೆಳೆಸುವುದಾಗಿದೆ. ಕಥೆಗಳನ್ನು ಕೇಳುವ ಮೂಲಕ ಮಕ್ಕಳು ಆಲಿಸುವ ಹಾಗೂ ತಾಳ್ಮೆಯಿಂದ ಕಲಿಯುವ ಕೌಶಲವನ್ನು ಬೆಳೆಸಿಕೊಳ್ಳುತ್ತಾರೆ.


ಎಕ್ಸೆಲ್ ಪಬ್ಲಿಕ್ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ಗಣೇಶ್ ಭಟ್ ಅವರು ದಿನಾಂಕ 18.7.2025 ರಂದು 5ನೆಯ ತರಗತಿಯ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೂ ಎರಡು ಕಥೆಗಳನ್ನು ಹೇಳುವ ಮೂಲಕ ಮನರಂಜಿಸಿದರು.



ಡಾ. ಅನುಪಮಾ ನಿರಂಜನರವರು ಬರೆದಿರುವ 365 ಕಥೆಗಳ ಶಿಶುಸಾಹಿತ್ಯದ ಆಷಾಢ ಸಂಪುಟಗಳ 'ದಿನಕ್ಕೊಂದು ಕಥೆ' ಕಥಾಮಾಲಿಕೆಯಲ್ಲಿ ಬರುವ, 'ಅಜ್ಜಿ ಮತ್ತು ಮಕ್ಕಳ ಕಥೆ' ಹಾಗು 'ರಾಜ ಮತ್ತು ಮಕ್ಕಳು' ಎಂಬ ಕಥೆಗಳನ್ನು ಹೇಳುವ ಮೂಲಕ ಮಕ್ಕಳಲ್ಲಿ ಕುತೂಹಲ ಮೂಡಿಸಿ, ಕಲ್ಪನೆಗಳ ಯೋಚನಾಲಹರಿ ಮೊಳಕೆಯೊಡೆಯುವಂತೆ ಮಾಡಿದರು. ಅಲ್ಲದೆ ವಿದ್ಯಾರ್ಥಿಗಳಲ್ಲಿ ಉನ್ನತ ಮಟ್ಟದ ಆಲೋಚನೆಗಳು, ಭಾವನೆಗಳು ಬೆಳೆಯಲು ಸಹಕಾರಿಯಾದರು. ವಿದ್ಯಾರ್ಥಿಗಳು ತಮ್ಮ ಪದಸಂಪತ್ತನ್ನು ಹೆಚ್ಚಿಸಿಕೊಳ್ಳಲು ಕಥೆಗಳನ್ನು ಓದುವ ಮತ್ತು ಆಲಿಸುವ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕೆಂದು ಸಲಹೆ ನೀಡಿದರು.

**ಚಂದ್ರಕಲಾ ಡಿ ವಿ**
ಕನ್ನಡ ಶಿಕ್ಷಕಿ

## ನಿಗೂಢ ಮನುಷ್ಯರು




ಪರಿಚಯ:

ನವ್ಯೋತ್ತರ ಕನ್ನಡ ಸಾಹಿತ್ಯದ ಪ್ರಮುಖ ಕತೆಗಾರರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ತಮ್ಮ ವಿಭಿನ್ನ ಚಿಂತನೆ, ವೈಜ್ಞಾನಿಕ ದೃಷ್ಟಿ ಹಾಗೂ ಜೀವಕೇಂದ್ರಿತ ಸಾಹಿತ್ಯದ ಮೂಲಕ ವಿಶಿಷ್ಟ ಸ್ಥಾನ ಪಡೆದಿದ್ದಾರೆ. 'ನಿಗೂಢ ಮನುಷ್ಯರು' ಎಂಬ ಕಿರುಕಾದಂಬರಿ (ನೀಳ್ಗತೆ) ಅವರ ಈ ಸಾಹಿತ್ಯ ದೃಷ್ಟಿಯ ಅತ್ಯುತ್ತಮ ಉದಾಹರಣೆ. ಮನುಷ್ಯ ಮತ್ತು ಪ್ರಕೃತಿಯ ನಡುವಿನ ನಿಗೂಢ ಸಂಬಂಧವನ್ನು ವಿಮರ್ಶಾತ್ಮಕವಾಗಿ ಅನಾವರಣಗೊಳಿಸುವ ಕೃತಿಯಾಗಿ ಇದು ಗಮನ ಸೆಳೆಯುತ್ತದೆ.

ವಿಷಯಸಾರ (ಕಥಾವಸ್ತು):

ಈ ಕಾದಂಬರಿಯಲ್ಲಿ ಮಲೆನಾಡು-ಕೊಡಗು ಪ್ರದೇಶದ ಹಿನ್ನೆಲೆಯಲ್ಲಿನ ಕಾಡು, ಪ್ರಕೃತಿ ಹಾಗೂ ಅಲ್ಲಿ ಬದುಕುವ ಜನರ ಜೀವನವನ್ನು ಚಿತ್ರಿಸಲಾಗಿದೆ. ರಂಗಪ್ಪ, ಜಗನ್ನಾಥ, ಗೋಪಾಲಯ್ಯ, ಶಾರೀ, ಕಾಂಪ್ರ, ಕರಿಯ ಮುಂತಾದ ಪಾತ್ರಗಳ ಮೂಲಕ ಮನುಷ್ಯನ ಬದುಕಿನ ನಿಗೂಢತೆ, ಭಯ, ಅನುಮಾನ ಮತ್ತು ಸ್ವಾರ್ಥಗಳು ಹೊರಹೊಮ್ಮುತ್ತವೆ. ಕಥೆಯಲ್ಲಿ ಹಲವು ರಹಸ್ಯಗಳು ಬಿಚ್ಚಿಕೊಳ್ಳುವಂತೆ ಕಂಡರೂ, ಅವು ಸಂಪೂರ್ಣವಾಗಿ ಸ್ಪಷ್ಟಗೊಳ್ಳದೆ, ಮತ್ತಷ್ಟು ಸಂಕೀರ್ಣವಾಗುತ್ತಾ ಹೋಗುತ್ತವೆ. ಈ ಮೂಲಕ ನಿಗೂಢತೆಯೇ ಕಥೆಯ ಕೇಂದ್ರಬಿಂದು ಆಗುತ್ತದೆ.

ವಿಷಯ ವಿಶ್ಲೇಷಣೆ:

ಕಾದಂಬರಿಯ ಮುಖ್ಯ ವಿಷಯ ಮನುಷ್ಯ-ಮನುಷ್ಯ ಹಾಗೂ ಮನುಷ್ಯ-ಪ್ರಕೃತಿ ನಡುವಿನ ನಿಗೂಢ ಸಂಬಂಧ. ಒಟ್ಟಾಗಿ ಬದುಕಿದರೂ ಪರಸ್ಪರರನ್ನು ಸಂಪೂರ್ಣವಾಗಿ ಅರಿಯಲಾಗದ ಮನುಷ್ಯನ ಅಸಹಾಯಕತೆಯನ್ನು ತೇಜಸ್ವಿಯವರು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಇದರ ಜೊತೆಗೆ ಮಾನವನ ಸ್ವಾರ್ಥ, ಧರ್ಮಾಂಧತೆ, ಕಳ್ಳಸಾಗಣೆ, ಹಿಂಸಾಚಾರ, ದ್ವೇಷ-ಅಸೂಯೆ ಇತ್ಯಾದಿ ಸಾಮಾಜಿಕ ಸಮಸ್ಯೆಗಳ ಮೇಲೆ ಲೇಖಕರು ತೀವ್ರವಾದ ವಿಮರ್ಶೆ ಮಾಡಿದ್ದಾರೆ. ಮಲೆಗೌಳಿಗರ ಹುಡುಗಿಯ ಮೇಲಿನ ಅತ್ಯಾಚಾರದ ಘಟನೆ ಸಮಾಜದ ಅಮಾನವೀಯ ಮುಖವನ್ನು ಸ್ಪಷ್ಟಪಡಿಸುತ್ತದೆ.

ಪಾತ್ರ ಮತ್ತು ಪರಿಸರ ಚಿತ್ರಣ:

ಪಾತ್ರಗಳು ಕಥೆಯ ಸಾಧನಗಳಲ್ಲ, ಜೀವಂತ ವ್ಯಕ್ತಿತ್ವಗಳಾಗಿ ಮೂಡಿಬಂದಿವೆ. ಗೋಪಾಲಯ್ಯನ ಅನುಭವಗಳು ಮಾನವನ ಜಟಿಲ ಮನಸ್ಸನ್ನು ಪ್ರತಿಬಿಂಬಿಸುತ್ತವೆ. ಜಗನ್ನಾಥನ ಪಾತ್ರದ ಮೂಲಕ ಬರೆಹಗಾರರ ಬದುಕು ಮತ್ತು ಸಾಹಿತ್ಯ ಲೋಕದ ಸಂಕೀರ್ಣತೆಗಳನ್ನು ಲೇಖಕರು ಪರೋಕ್ಷವಾಗಿ ವಿವರಿಸಿದ್ದಾರೆ.

ಪ್ರಕೃತಿ ಇಲ್ಲಿ ಕೇವಲ ಹಿನ್ನೆಲೆಯಲ್ಲ; ಅದು ಸಕ್ರಿಯ ಪಾತ್ರವಹಿಸುತ್ತದೆ. ಬೆಟ್ಟ, ಗುಡ್ಡಗಳ ಕುಸಿತ, ನೆಲಪಾತ, ಕಾಡಿನ ಅಪಾಯಗಳು-
**All these create a constant sense of death-shadow over human life.**

**ಶೈಲಿ ಮತ್ತು ಭಾಷೆ:**

ತೇಜಸ್ವಿಯವರ ಹಾಸ್ಯಮಿಶ್ರಿತ ಶೈಲಿ, ವೈಜ್ಞಾನಿಕ ದೃಷ್ಟಿಕೋನ, ಮತ್ತು ಗ್ರಾಮೀಣ ನೆಲದ ಭಾಷೆ ಕೃತಿಗೆ ಸಹಜತೆ ಮತ್ತು ತೀವ್ರತೆಯನ್ನು ನೀಡಿವೆ. ನಿರೂಪಣೆಯಲ್ಲಿ ಅಲಂಕಾರಿಕತೆಯ ಬದಲು ಸ್ಪಷ್ಟತೆ ಮತ್ತು ತೀಕ್ಷ್ಣತೆ ಮೇಲುಗೈ ಸಾಧಿಸಿದೆ. ನಿಗೂಢತೆಯನ್ನು ಕೃತಕವಾಗಿ ಸೃಷ್ಟಿಸದೆ, ಜೀವನದ ಸಹಜ ಅಸ್ಪಷ್ಟತೆಯನ್ನೇ ಸಾಹಿತ್ಯವಾಗಿಸಿದ್ದಾರೆ.

**ಮೌಲ್ಯಮಾಪನ:**

ಓದುಗರಿಗೆ ಚಿಂತನೆಗೆ ಅವಕಾಶ ನೀಡುವ ಈ ಕೃತಿ, ನಿಗೂಢತೆಯನ್ನೇ ಸತ್ಯವೆಂದು ಒಪ್ಪಿಕೊಳ್ಳುವ ದೃಷ್ಟಿಯನ್ನು ನೀಡುತ್ತದೆ. ಸಮಾಜದ ದೋಷಗಳನ್ನು ತೋರಿಸುವಲ್ಲಿ ತೇಜಸ್ವಿಯವರು ಉಪದೇಶಕರಾಗದೆ, ವೀಕ್ಷಕರಾಗಿ ನಿಲ್ಲುತ್ತಾರೆ. ಇದುವೇ ಈ ಕೃತಿಯ ಸಾಹಿತ್ಯಮೌಲ್ಯವನ್ನು ಹೆಚ್ಚಿಸುತ್ತದೆ.

**ಸಮಾಪ್ತಿ:**

ಒಟ್ಟಿನಲ್ಲಿ, 'ನಿಗೂಢ ಮನುಷ್ಯರು' ಸುಂದರ ಪ್ರಕೃತಿಯೊಳಗೆ ಅಡಗಿರುವ ಕರಾಳ ಸತ್ಯಗಳು ಹಾಗೂ ಮನುಷ್ಯನ ಅಂತರಂಗದ ಅಜ್ಞಾತ ಆಯಾಮಗಳನ್ನು ಯಶಸ್ವಿಯಾಗಿ ಅನಾವರಣಗೊಳಿಸುವ ಕಾದಂಬರಿ. "ಅನುಭವವನ್ನು ಹುಡುಕಿಕೊಂಡು ಹೊರಟವರು ಅದರ ಕರಾಳ ರಹಸ್ಯಗಳಿಗೆ ಹೆದರಿದರೆ ಹೇಗೆ?" ಎಂಬ ಪ್ರಶ್ನೆಯೊಂದಿಗೆ ಓದುಗರನ್ನು ಸ್ವಪರಿಶೀಲನೆಗೆ ದೂಡುವ ಈ ಕೃತಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ.




**ಶ್ರೀಮತಿ ಸಿಂಧು ಕೆ ಎಲ್**
ಕನ್ನಡ ಶಿಕ್ಷಕಿ

## ಸಂದರ್ಶನ

ಶ್ರೀಯುತ ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟರವರು ಬರೆದಿರುವ "ಸಾರ್ಥಕ ಬದುಕಿನ ಸಾಧಕ-ಡಿವಿಜಿ" ಎಂಬ ಗದ್ಯಭಾಗವು ಎಂಟನೆಯ ತರಗತಿಯ ಪಠ್ಯದಲ್ಲಿದ್ದು ಇದು ಡಿ ವಿ ಗುಂಡಪ್ಪನವರ ಬದುಕಿನ ಯಶೋಗಾಥೆಯನ್ನು ತಿಳಿಸಿಕೊಡುತ್ತದೆ.

"ಡಿವಿಜಿಯವರೇನು ದೊಡ್ಡದೊಡ್ಡ ಡಿಗ್ರಿ ಪಡೆದವರಲ್ಲ, ಎಸ್.ಎಸ್. ಎಲ್.ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ. ಸರ್ಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತೂ ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು."

ಈ ಮಾತಿಗೆ ಪೂರಕವಾಗಿ ವಿದ್ಯಾರ್ಥಿಗಳಲ್ಲಿ ಯಶಸ್ಸಿನ ಜೀವನಕ್ಕೆ ಹಣ, ವಿದ್ಯೆ, ಅಧಿಕಾರ ಇವುಗಳಲ್ಲಿ ಯಾವುದು ಮುಖ್ಯ ಎಂಬ ಪ್ರಶ್ನೆ ಮೂಡಿತು. ಅದಕ್ಕಾಗಿಯೇ ತಮ್ಮ ಸುತ್ತಮುತ್ತಲಿನ ಯಾರಾದರೂ ಒಬ್ಬ ವ್ಯಕ್ತಿ ತಮಗೆ ಮಾದರಿ ಎನಿಸಿದರೆ ಅವರನ್ನು ಸಂದರ್ಶಿಸಿ ಅವರ ಅಭಿಪ್ರಾಯವನ್ನು ಕಲೆಹಾಕುವ ಸಂದರ್ಶನವನ್ನು ಏರ್ಪಡಿಸಿದೆವು. ಅವುಗಳನ್ನು ತರಗತಿಯಲ್ಲಿ ಪ್ರಸ್ತುತ ಪಡಿಸಲಾಯಿತು. ಕೊನೆಯ ಒಕ್ಕೂರಲಿನ ತೀರ್ಮಾನವೆಂದರೆ "ಬದುಕಿಗೆ ಬೇಕಾಗಿರುವುದು ನೆಮ್ಮದಿ ಮಾತ್ರವೇ!" ಅದಕ್ಕೆ ಬೇಕಾದ ಅವಶ್ಯಕತೆಗಳನ್ನು ನಾವೇ ಆಯ್ಕೆ ಮಾಡಿಕೊಳ್ಳಬೇಕು ಇದು ವ್ಯಕ್ತಿವ್ಯಕ್ತಿಗಳಿಗೆ ಭಿನ್ನವಾಗಿರುತ್ತದೆ ಎಂಬುದನ್ನು ಅರಿತೆವು.



## ರೇಡಿಯೋ ಕಾರ್ಯಕ್ರಮ

ಕನ್ನಡ ವಿಭಾಗವು ಈ ಬಾರಿ 2025 - 26ನೆಯ ಸಾಲಿನಲ್ಲಿ ವರ್ಷಪೂರ್ತಿ ಪ್ರತಿ ಮಂಗಳವಾರದಂದು ವಿದ್ಯಾರ್ಥಿಗಳಿಂದ ರೇಡಿಯೋ ಕಾರ್ಯಕ್ರಮ ನಡೆಯುತ್ತಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳು ಪೂರ್ವನಿರ್ಧಾರಿತವಾದಂತೆ, ನಿರ್ದಿಷ್ಟ ಯೋಜನೆಯೊಂದಿಗೆ, ವಿಷಯಕ್ಕನುಗುಣವಾಗಿ ಸ್ಪಷ್ಟವಾಗಿ ಪ್ರಸ್ತುತಪಡಿಸುತ್ತಿದ್ದಾರೆ. ಇದುವರೆಗೆ ಮೈಲಾರ ಮಹಾದೇವ, ಅರುಣಾ ಅಸಫ್ ಅಲಿ, ರಾಷ್ಟ್ರೀಯ ಹಿನ್ನೆಲೆಯಲ್ಲಿ ಗಣೇಶ ಹಬ್ಬ, ಗಣರಾಜ್ಯೋತ್ಸವ, ಪಂಚತಂತ್ರ ಕಥೆಗಳು, ಗಾದೆಮಾತುಗಳು, ಕನ್ನಡದ ಕವಿಗಳು.. ಇವೇ ಮೊದಲಾದ ವಿಷಯಗಳನ್ನಾಧರಿಸಿ, ಕಾರ್ಯಕ್ರಮ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಎಲ್ಲಾ ತರಗತಿಯ ವಿದ್ಯಾರ್ಥಿಗಳ ಸಹಭಾಗಿತ್ವ - ಶಿಕ್ಷಕರ ಮಾರ್ಗದರ್ಶನವು, ಸಹಪಾಠಿಗಳ - ಸಹಶಿಕ್ಷಕರ ಪ್ರೇರಣೆಯು ಕಾರ್ಯಕ್ರಮದ ಯಶಸ್ಸಿಗೆ ಕಾರಣವಾಗಿದೆ.

ವಿದ್ಯಾರ್ಥಿಗಳಲ್ಲಿ ಸ್ಪಷ್ಟ ಉಚ್ಚಾರಣೆ, ಉತ್ತಮ ಓದುಗಾರಿಕೆ ಕೌಶಲ್ಯವನ್ನು ಬೆಳೆಸುವುದು, ಆತ್ಮವಿಶ್ವಾಸವನ್ನು ಬೆಳೆಸುವುದು, ವಿಷಯಜ್ಞಾನವನ್ನು ಬೆಳೆಸುವುದು ಈ ರೇಡಿಯೋ ಕಾರ್ಯಕ್ರಮದ ಮುಖ್ಯ ಉದ್ದೇಶಗಳಾಗಿವೆ. ಇದರಿಂದ ವಿದ್ಯಾರ್ಥಿಗಳು ಭಾಷಾ ಕಲಿಕೆಯಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದು, ಮಾತುಗಾರಿಕೆ ಕೌಶಲ್ಯ ಬೆಳೆದಿದೆ. ಶಬ್ದಸಂಪತ್ತು ಹೆಚ್ಚುವುದರ ಜೊತೆಗೆ, ಸಹಕಾರ ಮನೋಭಾವವು ಬೆಳೆದಿದೆ. ಒಟ್ಟಾರೆ ವಿದ್ಯಾರ್ಥಿಗಳ ಕನ್ನಡ ಭಾಷಾ ಪ್ರಬುದ್ಧತೆಗೆ, ಭಾಷಾಭಿಮಾನಕ್ಕೆ ಇದು ಕೈಗನ್ನಡಿಯಾಗಿದೆ.

